ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ ಮಾಲಿಕೆ

# ಜೈನಕಥಾಸಾಹಿತ್ಯ ಮತ್ತು ಜಾನಪದ

ಡಾ. ಎಸ್. ಪಿ. ಪದ್ಮಪ್ರಸಾದ್



ಕರ್ನಾಟಕ ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ ಬೆಂಗಳೂರು ೫೬೦೦೦೨

ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ-೮

# ಜೈನಕಥಾಸಾಹಿತ್ಯ ಮತ್ತು ಜಾನಪದ

ಡಾ. ಎಸ್.ಪಿ. ಪದ್ಮಪ್ರಸಾದ್

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು - ೫೬೦ ೦೦೨

*JAINAKATHA SAHITYA MATTU JANAPADA* (Classic Literature & Folklore Series-8) : *Written By. Dr. S. P. Padmaprasad Pub. M.S. Siddegowda Registrar, Janapada and Yakshagana Academy, Nrupatunga Road, Bangalore - 560 002.*

Pages XIII + 76 Price : Rs. 25/

© Publisher

*ಪ್ರಧಾನ ಸಂಪಾದಕರು :*

ಪ್ರೊ. ಎಚ್. ಜೆ. ಲಕ್ಕಪ್ಪಗೌಡ

*ಸಂಪಾದಕರು :*

ಪ್ರೊ. ಹಂಪ. ನಾಗರಾಜಯ್ಯ

ಮೊದಲ ಮುದ್ರಣ : ೧೯೯೭

ಬೆಲೆ : ರೂ. ೨೫/-

**ಛಾಯಾಕ್ಷರ ಜೋಡಣೆ:**

ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು - ೪೦ ✆ : 3402575

**ಮುದ್ರಕರು :**

ಸ್ನೇಹಾ ಪ್ರಿಂಟರ್ಸ್

೨೨, ೨ನೇ ಮೈನ್, ಅತ್ತಿಗುಪ್ಪೆ

ವಿಜಯನಗರ ೨ನೇ ಹಂತ

ಬೆಂಗಳೂರು - ೪೦ ✆ : 3302417

# ಪ್ರಧಾನ ಸಂಪಾದಕರ ಮಾತು

೧

ಲೋಕದ ಜ್ಞಾನ - ವಿಜ್ಞಾನಗಳ ತಾಯಿಬೇರು ಜಾನಪದ ಎಂಬುದು ಈಗಾಗಲೇ ಎಲ್ಲರಿಗೂ ಗೊತ್ತಿರುವ ಸಂಗತಿ. ಎಲ್ಲಾ ಸಾಹಿತ್ಯ, ಕಲೆ, ಸಮಾಜ ವಿಜ್ಞಾನಗಳು ಹಾಗೂ ಕೆಲಮಟ್ಟಿಗೆ ಎಲ್ಲಾ ಜೀವ ವಿಜ್ಞಾನಗಳು ಜಾನಪದದ ಪ್ರೇರಣೆಯಿಂದ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ, ಮುಖ್ಯ ಉದ್ದೇಶವನ್ನು ಎತ್ತರಿಸಿಕೊಂಡಿವೆ, ಸತ್ವವನ್ನು ಸಮೃದ್ಧಿಸಿಕೊಂಡಿವೆ ಎಂಬುದನ್ನು ಮರೆಯುವಂತಿಲ್ಲ. ಹಾಗೆಯೇ ಇದು ನಮ್ಮ ಸಾಹಿತ್ಯದ ಎಲ್ಲಾ ಸ್ತರಗಳಲ್ಲಿಯೂ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಉಸಿರನ್ನು ಬೆರೆಸಿದೆ ಎಂಬುದು ಆಳವಾದ ಸಂಶೋಧನೆಯ ಮೂಲಕ ವಿದಿತವಾಗಿದೆ.

೨

ಶಿಷ್ಟ ಸಾಹಿತ್ಯ ಅಕ್ಷರಸ್ಥರ ಸೃಷ್ಟಿಯಾದರೆ ಜನಪದ ಸಾಹಿತ್ಯ ಅನಕ್ಷರಸ್ಥರ ಸೃಜನಶೀಲ ಪ್ರತಿಭೆಯ ಅತಿ ಸಹಜವಾದ ಶಕ್ತ ಅಭಿವ್ಯಕ್ತಿ. ಆದ್ದರಿಂದ ಶಿಷ್ಟ ಸಾಹಿತ್ಯ ಹುಟ್ಟುವ ಮೊದಲೇ ಆದಿ ಮಾನವರು ತಮ್ಮ ದೈನಂದಿನ ನೋವು - ನಲಿವುಗಳನ್ನು, ಅನಿಸಿಕೆ-ಅನುಭವಗಳನ್ನು, ಕನಸು- ಕಲ್ಪನೆಗಳನ್ನು, ಕ್ರಿಯೆ-ಪ್ರತಿಕ್ರಿಯೆಗಳನ್ನು ಮೌಖಿಕವಾಗಿ ಹಾಡಿನ ಮೂಲಕ, ಕಥೆಯ ಮೂಲಕ, ಗಾದೆ ಒಗಟು ಒಡಪುಗಳ ಮೂಲಕ ತೋಡಿಕೊಂಡರು. ಇದು ಆಡು ಮಾತಿಗಿಂತ ವಿಶೇಷವಾದ ಧ್ವನಿಯನ್ನು, ಬನಿಯನ್ನು, ಶಕ್ತಿಯನ್ನು, ಪರಿಣಾಮವನ್ನು, ಹೊಸ ಹೊಳಹುಗಳನ್ನು ಒಳಗೊಂಡ ಕಾರಣದಿಂದ ಅವುಗಳನ್ನು ಮರೆಯುವುದು ಸುಲಭವಾಗಲಿಲ್ಲ. ಹೀಗಾಗಿ ಅವುಗಳನ್ನು ಮೊದಲು ಕೇಳಿದ ಜನ ಮತ್ತೊಬ್ಬರಿಗೆ,

ಮಗದೊಬ್ಬರಿಗೆ, ಇಡೀ ಸಮುದಾಯಕ್ಕೆ ತಮ್ಮ ಕಂಠ ಮತ್ತು ನಾಲಿಗೆಗಳ ಮೂಲಕ ದಾಟಿಸುತ್ತಾ ಬಂದರು. ಹೀಗಾಗಿ ಅದು ಅಂಬುತೀರ್ಥದಲ್ಲಿ ಹುಟ್ಟುವ ಶರಾವತಿಯಂತೆ ಚಿಕ್ಕದಾಗಿ, ಅಪ್ರಸಿದ್ಧವಾಗಿ ಹುಟ್ಟಿ, ಬರುಬರುತ್ತಾ ತೊರೆಯಾಗಿ ನೆರೆಯಾಗಿ ಮಹಾಪ್ರವಾಹವಾಗಿ ಹರಿಯಿತು. ಈ ಪ್ರವಾಹದಲ್ಲಿ ಜನತೆಯ ಜೀವನದ ಎಲ್ಲಾ ಮಗ್ಗುಲುಗಳು ಬಹುಮಟ್ಟಿಗೆ ಮೈ ತೆರೆದುಕೊಂಡವು. ಲಿಪಿಯ ಉಗಮದೊಡನೆ, ಅಕ್ಷರ ಕಲಿಕೆಯೊಡನೆ, ಶಿಕ್ಷಣ ಸಿಕ್ಕಿದಂತೆಲ್ಲಾ ಈ ಮೌಖಿಕ ಪರಂಪರೆಯ ಅನುಭವಗಳು ಪ್ರತಿಭಾವಂತ ಕವಿಗಳ ಮನಸ್ಸಿನ ಭೂಮಿಯಲ್ಲಿ ನೆಟ್ಟು ಅವರ ಕೃತಿಗಳಿಗೆ ಜೀವಧಾತುವನ್ನು ಒದಗಿಸಿದವು. ಈ ಸಂಗತಿ ಜಗತ್ತಿನ ಎಲ್ಲಾ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಏಕೆಂದರೆ ಸಾಹಿತ್ಯ ಎನ್ನುವುದು ಜನಜೀವನದಿಂದ ಹೊರತಾದುದಲ್ಲ. ಜನರಿಂದಲೇ ಹುಟ್ಟಿ, ಜನರಿಗಾಗಿ ಹುಟ್ಟಿ, ಜನರಿಗೆ ಪ್ರೇರಣೆಯನ್ನು ಕೊಡುವುದು ಈ ಸಾಹಿತ್ಯ. ಆದ್ದರಿಂದ ಒಂದು ಸಾಹಿತ್ಯ ಶಕ್ತವೂ ಉಪಯುಕ್ತವೂ ಪರಿಣಾಮಕಾರಿಯೂ ಪ್ರಾಮಾಣಿಕವೂ ಜೀವನಬದ್ಧವೂ ಮತ್ತು ಚಿರಂತನವೂ ಆಗಬೇಕಾದರೆ ಅದರಲ್ಲಿ ಜಾನಪದ ಜೀವನದ ಮುಖ್ಯಾಂಶಗಳು ಕಣ್ಣಿಡೆಯಬೇಕು. ಈ ದೃಷ್ಟಿಯಿಂದ ನೋಡಿದಾಗ ಜಾನಪದವನ್ನು ಹೊರತುಪಡಿಸಿದ ಯಾವ ಮಹಾಕೃತಿಯೂ ಸಾಹಿತ್ಯ ಲೋಕದಲ್ಲಿ ಅವಿರ್ಭವಿಸಿಲ್ಲ ಎಂಬ ಸತ್ಯ ಮನದಟ್ಟಾಗುತ್ತದೆ.

ಭಾರತದ ರಾಮಾಯಣ, ಮಹಾಭಾರತಗಳನ್ನೇ ಉದಾಹರಣೆಗೆ ತೆಗೆದುಕೊಂಡರೆ ಈ ಸಂಗತಿ ಸ್ಪಷ್ಟವಾಗುತ್ತದೆ. ರಾಮಾಯಣದ ವಸ್ತು ಮತ್ತು ಅದರ ಪಾತ್ರಗಳು ಇಂದಿಗೂ ಭಾರತೀಯರಿಗೆ ಆದರ್ಶದ ಸೆಲೆಗಳಾಗಿವೆ. ಈ ರಾಮಾಯಣದ ಕತೆ ಕೂಡ ಮೂಲತಃ ಜನಪದ ಗಾಯಕರಿಂದಲೇ ಸೃಷ್ಟಿಗೊಂಡಿದ್ದು ಮತ್ತು ಪ್ರಸಾರಗೊಂಡಿದ್ದು. ರಾಮಾಯಣದ ಬಾಲಕಾಂಡದಲ್ಲಿ ಕ್ರೌಂಚವಧೆಯ ಕಾರಣದಿಂದ ವ್ಯಾಧನಿಗೆ ಶಾಪಕೊಟ್ಟ ವಾಲ್ಮೀಕಿ ತನ್ನ ಎಲೆಮನೆಗೆ ಹೋದಮೇಲೆ ತಾನು ಕೊಟ್ಟ ಶಾಪ ಹೇಗೆ ತಂತ್ರೀಲಯ ಸಮನ್ವಿತವಾಗಿ, ಶ್ಲೋಕವಾಗಿ ಪರಿಣಮಿಸಿದೆ ಎಂಬುದನ್ನು ಕಂಡುಕೊಳ್ಳುತ್ತಾನೆ. ಅದೇ ವೇಳೆಗೆ ನಾರದ ಮಹರ್ಷಿ ಬಂದು ಶ್ರೀರಾಮನ ಕತೆಯನ್ನು ಹೇಳಿ ರಾಮಾಯಣ ಕೃತಿಯನ್ನು ರಚಿಸುವಂತೆ ಆಶೀರ್ವದಿಸುತ್ತಾನೆ. ಅಂದರೆ ಈಗಾಗಲೇ ರಾಮನೆಂಬ ಆದರ್ಶ ನಾಯಕನ, ಸೀತೆ ಎಂಬ ಆದರ್ಶ ಸತಿಯ, ಲಕ್ಷ್ಮಣ-ಭರತರೆಂಬ ಆದರ್ಶ ಸಹೋದರರ,

ಹನುಮಂತನೆಂಬ ಆದರ್ಶ ಸೇವಕನ ಕತೆ ತಲೆಮಾರಿನಿಂದ ತಲೆಮಾರಿಗೆ ಹಬ್ಬಿ ಜನಮನದಲ್ಲಿ ಹರಡಿ ಅತ್ಯಂತ ಪರಿಪಕ್ವ ಸ್ಥಿತಿಗೆ ಬೆಳೆದು ಬಂದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆದರೆ ವಾಸ್ತವವಾಗಿ ವಾಲ್ಮೀಕಿ ನಾರದ ಹೇಳಿದಂಥ ಕತೆಯಿಂದ ಪ್ರಭಾವಿತಗೊಂಡು ನಾಡಿನ ಉದ್ದಗಲಕ್ಕೂ ಕಾಡು, ಹಳ್ಳಿ, ನಗರಗಳೆನ್ನದೆ ಸಂಚರಿಸಿ ಜನಮನದಲ್ಲಿ ಸ್ಥಾಯಿಯಾಗಿದ್ದ ರಾಮ ಕತೆಯ ವಿವಿಧ ರೂಪಗಳನ್ನು ಸಂಗ್ರಹಿಸಿರಬೇಕು. ಹೀಗೆ ತಾನು ಸಂಗ್ರಹಿಸಿದ ರಾಮ ಕತೆಗೆ ಸಂಬಂಧಪಟ್ಟ ವೈವಿಧ್ಯಮಯ ಘಟನೆಗಳಿಗೆ ಒಂದು ಸುಸಾಂಗತ್ಯವನ್ನು ಕಲ್ಪಿಸಿ ಮಹಾಕಾವ್ಯವಾಗಿ ಹೆಣೆದಿರಬೇಕು. ರಾಮಾಯಣದಲ್ಲಿ ಬರುವ ಅಯೋಧ್ಯೆಯ, ಕಿಷ್ಕಿಂಧೆಯ ಮತ್ತು ಲಂಕೆಯ ಜನಜೀವನದ ಚಿತ್ರಗಳು ಆ ಕಾಲದ ಜನರ ಚಿತ್ರಗಳೇ ಆಗಿವೆ. ತಮ್ಮ ವಿವೇಚನೆಗೆ ಮೀರಿದ ಸಂಗತಿಗಳಿಗೆ, ತಮ್ಮ ಅಳತೆಗೆ ದಕ್ಕಲಾರದ ವ್ಯಕ್ತಿಗಳ ಜೀವನಕ್ಕೆ ಅತಿಮಾನುಷತೆಯನ್ನು ಆರೋಪಿಸುವುದು ಜನಪದರ ವಿಶಿಷ್ಟ ಗುಣ. ಅದರಂತೆ ಮಾನವನಾಗಿದ್ದ ರಾಮನನ್ನು ದೈವ ಸಮಾನನನ್ನಾಗಿ, ಅನಂತರ ದೇವತಾ ಅವತಾರವನ್ನಾಗಿ ನಮ್ಮ ಜನ ಕಲ್ಪಿಸಿದರು. ಹಾಗೆಯೇ ಸ್ವಭಾವದಲ್ಲಿ ಪಕ್ವವಾಗಿಲ್ಲದ ಮತ್ತು ಆಚರಣೆಯಲ್ಲಿ ಸ್ವಲ್ಪ ಅನಾಗರಿಕತೆಯನ್ನು ಮೈಗೂಡಿಸಿಕೊಂಡಿದ್ದ ಜನರನ್ನು ವಾನರರೆಂದೂ; ದೈಹಿಕ ಶಕ್ತಿಯಲ್ಲಿ, ಭಾವೋನ್ಮಾದದಲ್ಲಿ ಮತ್ತು ರೂಕ್ಷತನದಲ್ಲಿ ತಮ್ಮ ಜೀವನವನ್ನು ನಡೆಸುತ್ತಿದ್ದ ಜನರನ್ನು ರಾಕ್ಷಸರೆಂದೂ ಮತ್ತು ಇತರರೆಲ್ಲರಿಗಿಂತ ಮೇಲ್ಪಟ್ಟದ ಹಾಗೂ ನಿಗ್ರಹಾನುಗ್ರಹ ಸಮರ್ಥರಾಗಿದ್ದ ಜನಾಂಗವನ್ನು ದೇವರೆಂದೂ ನಮ್ಮವರು ಪರಿಭಾವಿಸಿರಬೇಕು. ಈ ಕಲ್ಪನೆಗಳೇ ಮುಂದೆ ವಾಲ್ಮೀಕಿ ರಾಮಾಯಣದಲ್ಲಿ ಪ್ರತಿಭಾಪೂರ್ಣವಾಗಿ ಬೆಳೆದಿರುವುದನ್ನು ಕಾಣಬಹುದು. ಇದಲ್ಲದೆ ಉತ್ತರಕಾಂಡದಲ್ಲಿ ವಾಲ್ಮೀಕಿ ಲವಕುಶರಿಗೆ ರಾಮಾಯಣವನ್ನು ಬಾಯಿಪಾಠ ಮಾಡಿಸಿದನೆಂದೂ, ಅವರಿಬ್ಬರೂ ಮಧುರ ಕಂಠದಿಂದ ಆ ಕಾವ್ಯವನ್ನು ಹಾಡಿದರೆಂದೂ ಉಲ್ಲೇಖವಿದೆ. ವಾಸ್ತವವಾಗಿ ಈ ಉಲ್ಲೇಖ ಭಾರತದ ಮೊತ್ತಮೊದಲ ಜನಪದ ಗಾಯಕರನ್ನು ಕುರಿತದ್ದು ಎಂದು ಊಹಿಸಬಹುದು. ಅಕ್ಷರ ನಾಗರಿಕತೆ ಇಲ್ಲದಿದ್ದ ಅಥವಾ ಕಡಿಮೆ ಇದ್ದ ಕಾಲದಲ್ಲಿ ತನ್ನ ರಾಮಾಯಣವನ್ನು ಜನಪ್ರಿಯಗೊಳಿಸಲು ಈ ಕುಶಲವರೆಂಬ ಗಾಯಕದ್ವಯರನ್ನು ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡಿರಬಹುದು. ಇವರೇ ಮುಂದೆ ರಾಮನ ಮಕ್ಕಳೆಂಬ ಕಲ್ಪನೆಯ ಪರಿವೇಷದಲ್ಲಿ ಸಿಕ್ಕಿಹಾಕಿಕೊಂಡರು. ಇಷ್ಟೇ ಅಲ್ಲ, ವಾಲ್ಮೀಕಿ

ರಾಮಾಯಣದಲ್ಲಿ ಬರುವ ವಿವಿಧ ಜನರ ಸ್ವಭಾವಗಳು, ನಡವಳಿಕೆಗಳು, ಆಚರಣೆಗಳು ಆ ಕಾಲದ ಜನಜೀವನವನ್ನು ಸಾಕಷ್ಟು ಶಕ್ತಿಯುತವಾಗಿ ಪ್ರತಿಬಿಂಬಿಸಿವೆ. ನೇಗಿಲ ತೆರೆಯಲ್ಲಿ ಸೀತೆ ಹುಟ್ಟಿದಳು ಎಂಬ ಕಲ್ಪನೆ, ಅವಳು ಜನಕನಿಗೆ ಯಜ್ಞಭೂಮಿಯಲ್ಲಿ ದೊರೆತಳೆಂಬ ಕಲ್ಪನೆ ಕೂಡ ಯಾವುದೋ ಕಾರಣಕ್ಕಾಗಿ ಭೂಮಿಗೆ ಬಿಸಾಡಲ್ಪಟ್ಟ ಅನಾಥ ಹೆಣ್ಣೊಂದರ ಕತೆಯ ಅತಿಮಾನುಷ ಸ್ವರೂಪ ಮಾತ್ರ ಎಂದು ಊಹಿಸಲಿಕ್ಕೆ ಆಸ್ಪದವಿದೆ. ಬೇಡನಾಗಿ, ದಲಿತನಾಗಿ ಹುಟ್ಟಿ ವಾಲ್ಮೀಕಿಯಾದ ಕವಿ ಈ ಮೂಲಕ ಪರಿತ್ಯಜಿತ ಹೆಣ್ಣು ಮಗುವೊಂದನ್ನು ನಾಯಕಿಯನ್ನಾಗಿ ಮಾಡಿ ಆಕೆ ಸಕಲ ಸ್ತ್ರೀಯರ ಆದರ್ಶ ಮಾತೆಯಾಗಿ ಹೇಗೆ ಬೆಳೆದಳು ಎಂಬ ರೋಚಕ ಚಿತ್ರವನ್ನು ನೀಡಿ ಮತ್ತೊಂದು ರೀತಿಯಲ್ಲಿ ದಲಿತ ಯಶೋಗಾಥೆಯನ್ನು ಹಾಡಿದ್ದಾನೆಂದು ಊಹಿಸಲು ಅವಕಾಶವಿದೆ. ಈ ಕೃತಿಯಲ್ಲಿರುವ ಅತಿಮಾನುಷ ಮುಖವಾಡವನ್ನು ಸರಿಸಿ ಯಾವುದೇ ಸಂಪ್ರದಾಯಶೀಲ ಕನ್ನಡಕವನ್ನು ಹಾಕದೆ ಪರಿಶೀಲಿಸಿದಾಗ ಇಂತಹ ಜಾನಪದೀಯ ತಥ್ಯಗಳು ಹೊಮ್ಮುತ್ತವೆ. ಹಾಗೆಯೇ ಅಣ್ಣನ ಹೆಂಡತಿಯನ್ನು ತಮ್ಮನೂ, ತಮ್ಮನ ಹೆಂಡತಿಯನ್ನು ಅಣ್ಣನೂ ಇಟ್ಟುಕೊಳ್ಳುವ ಅಥವಾ ಮದುವೆ ಮಾಡಿಕೊಳ್ಳುವ ಗುಡ್ಡುಗಾಡು ಜನರ ಸಂಪ್ರದಾಯವನ್ನು ಯಾವುದೇ ಅಶ್ಲೀಲತೆಯ ಅಥವಾ ಜಿಗುಪ್ಸೆಯ ಸೋಂಕಿಲ್ಲದೆ ಅತ್ಯಂತ ಸಹಜವಾಗಿ ವರ್ಣಿಸಿದ್ದಾನೆ. ತಮ್ಮ ರಾಕ್ಷಸ ಬಲದಿಂದ ಮನ ಬಂದವರನ್ನು ಅಪಹರಿಸುವ ಮತ್ತು ಭೋಗಿಸುವ ರಾಕ್ಷಸ ಸಂಸ್ಕೃತಿ ಕೂಡ ಆದಿಮಾನವ ಜನಾಂಗದ್ದೇ ಆಗಿದೆ. ಮಹಾಭಾರತದ ಕತೆ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಸ್ವಲ್ಪಮಟ್ಟಿಗೆ ಪ್ರಸಿದ್ಧವಾಗಿದ್ದ ಒಂದು ಗುಂಪಿನಲ್ಲಿ ನಡೆದ ದಾಯಾದಿಗಳ ಕಲಹದ ದುರಂತ ಕತೆ ಕರ್ಣಾಕರ್ಣಿಯಾಗಿ ತಲೆಮಾರಿನಿಂದ ತಲೆಮಾರಿಗೆ ಹಾದು ಬಂದು ವ್ಯಾಸ ಎನ್ನುವ ಪ್ರತಿಭಾಶೀಲ ಸಂಯೋಜಕ ಕವಿಯ ಕೈಗೆ ಸಿಕ್ಕಿ ಈಗಿನ ರೂಪವನ್ನು ತಳೆದಿದೆ. ವ್ಯಾಸ ಎಂಬ ಹೆಸರು ಕೂಡ ಜಿಜ್ಞಾಸೆಗೆ ಅರ್ಹವಾಗಿದೆ. ವ್ಯಾಸ ಎಂದರೆ ಸುದೀರ್ಘವಾದುದು ಎಂದು ಅರ್ಥ. ಆದ್ದರಿಂದ ಜನಪದ ಕವಿಗಳ ಒಂದು ಸುದೀರ್ಘ ಸರಣಿಯೇ ಇಷ್ಟು ಬೃಹತ್ ಕತೆಯ ನಿರ್ಮಾಣಕ್ಕೆ ಕಾರಣವಾಗಿದೆ ಎಂದು ಊಹಿಸುವುದು ತಪ್ಪಲ್ಲ. ಮಹಾಭಾರತ ಕಾಲದ ವಿವಿಧ ಜನಗಳ ಸಂಪ್ರದಾಯಗಳು ಇಲ್ಲಿ ವೈಭವೀಕೃತವಾಗಿದ್ದರೂ ಅವುಗಳ ಮೂಲ ಏನು ಎಂಬುದನ್ನು ಅರಿಯುವುದು ಕಷ್ಟವಲ್ಲ. ಬೆಸ್ತರ ಹೆಣ್ಣಿಗೆ ಋಷಿ

ಮರುಳಾಗುವುದು, ಆ ಕಾಲದಲ್ಲಿ ಮೇಲ್ವರ್ಗದವರು ಕೆಳವರ್ಗದ ಹೆಣ್ಣುಗಳನ್ನು ತಮ್ಮ ಉಪಭೋಗದ ವಸ್ತುಗಳೆಂದು ಭಾವಿಸಿದ್ದರ ಸಂಕೇತ. ಪರಾಶರ ಅವಳನ್ನು ಯೋಜನಗಂಧಿಯನ್ನಾಗಿ ಮಾಡಿದ ಎಂಬುದು ಕೇವಲ ಕಲ್ಪನೆ ಅಥವಾ ಅವಳು ಬೆಸ್ತ ಜೀವನವನ್ನು ತೊರೆದು ಸ್ವಲ್ಪ ಮಟ್ಟಿಗೆ ನಾಗರಿಕ ಜೀವನಕ್ಕೆ ಕಾಲಿಟ್ಟಳು ಎಂಬುದರ ಸಂಕೇತ. ಹಾಗೆಯೇ ಗಂಡಂದಿರಲ್ಲಿ ಮಕ್ಕಳಾಗದಿದ್ದಾಗ ಹಿರಿಯರ ಅನುಮತಿ ಪಡೆದು ಬೇರೊಬ್ಬ ಗಂಡಸಿನಲ್ಲಿ ಮಕ್ಕಳನ್ನು ಪಡೆಯುವ ನಿಯೋಗ ಪದ್ಧತಿ ಆಗಿನ ಕಾಲದ ಜನಜೀವನದಲ್ಲಿದ್ದ ಜಾನಪದ ಪದ್ಧತಿಯೇ ಆಗಿದೆ. ಕುಂತಿಗೆ ದೂರ್ವಾಸರು ಕೊಟ್ಟ ವರಗಳ ಪ್ರಸಂಗವನ್ನು ಹೀಗೆಯೇ ಅರ್ಥೈಸಬೇಕಾಗುತ್ತದೆ. ಪಾಂಡುರಾಜ ಶಾಪಗ್ರಸ್ತನಾದ ಮೇಲೆ ಯಮಧರ್ಮ, ಇಂದ್ರ, ವಾಯು, ಅಶ್ವಿನಿ ದೇವತೆಗಳಿಂದ ಪಾಂಡವರು ಹುಟ್ಟುವ ಕ್ರಿಯೆ ಕೂಡ ಗಂಡನ ಅನುಮತಿಯನ್ನು ಪಡೆದು ಪರಪುರುಷರಲ್ಲಿ ಮಕ್ಕಳನ್ನು ಪಡೆಯುವ ಸಂಪ್ರದಾಯದ ವೈಭವೀಕರಣ. ಹಾಗೆಯೇ ಅಲ್ಲಿ ಬರುವ ಹಿಡಿಂಬೆ, ಘಟೋದ್ಗಜ ಮುಂತಾದ ರಾಕ್ಷಸರು ಎನ್ನಲಾದ ಜನಾಂಗ ಕೂಡ ಕಾಡಿನ ನಾಡಿನ ಅನಾಗರಿಕ ಜನಾಂಗದ ಕಾಲ್ಪನಿಕ ರೂಪ. ಮಹಾಭಾರತದಲ್ಲಿ ಮೊದಲಿನಿಂದ ಕೊನೆಯವರೆಗೂ ಬೇರೆ ಬೇರೆ ಜನಾಂಗಗಳು, ಭಿನ್ನ ಭಿನ್ನವಾದ ಸಂಸ್ಕೃತಿಯ ವಿಧಾನಗಳ ಚಿತ್ರ ಸಾಮಾಜಿಕ ಮಾನವಶಾಸ್ತ್ರದ ದೃಷ್ಟಿಯಿಂದ ಪರಿಶೀಲನಾರ್ಹವಾಗಿದೆ. ಅಲ್ಲಿ ಬರುವ ಬೇಡ ಏಕಲವ್ಯ ಸಮಸಪ್ತಕರೆಂಬ ರಾಕ್ಷಸರು, ಅರಸು ಮನೆತನದ ಕಟ್ಟು ಕಟ್ಟಳೆಗಳು ಮುಂತಾದುವೆಲ್ಲಾ ಜಾನಪದೀಯವೇ. ಸಮಾಜದ ಶ್ರೇಣಿಯಲ್ಲಿ ಅತ್ಯಂತ ಮೇಲ್ದರ್ಜೆಯಲ್ಲಿದ್ದ ಜನರನ್ನು ದೇವತೆಗಳೆಂದು ಕಲ್ಪಿಸಿ, ಸಾಮಾನ್ಯ ಮಾನವರ ಜೀವನದಲ್ಲಿ ಅವರು ನಿರ್ಣಾಯಕ ಪಾತ್ರವನ್ನು ವಹಿಸಿದಂಥ ಚಿತ್ರಣ ಕೂಡ ಜಾನಪದೀಯ ಕಲ್ಪನೆಯೇ. ದ್ರೌಪದಿ ಪಂಚ ಪಾಂಡವರ ಪತ್ನಿಯಾದರೂ ಅವಳಿಗೆ ಪತಿವ್ರತೆ ಎಂಬ ಪಟ್ಟವನ್ನು ಕಟ್ಟಿದ ಬಗೆ ಆ ಕಾಲದಲ್ಲಿದ್ದ ವಿವಾಹ ಪದ್ಧತಿಯನ್ನು ಸಂಕೇತಿಸುತ್ತದೆ. ಕೆಲವು ಗುಡ್ಡಗಾಡು ಜನಾಂಗಗಳಲ್ಲಿ ಅಣ್ಣತಮ್ಮಂದಿರೆಲ್ಲರೂ ಒಬ್ಬಳೇ ಹೆಣ್ಣನ್ನು ಮದುವೆಯಾಗುವ ಸಂಪ್ರದಾಯವಿದೆ. ಅದೇ ಸಂಪ್ರದಾಯದಂತೆ ಪಾಂಡವರು ಬಹುಶಃ ದುರ್ಯೋಧನನನ್ನು ಗೆಲ್ಲಲು ಅವರಿಗೆ ಅನಿವಾರ್ಯವಾಗಿದ್ದ ಐಕ್ಯಮತ್ಯ ದೃಷ್ಟಿಯಿಂದ ಕೂಡ ದ್ರೌಪದಿಯನ್ನು ಎಲ್ಲರೂ ಮದುವೆಯಾದರು. ಮಹಾಭಾರತದಲ್ಲಿ ಬರುವ ಇಂತಹ ಹಲವಾರು ಪ್ರಸಂಗಗಳು ಸಾಹಿತ್ಯದ ಮೂಲವಾಹಿನಿಯಾಗಿ ಜಾನಪದ

ಹೇಗೆ ಹರಿದಿದೆ-ಸಾಹಿತ್ಯ ರೂಪದಲ್ಲಿ ಮಾತ್ರವಲ್ಲ ಜೀವನ ರೂಪದಲ್ಲೂ ಎಂಬುದನ್ನು ತೋರ್ಪಡಿಸುತ್ತದೆ.

ಗ್ರೀಸಿನ ಮಹಾಕಾವ್ಯಗಳಾದ ಇಲಿಯಡ್ ಮತ್ತು ಒಡಿಸ್ಸಿ ಕಾವ್ಯಗಳು ಸಹ ಮೂಲತಃ ಜನಪದ ಕಾವ್ಯಗಳೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವುಗಳ ಕರ್ತೃ ಹೋಮರನೆಂದು ಹೇಳಲಾಗಿದ್ದರೂ ಹೋಮರ್ ಎಂಬ ಪದ ಹೋಮರಾಯ್ಡ್ ಪದದಿಂದ ನಿಷ್ಪತ್ತಿಯಾಗಿದೆಯೆಂದೂ, ಹೋಮರಾಯ್ಡ್ ಎಂದರೆ ಅಂಥ ಗಾಯಕರ ಗುಂಪು ಎಂದೂ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ಗ್ರೀಸ್‌ನಲ್ಲಿ ಪ್ರಚಲಿತವಾಗಿದ್ದ ವೀರರ ಕತೆಗಳನ್ನು ಹಾಡುಗಳನ್ನಾಗಿ ಕಟ್ಟಿ ಅಲ್ಲಿನ ಜನಪದ ಗಾಯಕರು ಹಾಡಿ ರಾಷ್ಟ್ರದ ತುಂಬಾ ಪ್ರಚಾರ ಮಾಡಿದರು. ಆ ಸತ್ಯ ಕತೆಗಳಿಗೆ ಶುದ್ಧ ಜನಪದ ಕಲ್ಪನೆಗಳು ಹೆಣೆದುಕೊಂಡು ಅವರಿಗೆಲ್ಲಾ ಅತಿಮಾನುಷ ಪರಿವೇಷ ಸೃಷ್ಟಿಯಾಯಿತು. ಇವೆರಡೂ ಕಾವ್ಯಗಳನ್ನು ಈಗಲೂ ಓದಿದಾಗ ಇಲ್ಲಿನ ಮಾನವರು, ದೇವತೆಗಳೆಲ್ಲರೂ ಮೂಲತಃ ಜಾನಪದೀಯವಾಗಿ ದೈಹಿಕ ಶಕ್ತಿ ಮತ್ತು ಭಾವ ತೀವ್ರತೆಗಳನ್ನು ಒಳಗೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲಿ ಬರುವ ಎಷ್ಟೋ ಪ್ರಸಂಗಗಳು ಜನಪದ ಕಥೆಗಳು ನೇರವಾಗಿ ಸಾಹಿತ್ಯ ಗರ್ಭವನ್ನು ಪ್ರವೇಶ ಮಾಡಿದುದರ ಕುರುಹಾಗಿದೆ. ವರ್ಜಿಲನ 'ಈನಿಯಡ್' ಕೂಡ ಇಂತಹ ಜನಪದ ಕತೆಯ ಮರು ಸೃಷ್ಟಿಯಾಗಿದೆ. ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್' ಬೈಬಲಿನ ಕತೆಗೆ ಕ್ರಿಸ್ತನ ಸುತ್ತ ಹೆಣೆದ ಜನಪದ ಕಲ್ಪನೆಯ ಸೃಷ್ಟಿಯಾಗಿದೆ. ಇಂತಹ ಉದಾಹರಣೆಗಳನ್ನು ನೂರಾರು ಸಂಖ್ಯೆಯಲ್ಲಿ ಕೊಡುತ್ತಾ ಹೋಗಬಹುದು. ಹೀಗೆ ಜಾನಪದ ನಮ್ಮ ಪ್ರಾಚೀನ ಸಾಹಿತ್ಯದ ಒಂದು ಅವಿಭಾಜ್ಯವೂ ಅನನ್ಯವೂ ಮತ್ತು ಅರ್ಥಪೂರ್ಣವೂ ಆದ ಅಂಗವಾಗಿದೆ.

ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯವನ್ನು ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಇದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿಯನ್ನು ಒದಗಿಸಿರುವುದನ್ನು ಗುರುತಿಸಬಹುದಾಗಿದೆ. ಪಂಪ, ರನ್ನ, ನಾಗವರ್ಮ, ನಯಸೇನ, ಬಂಧುವರ್ಮ, ಶಿವಕೋಟ್ಯಾಚಾರ್ಯ, ಬ್ರಹ್ಮಶಿವ, ಮುಂತಾದ ಎಲ್ಲಾ ಪ್ರಾಚೀನ ಕವಿಗಳಲ್ಲಿ, ವಚನ ಕೀರ್ತನೆ ರಗಳೆಗಳಲ್ಲಿ; ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ; ಆಧುನಿಕ ಕತೆ, ಕಾದಂಬರಿ, ನಾಟಕ,

ಕವಿತೆಗಳಲ್ಲಿ ಒಂದಲ್ಲ ಒಂದು ಪ್ರಮಾಣದಲ್ಲಿ ಈ ಜಾನಪದ ಅಂಶಗಳು ಜೀವಸತ್ವಗಳಾಗಿರುವುದನ್ನು ಸೂಕ್ಷ್ಮ ಪರಿಶೀಲನೆಯಿಂದ ಗುರುತಿಸಬಹುದಾಗಿದೆ.

೩

ಪ್ರಾಚೀನ ಕನ್ನಡ ಸಾಹಿತ್ಯವೆಲ್ಲ ಬಹುಮಟ್ಟಿಗೆ ಪಂಡಿತ ಸಮ್ಮುಖಿವಾಗಿದ್ದ ಕಾರಣ ಮತ್ತು ಅದರ ವಸ್ತುವಿನ್ಯಾಸ, ಪಾತ್ರ ಚಿತ್ರಣ, ನಿರೂಪಣಾ ವಿಧಾನ, ಭಾಷಾ ಪ್ರಯೋಗ ಮುಂತಾದವುಗಳೆಲ್ಲಾ ಸಂಸ್ಕೃತದ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ನಡೆದ ಕಾರಣ ಅನಕ್ಷರಸ್ಥ ಗ್ರಾಮೀಣರ ದೈನಂದಿನ ಜೀವನವನ್ನು ಅವರನ್ನಾಳುವ ನಂಬಿಕೆಗಳನ್ನು, ಅವರು ಅನುಸರಿಸುವ ಸಂಪ್ರದಾಯಗಳನ್ನು, ಅವರ ಮನೋಲಹರಿಗಳನ್ನು ಅವುಗಳ ಮೂಲ ಸ್ವರೂಪದಲ್ಲಿ ಹಿಡಿದಿಡುವ ಅಸಲು ಕಸುಬನ್ನು ಈ ಕವಿಗಳು ಮಾಡಲಿಲ್ಲ. ಈ ಕವಿಗಳ ಒಂದು ಕಣ್ಣು ತಮ್ಮ ಆಶ್ರಯದಾತನಾದ ರಾಜನ ಮೇಲೆ, ಮತ್ತೊಂದು ಕಣ್ಣು ಅವರನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸುವ ಕವಿ - ವಿದ್ವಾಂಸರ ಮೇಲೆ ಇದ್ದ ಕಾರಣ ಅವರು ಜನರಿಗಾಗಿ ಜನರದ್ದೇ ಆದ ಜೀವನ ರೇಖೆಗಳನ್ನು ಹೆಚ್ಚಾಗಿ ಕಾವ್ಯ ಗರ್ಭದಲ್ಲಿ ಅಳವಡಿಸಿಕೊಳ್ಳಲಿಲ್ಲ. ಆದರೆ ಸಾಹಿತ್ಯ ಹಿಡಿ ಮಂದಿಗಲ್ಲ, ಬಹುಮಂದಿಗೆ ಮತ್ತು ಬಹುಮಂದಿಯ ಜೀವನ ಸಾಕ್ಷಾತ್ಕಾರಕ್ಕೆ ಎಂಬ ಪ್ರಧಾನ ಕಾಳಜಿಯನ್ನು ವಚನಕಾರರು ಅನನ್ಯವಾಗಿ ತಮ್ಮ ವಚನಗಳಲ್ಲಿ ಪುನರವತಾರ ಮಾಡಿಸಿದ ಕಾರಣದಿಂದಾಗಿ ಸಹಜವಾಗಿ ವಚನ ಸಾಹಿತ್ಯ ಮತ್ತು ಅದರ ಜಾಡನ್ನೇ ಹಿಡಿದ ರಗಳೆ, ತ್ರಿಪದಿ ಸಾಹಿತ್ಯಗಳು ತಮ್ಮ ಸಾಹಿತ್ಯದ ಕೇಂದ್ರ ನೆಲೆಗಳನ್ನಾಗಿ ಜನರ ಭಾಷೆ, ಅನುಭವ ಮತ್ತು ಆಶಯಗಳನ್ನು ಆಶ್ರಯಿಸಿದವು. ಹಾಗೆಯೇ ರಾಜರನ್ನು ರಾಜಾಸ್ಥಾನವನ್ನು ಧಿಕ್ಕರಿಸಿ ಉದ್ದೇಶಪೂರ್ವಕವಾಗಿ ಜನದೆಡೆ ಕಣ್ಣು ತೆರೆದ ಕವಿಗಳು ಪುರಾಣ ಲೋಕಕ್ಕಿಂತ ವಿಶಿಷ್ಟವಾದ ಭಿನ್ನವಾದ ಮತ್ತು ಜೀವಂತವಾದ ಹೊಸ ಅನುಭವ ಲೋಕವನ್ನು ತಮ್ಮದನ್ನಾಗಿ ಮಾಡಿಕೊಂಡರು. ಹೀಗಾಗಿ ಸಾಹಿತ್ಯದ ವಸ್ತುವಿನಲ್ಲಿ, ಭಾಷೆಯಲ್ಲಿ, ಛಂದಸ್ಸಿನಲ್ಲಿ, ಪಾತ್ರ ಸೃಷ್ಟಿಯಲ್ಲಿ, ಆವರಣ ನಿರ್ಮಾಣದಲ್ಲಿ ಹಾಗೂ ನಿರೂಪಣೆಯಲ್ಲಿ ಜಾನಪದ ಆಶಯಗಳನ್ನು ಸಹಜವಾಗಿ ತುಂಬಿಕೊಂಡು ಈ ಸಾಹಿತ್ಯವನ್ನು ಜಡ್ಡು ಕಟ್ಟಿದ ರಾಜಾಸ್ಥಾನ ಸಾಹಿತ್ಯದ ಸಂಕೋಲೆಗಳಿಂದ ಹೊರಗೆಳೆದು ಜನರ ನಡುವೆ ತಂದವು.

ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಮಾತ್ರವಲ್ಲದೆ ಆಧುನಿಕ ಸಾಹಿತ್ಯವೂ ಸಹ ಜಾನಪದದ ಪ್ರೇರಣೆಯಿಂದ ದೂರವಾಗಿಲ್ಲ. ಅಷ್ಟೇ ಅಲ್ಲ, ಹಿಂದಿನ ಸಾಹಿತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲೇ ಜಾನಪದ ಸಂವೇದನೆಯನ್ನು ಇದು ಗರ್ಭೀಕರಿಸಿಕೊಂಡಿದೆ. ಆಧುನಿಕ ಯುಗ ಎಲ್ಲ ವರ್ಗದ ಮತ್ತು ಸ್ತರದ ಜನರಿಗೆ ವಿದ್ಯಾಭ್ಯಾಸದ ಬೆಳಕು ಮುಕ್ತವಾಗಿ ದೊರೆಯಲು ಅನುವು ಮಾಡಿಕೊಟ್ಟ ಕಾರಣ ಮೇಲ್ವರ್ಗದ ಜನ ಮಾತ್ರವಲ್ಲದೆ ಅಕ್ಷರ ವಂಚಿತರಾಗಿದ್ದ ಈ ವರ್ಗದ ಜನ ಸಹ ಸುಪ್ತವಾಗಿದ್ದ ತಮ್ಮ ಜೀವನದ ಅನುಭವಗಳನ್ನು ಮುಕ್ತವಾಗಿ ತೋಡಿಕೊಳ್ಳಲು ಇದು ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಗ್ರಾಮೀಣ ಅನುಭವಗಳಿಂದ ಪುಷ್ಟರಾಗಿರುವ ಲೇಖಕರು ಹೊರಹೊಮ್ಮಿ ಜಾನಪದ ಜೀವನವನ್ನೇ ಬೃಹತ್ ಪ್ರಮಾಣದಲ್ಲಿ ಅಳವಡಿಸಿಕೊಂಡಿರುವ ಸಾಹಿತ್ಯವನ್ನು ರಚಿಸಲು ತೊಡಗಿದರು. ನವೋದಯ, ಪ್ರಗತಿಶೀಲ, ದಲಿತ ಮತ್ತು ಬಂಡಾಯ ಸಾಹಿತ್ಯ ಪಂಥಗಳು ಮುಖ್ಯವಾಗಿ ಈ ನೆಲೆಯಿಂದಲೇ ಅವಿರ್ಭವಿಸಿವೆ. ತುಂಬಾ ವ್ಯಾಪಕವಾಗಿ ಬೆಳೆದಿರುವ ಆಧುನಿಕ ಸಾಹಿತ್ಯ ಈ ಕಾರಣದಿಂದಲೇ ಜಾನಪದದ ಸಂವೇದನೆಯನ್ನು ಅತ್ಯಂತ ದಟ್ಟವಾಗಿ ಅಭಿವ್ಯಕ್ತಿಸುವ ಮೂಲಕ ಪ್ರಾಚೀನ ಸಾಹಿತ್ಯಕ್ಕಿಂತ ವಿಭಿನ್ನವಾದ ವಿಶಿಷ್ಟ ಅನುಭವಲೋಕಗಳನ್ನು ನಮ್ಮ ಮುಂದೆ ತೆರೆದಿಟ್ಟು, ಸತ್ವಶಾಲಿಯಾಗಿ ಕಂಗೊಳಿಸುತ್ತಿದೆ.

ಹೀಗಾಗಿ ನಮ್ಮ ಸಾವಿರ ವರ್ಷಕ್ಕೂ ಹೆಚ್ಚುಕಾಲ ಬೆಳೆದು ಬಂದಿರುವ ಕನ್ನಡದ ಶಿಷ್ಟ ಸಾಹಿತ್ಯ ಎಷ್ಟು ಮತ್ತು ಹೇಗೆ ಜಾನಪದ ಸಂವೇದನೆಯನ್ನು ಕಲಾಪೂರ್ಣವಾಗಿ ಪ್ರಕಟಿಸಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಅತ್ಯಂತ ಫಲಪ್ರದವೆಂದು ಭಾವಿಸಲಾಗಿದೆ. ಆದ್ದರಿಂದ ಅಕಾಡೆಮಿ 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ವಿಶಿಷ್ಟ ಮಾಲಿಕೆಯನ್ನು ಆರಂಭಿಸಿ ಪ್ರಾಚೀನ ಸಾಹಿತ್ಯದಿಂದ ಹಿಡಿದು ಇತ್ತೀಚಿನ ಸಾಹಿತ್ಯವನ್ನು ಜಾನಪದೀಯ ದೃಷ್ಟಿಯಿಂದ ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವೊಂದನ್ನು ಮಾಡುತ್ತಿದೆ. ಅದರ ಫಲವೇ ಈಗ ಬೆಳಕು ಕಾಣುತ್ತಿರುವ ಹನ್ನೆರಡು ಪುಸ್ತಕಗಳು. ಸಾಹಿತ್ಯ ಕ್ಷೇತ್ರದಲ್ಲಿ ಈಗಾಗಲೇ ಹೆಸರು ಮಾಡಿರುವ ಹಿರಿ ಕಿರಿಯ ಲೇಖಕರು ಈ ಮಾಲಿಕೆಯ ಗ್ರಂಥಗಳನ್ನು ತುಂಬಾ ಪರಿಶ್ರಮದಿಂದ ರಚಿಸಿಕೊಟ್ಟಿದ್ದಾರೆ. ಇವುಗಳಲ್ಲಿ

ಅವರ ಆಳವಾದ ಅಧ್ಯಯನ, ಸೂಕ್ಷ್ಮವಾದ ವಿಶ್ಲೇಷಣಾ ಶಕ್ತಿ, ಜಾನಪದದ ಬಗೆಗಿನ ದಟ್ಟವಾದ ಪ್ರಜ್ಞೆ ಹಾಗೂ ನಿರೂಪಣೆಯ ಸೊಗಸುಗಳು ಮೇಳಗೊಂಡಿವೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಇವು ತೋರುಗಂಬಗಳಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಅಕಾಡೆಮಿಯ ಕೋರಿಕೆ ಮೇರೆಗೆ ಈ ಕೃತಿಗಳನ್ನು ರಚಿಸಿಕೊಟ್ಟ ಲೇಖಕ ಮಿತ್ರರಿಗೆ ನಾನು ಆಭಾರಿಯಾಗಿದ್ದೇನೆ. ಕನ್ನಡದ ಪ್ರಸಿದ್ಧ ಪ್ರಾಧ್ಯಾಪಕರೂ ವಿದ್ವಾಂಸರೂ ಆದ ಮಾನ್ಯ ಮಿತ್ರರಾದ ಪ್ರೊ. ಹಂಪ. ನಾಗರಾಜಯ್ಯನವರು ಈ ಮಾಲೆಯ ಸಂಪಾದಕರಾಗಿ ತಮ್ಮ ಬಿಡುವಿರದ ಕಾರ್ಯಕ್ರಮಗಳ ನಡುವೆಯೂ ಲೇಖಕರೊಡನೆ ಪತ್ರ ವ್ಯವಹಾರ ಮಾಡಿ ಲೇಖನಗಳನ್ನು ತರಿಸಿಕೊಂಡು ಅವುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಸಂಪಾದಿಸಿಕೊಟ್ಟಿದ್ದಾರೆ. ಅವರು ಅಕಾಡೆಮಿಯ ಮೇಲೆ ಹೊರಿಸಿರುವ ಋಣಭಾರ ಕೃತಜ್ಞತೆಗೆ ಮೀರಿದ್ದು. ಅವರನ್ನು ನಾನು ಹೃತ್ಪೂರ್ವಕವಾಗಿ ಇಲ್ಲಿ ನೆನೆಯುತ್ತೇನೆ. ಹಾಗೆಯೇ ಈ ಕೃತಿಗಳನ್ನು ಸುಂದರವಾಗಿ ಅಚ್ಚಿಸಿಕೊಟ್ಟ ಸ್ನೇಹಾ ಮುದ್ರಣಾಲಯದ ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

೫-೧೨-೯೭ ಡಾ. ಎಚ್. ಜೆ. ಲಕ್ಕಪ್ಪಗೌಡ

## ಸಂಪಾದಕರ ಮಾತು

ಕನ್ನಡ ಸಾಹಿತ್ಯ ಭಾರತೀಯ ಭಾಷೆಗಳಲ್ಲಿ ಪ್ರಾಚೀನವಾದದ್ದು, ಪ್ರೌಢವಾದದ್ದು. ಒಂದೂವರೆ ಸಾವಿರ ವರ್ಷಗಳ ಅಖಂಡತೆ ಹಾಗೂ ಸಾತತ್ಯ ಇರುವ ಈ ಶಿಷ್ಟಪದ ಕನ್ನಡ ಸಾಹಿತ್ಯದಲ್ಲಿ ಸೇರಿಕೊಂಡಿರುವ ಜಾನಪದ ಅಂಶಗಳು ಗಮನಾರ್ಹ ಪ್ರಮಾಣದಲ್ಲಿವೆ. ಶಿಷ್ಟಪದ ಸಾಹಿತ್ಯಾಂತರ್ಗತವಾಗಿರುವ ಜಾನಪದೀಯ ಸತ್ವ-ಸ್ವರೂಪವನ್ನು ಪೃಥಕ್ಕರಿಸಿ ತೋರಿಸುವ ದಿಕ್ಕಿನ ಕೆಲಸ, ಅಲ್ಲೊಂದು ಇಲ್ಲೊಂದು ಪ್ರಾಸಂಗಿಕ ಬಿಡಿ ಬರೆಹದ ಹೊರತು, ವ್ಯವಸ್ಥಿತವಾಗಿಯೂ ವ್ಯಾಪಕವಾಗಿಯೂ ನಡೆದಿರಲಿಲ್ಲ. ಅಂಥ ಅಧ್ಯಯನದ ಅಗತ್ಯವಿತ್ತು. ಬಹುಕಾಲದ ಈ ಕೊರತೆಯನ್ನು ಮನಗಂಡು ಕಾರ್ಯೋನ್ಮುಖರಾದ ಆದ್ಯ ಪುರುಷರು ಕರ್ನಾಟಕ ಜಾನಪದ-ಯಕ್ಷಗಾನ ಅಕಾಡೆಮಿಯ ಈಗಿನ ಹಾಲಿ ಅಧ್ಯಕ್ಷರಾದ ಡಾ.ಎಚ್.ಜೆ. ಲಕ್ಕಪ್ಪಗೌಡರು. ಅವರಿಗೆ ಏಕಕಾಲದಲ್ಲಿ ಅತ್ತ ಜಾನಪದ ಪರಂಪರೆಯ ಹಾಗೂ ಇತ್ತ ಕನ್ನಡ ಸಾಹಿತ್ಯ ಪರಂಪರೆಯ ತಲಸ್ಪರ್ಶಿ ಪಾಂಡಿತ್ಯ ಭಾಗ್ಯವಿದ್ದುದರಿಂದ ಈ ಹೊಸ ಯೋಜನೆಯ ಅಗತ್ಯ ಮತ್ತು ಮಹತ್ವವನ್ನು ಅನಾಯಾಸವಾಗಿ ಅವಲೀಲೆಯಿಂದ ಗ್ರಹಿಸಿದರು. ಶಿಷ್ಟ ಸಾಹಿತ್ಯ ಪ್ರಕಾರದ ತವನಿಧಿಯೊಳಗೆ ಕುಳಿತ ಜಾನಪದ ನಿಧಿಯನ್ನು ತನಿಯಾಗಿ ತೆಗೆದು ತೋರಿಸುವ ಕೆಲವು ಪುಸ್ತಕಗಳನ್ನು ಪ್ರಕಟಿಸಲು ಒಂದು ಪ್ರತ್ಯೇಕ ಮಾಲೆಯನ್ನು ಹಮ್ಮಿಕೊಂಡು ವಿಳಂಬವಿಲ್ಲದೆ ಕಾರ್ಯತತ್ಪರರಾದರು. 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ಈ ಪುಸ್ತಕ ಮಾಲೆ ಅವರ ಕನಸು.

ಈ ಯೋಜನೆಯ ಸಂಪಾದಕನಾಗಿ ಕಾರ್ಯ ನಿರ್ವಹಿಸುವ ಹೊಣೆಗಾರಿಕೆಯನ್ನು ಡಾ.ಎಚ್.ಜೆ. ಲಕ್ಕಪ್ಪಗೌಡರು ನನಗೆ ವಹಿಸಿದಾಗ ನಾನು ಒಪ್ಪಿಕೊಳ್ಳಲು ಎರಡು ಪ್ರಬಲ ಕಾರಣಗಳಿದ್ದುವು: ೧. ಈ ಕೆಲಸದ ಅಗತ್ಯ

ಎಷ್ಟು ಜರೂರಿನದೆಂಬ ಅರಿವು ನನಗೂ ಇದ್ದುದು. ೨. ಡಾ.ಎಚ್.ಜೆ. ಲಕ್ಕಪ್ಪಗೌಡರು ಹಮ್ಮಿಕೊಂಡಿರುವ ಈ ಸಕಾಲಿಕವಾದ, ಯೋಗ್ಯವಾದ ಯೋಜನೆಯ ಯಶಸ್ಸಿಗೆ ಸಹಕರಿಸುವುದು ನನ್ನ ಕರ್ತವ್ಯವೆಂಬ ಭಾವನೆ. ಈ ಅವಕಾಶಕ್ಕಾಗಿ ಅಕಾಡೆಮಿಯ ಅಧ್ಯಕ್ಷರಿಗೂ ಇತರ ಕಾರ್ಯ ಸಮಿತಿ ಸದಸ್ಯರಿಗೂ ನಾನು ಕೃತಜ್ಞನಾಗಿದ್ದೇನೆ.

'ಶಿಷ್ಟಸಾಹಿತ್ಯ ಮತ್ತು ಜಾನಪದ ಸಂವೇದನೆ' ಮಾಲೆಯಲ್ಲಿ ಪ್ರಕಟಿಸಲು ನಮ್ಮ ಕೋರಿಕೆಯ ಮೇರೆಗೆ ಡಾ. ಎಸ್.ಪಿ. ಪದ್ಮಪ್ರಸಾದ್ ಅವರು ***'ಜೈನಕಥಾ ಸಾಹಿತ್ಯ ಮತ್ತು ಜಾನಪದ'*** ಎಂಬ ಗ್ರಂಥವನ್ನು ಬರೆದುಕೊಟ್ಟಿರುತ್ತಾರೆ. ಅವರಿಗೆ ಅಕಾಡೆಮಿ ಹಾಗೂ ನನ್ನ ವತಿಯಿಂದ ಕೃತಜ್ಞತೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಿಸಿದ ಸ್ನೇಹಾ ಪ್ರಿಂಟರ್ಸ್ ಅವರ ಸಹಾಯವನ್ನು ಸ್ಮರಿಸುತ್ತೇನೆ.

ಈ ಮಾಲೆಯಲ್ಲಿ ಸುಮಾರು ನೂರು ಪುಸ್ತಕಗಳನ್ನು ಹೊರತರುವದು ಮೊದಲ ಯೋಜನೆಯಾಗಿತ್ತು. ಈಗ ಅದರ ಪ್ರಾರಂಭದ ಹಂತವೆಂದು ಪ್ರಾತಿನಿಧಿಕವಾದ ಕನ್ನಡ ಕವಿ-ಕಾವ್ಯಗಳನ್ನು ಆರಿಸಿಕೊಂಡು ಹನ್ನೆರಡು ಪುಸ್ತಕಗಳ ಒಂದು ಕಂತು ಬಿಡುಗಡೆ ಆಗುತ್ತಿದೆ. ಹಣದ ಅನುಕೂಲ ಮತ್ತು ಲೇಖಕರ ಸಕಾಲಿಕ ಬೆಂಬಲದಿಂದ ಯಥಾವಕಾಶ ಉಳಿದ ಪುಸ್ತಕಗಳನ್ನು ಪ್ರಕಟಿಸುವ ಉದ್ದೇಶವಿದೆ.

**ಹಂಪ. ನಾಗರಾಜಯ್ಯ**

# ಜೈನಕಥಾಸಾಹಿತ್ಯ ಮತ್ತು ಜಾನಪದ

## ಅಧ್ಯಾಯ - ೧

### ಪ್ರವೇಶಿಕೆ

ಜೈನ ಸಾಹಿತ್ಯದಲ್ಲಿ ಕಥೆಗಳ ಬಹು ದೊಡ್ಡ ಭಂಡಾರವಿದೆ. ಇಡೀ ಜೈನ ವಾಙ್ಮಯವನ್ನು ನಾಲ್ಕು 'ಅನುಯೋಗ'ಗಳಾಗಿ ವಿಭಾಗಿಸಲಾಗುತ್ತದೆ. ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗ ಎಂದು ಈ ವಿಭಾಗಗಳಿಗೆ ಹೆಸರು. ಇದರಲ್ಲಿ 'ಪ್ರಥಮಾನುಯೋಗ' ಎಂಬ ವಿಭಾಗದಲ್ಲಿ ಅರವತ್ತೂಮ್ರು ಶಲಾಕಾಪುರುಷರ ಚರಿತ್ರೆ ಬರುತ್ತದೆ. (ತೀರ್ಥಂಕರರು, ಅವರ ಕಾಲದಲ್ಲಿನ ಕಾಮದೇವರುಗಳು, ಚಕ್ರವರ್ತಿಗಳು, ವಾಸುದೇವ ಹಾಗೂ ಪ್ರತಿವಾಸುದೇವರುಗಳು - ಇವರುಗಳನ್ನೆಲ್ಲ ಸೇರಿಸಿ ಶಲಾಕಾಪುರುಷರು ಎಂದು ಜೈನಶಾಸ್ತ್ರದಲ್ಲಿ ಕರೆಯಲಾಗುತ್ತದೆ.) ಇಷ್ಟೊಂದು ಜನರ ಚರಿತ್ರೆಯನ್ನು ಅವರ ಭವಾವಳಿಗಳು, ಅವರ ಬುದ್ಧಿವಂತಿಕೆ, ಎದುರಿಸಿದ ವಿಪತ್ತುಗಳು ಇತ್ಯಾದಿಗಳ ಸಮೇತ ಹೇಳಬೇಕಾದಾಗ ಸಹಜವಾಗಿಯೇ ಅಲ್ಲಿ ಸಾವಿರಾರು ಕಥೆಗಳ ಹುಟ್ಟಿಗೆ, ಸಮಾವೇಶಕ್ಕೆ ಆಸ್ಪದವಾಗುತ್ತದೆ. ಇದಲ್ಲದೆ ಶ್ರಾವಕರ (ಜೈನ ಗೃಹಸ್ಥರ) ಆಚಾರಕ್ಕೆ ಸಂಬಂಧಿಸಿದ ಸಾಹಿತ್ಯವೂ ಈ ಪ್ರಥಮಾನುಯೋಗದಲ್ಲೇ ಬರುತ್ತದೆ. ಯಾವ ಯಾವ ನಿಯಮಗಳನ್ನು ಯಾತಕ್ಕಾಗಿ ಅನುಸರಿಸಬೇಕು, ಅದರಿಂದ ಭ್ರಷ್ಟನಾದರೆ ಏನಾಗುತ್ತದೆ - ಇಂಥವನ್ನೆಲ್ಲ ಮನಂಬುಗುವಂತೆ ಹೇಳಲು ಕಥೆಗಳೇ ಬಹು ಪ್ರಭಾವೀ ಸಾಧನ.

ಅಂತೆಯೇ- ಸಾವಿರಾರು ವರ್ಷಗಳಿಂದ ಜೈನ ಲೇಖಕರು ವಿಸ್ತಾರವೂ ವೈವಿಧ್ಯಮಯವೂ ಆದ ಕಥಾಸಾಮ್ರಾಜ್ಯವೊಂದನ್ನು ಕಟ್ಟಿ ನಿಲ್ಲಿಸಿದ್ದಾರೆ. ಎಲ್ಲೆಲ್ಲಿಂದಲೋ ಚೆಲುವಾದ ಮರಗಿಡ ಬಳ್ಳಿಗಳನ್ನಿಲ್ಲಿ ತಂದು ನೆಟ್ಟು ಬೆಳೆಸಿ

ಜೀವಂತಿಕೆ ಇಲ್ಲಿ ನಗುವಂತೆ ಮಾಡಿದ್ದಾರೆ. ತಮ್ಮ ಕಲ್ಪನಾ ಸೃಷ್ಟಿಯಿಂದಷ್ಟೆ ಅಲ್ಲದೆ, ಜನಪದದಲ್ಲಿ ಬಾಯ್ದೆರೆಯಾಗಿ ಪ್ರಚಲಿತವಾಗಿದ್ದ ಕಥಾ ಮಣಿರತ್ನಗಳನ್ನು, ಅವುಗಳ ಮೌಲ್ಯವನ್ನರಿತು ಜತನದಿಂದೆತ್ತಿಕೊಂಡು ಕೆಲವೊಮ್ಮೆ ಸಾಣೆಹಿಡಿದು ತಮ್ಮ ಮಾಡಗಳಲ್ಲಿ ಸರಿಯಾದ ಕಡೆಗಳಲ್ಲಿ ಚೆಂದವಾಗಿ ಅಳವಡಿಸಿ, ಅವುಗಳ ಪ್ರತಿಭೆ ಉಪಯುಕ್ತವಾಗಿ ದೊರೆಕೊಳ್ಳುವಂತೆ ಮಾಡಿ ತಮ್ಮ ಸಾಹಿತ್ಯ ಭವನದ ಸಿರಿವಂತಿಕೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಪ್ರಾಯಶಃ ಬೌದ್ಧರನ್ನು ಬಿಟ್ಟರೆ ಭಾರತದ ಇನ್ನಾವ ಧರ್ಮೀಯರೂ ಜನಪದ ಕಥೆಗಳನ್ನು ಇಷ್ಟೊಂದು ವ್ಯಾಪಕವಾಗಿ, ಸಾರ್ಥಕವಾಗಿ ದುಡಿಸಿಕೊಂಡಿಲ್ಲ.

ಕಥೆಗಳ ಸ್ವರೂಪ, ತಾಂತ್ರಿಕತೆ, ಉದ್ದೇಶಗಳ ಬಗೆಗೆ ಜೈನ ಸಾಹಿತ್ಯ ಪರಂಪರೆಯಲ್ಲಿ ಬಹು ಹಿಂದೆಯೇ ವಿವೇಚನೆ ನಡೆದಿದೆ. 'ದಶವೈಕಾಲಿಕ ವೃತ್ತಿ' (ಹರಿಭದ್ರಾಚಾರ್ಯ), ಪೂರ್ವಪುರಾಣ (ಜಿನಸೇನಾಚಾರ್ಯ), 'ಕಾವ್ಯಾನುಶಾಸನ' (ಹೇಮಚಂದ್ರ), ಚಾಮುಂಡರಾಯ ಪುರಾಣ, ಪದಾರ್ಥಸಾರ ಮೊದಲಾದ ಕೆಲವು ಗ್ರಂಥಗಳಲ್ಲೂ ಕಥೆಯ ಭೇದಗಳು, ಅವುಗಳ ಲಕ್ಷಣಗಳು ಇತ್ಯಾದಿಗಳ ವಿವೇಚನೆ ಇದೆ. ಡಾ.ಎಂ.ಎ. ಜಯಚಂದ್ರ ಅವರು ತಮ್ಮ ಮಹಾಪ್ರಬಂಧ - 'ಕನ್ನಡ ಜೈನ ಸಾಹಿತ್ಯದಲ್ಲಿ ಜಾನಪದ ಕಥೆಗಳು - ಒಂದು ಅಧ್ಯಯನ'ದಲ್ಲಿ (ಪ್ರ:ಕ.ಸಾ.ಪ. ೧೯೯೪) ಈ ವಿವಿಧ ಆಕರಗಳಲ್ಲಿ ನೀಡಲ್ಪಟ್ಟಿರುವ ವಿವೇಚನೆಯ ವಿವರ ನೀಡಿದ್ದಾರೆ. ಸ್ಥೂಲ ಪರಿಚಯ ಸಾಕೆನ್ನುವವರು ಅದನ್ನು ನೋಡಬಹುದು. ಪ್ರಸ್ತುತದಲ್ಲಿ ಅತ್ಯಗತ್ಯವಾದ ಕೆಲವು ಮಾಹಿತಿಗಳನ್ನು ಹೀಗೆ ಸಂಗ್ರಹಿಸಬಹುದು:

ಸಾಮಾನ್ಯ ಕಥೆಗಳಲ್ಲಿ ಮೂರು ಬೇಧ - ಅಕಥಾ, ಕಥಾ, ವಿಕಥಾ. ಸಂಸಾರದಲ್ಲಿ ಪರಿಭ್ರಮಣಕ್ಕೆ ಕಾರಣವಾಗುವ ಮಿಥ್ಯಾತ್ವದ ಉಪದೇಶವುಳ್ಳ ಕಥೆಗಳು ಅಕಥಾ. ವ್ಯಕ್ತಿ ಅಥವಾ ಲೋಕದ ಕಲ್ಯಾಣವನ್ನು ಉದ್ದೇಶಿಸಿರುವ ಪವಿತ್ರ ವ್ಯಕ್ತಿಗಳಿಂದ ನಿರೂಪಿತವಾದ ಕಥೆಗಳೇ - ಕಥಾ (ಇದನ್ನು ಸತ್ಕಥೆ, ಧರ್ಮಕಥೆ ಎಂದೂ ಕರೆಯಲಾಗುತ್ತದೆ). ರಾಗ ದ್ವೇಷಗಳನ್ನು ಉತ್ತೇಜಿಸಿ ಸಮಾಜ ಪತನಕ್ಕೆ ಕಾರಣವಾಗುವ ಕತೆಗಳು - ವಿಕಥಾ: ಇದರಲ್ಲಿ ಹಲವು ಭೇದಗಳಿವೆ. 'ಕಥಾ' ಶ್ರೇಷ್ಠ ಮತ್ತು ಆ ಕಾರಣದಿಂದ ಗ್ರಾಹ್ಯ. ಇವುಗಳಲ್ಲಿ ಧರ್ಮದ ವಿಶೇಷ ರೀತಿಯ ನಿರೂಪಣೆ ಇರುತ್ತದೆ. ಇವು ಮೋಕ್ಷ ಸಂಪಾದನೆಗೆ ಸಹಕಾರಿ. ಧರ್ಮದಿಂದಲೇ ಅರ್ಥ ಕಾಮಗಳ ಪ್ರಾಪ್ತಿಯಾಗುವುದನ್ನು ಈ ಕಥೆಗಳು ನಿರೂಪಿಸುತ್ತವೆ.

ಕಥೆಗಳನ್ನು ಇನ್ನೂ ಒಂದು ಬಗೆಯಲ್ಲಿ ಜೈನರು ವರ್ಗೀಕರಿಸಿದ್ದಾರೆ - ಅರ್ಥಕಥೆ, ಕಾಮಕಥೆ, ಧರ್ಮಕಥೆ, ಮಿಶ್ರಿತ ಕಥೆಗಳೆಂದು. ಜೀವನೋಪಾಯ ಮಾರ್ಗಗಳನ್ನು ನಿರೂಪಿಸುವುವು ಅರ್ಥಕಥೆಗಳು (ರಾಜಕಾರ್ಯವೂ ಇದರಲ್ಲೇ ಬರುತ್ತದೆ). ಕಾಮಕಥೆಗಳು ಸ್ತ್ರೀ-ಪುರುಷರ ಅನುರಾಗ ಸುಖಸಂತೋಷಗಳನ್ನು ನಿರೂಪಿಸುತ್ತವೆ. ಧರ್ಮಾಚರಣೆಯ ವಿವಿಧ ಅಂಗಗಳು, ಅವುಗಳ ಮಹಿಮೆ, ಫಲ ಇತ್ಯಾದಿಗಳ ನಿರೂಪಣೆಯನ್ನು ಮಾಡುವ ಕಥೆಗಳೇ ಧರ್ಮಕಥೆಗಳು. ಮಿಶ್ರಕಥೆಗಳು ಸಂಕೀರ್ಣ ಕಥೆಗಳಾಗಿವೆ. ಇವುಗಳಲ್ಲಿ ಧರ್ಮ, ಅರ್ಥ, ಕಾಮ - ಮೂರೂ ಪುರುಷಾರ್ಥಗಳ ನಿರೂಪಣೆಯು ಉದಾಹರಣೆ ಹಾಗೂ ಕಾರಣಗಳ ಸಮೇತ ನಿರೂಪಿತವಾಗಿರುತ್ತದೆ.

ಕಥೆಗಳನ್ನು ಮೂರನೆಯ ಬಗೆಯಲ್ಲಿ ವಿಂಗಡಿಸುವ ಸಂಪ್ರದಾಯವೂ ಜೈನ ಸಾಹಿತ್ಯದಲ್ಲಿದೆ. ಇದು - ಅಲ್ಲಿನ ಪಾತ್ರವರ್ಗವನ್ನು ಅನುಲಕ್ಷಿಸಿ ಮಾಡುವ ವಿಭಾಗಕ್ರಮ. ಇದರಲ್ಲಿ ಕಥೆಗಳನ್ನು - ದೈವಿಕ, ದೇವಮಾನುಷಿಕ ಹಾಗೂ ಮಾನುಷಿಕ ಎಂದು ಮೂರು ಪ್ರಕಾರವಾಗಿ ವಿಭಾಗಿಸಲಾಗಿದೆ.

ಉದ್ಯೋತನಸೂರಿಯು ತನ್ನ 'ಕುವಲಯಮಾಲಾ'ದಲ್ಲಿ ಕಥಾ ನಿರೂಪಣೆಯ ತಂತ್ರವನ್ನೇ ಪ್ರಧಾನವಾಗಿಟ್ಟುಕೊಂಡು ಅವುಗಳನ್ನು- ಸಕಲಕಥೆ, ಖಂಡಕಥೆ, ಉಲ್ಲಾಪ ಕಥೆ, ಪರಿಹಾಸ ಕಥೆ ಹಾಗೂ ಸಂಕೀರ್ಣ ಕಥೆಗಳೆಂದು ಐದು ಭಾಗಗಳಾಗಿ ವಿಂಗಡಿಸುತ್ತಾನೆ. ಎಲ್ಲ ರಸಗಳ ನಿರೂಪಣೆ ಇದ್ದು ಉದಾತ್ತ ನಾಯಕನನ್ನುಳ್ಳದ್ದು - ಸಕಲಕಥೆ. ಜೀವನದ ಲಘುಚಿತ್ರವನ್ನುಳ್ಳ, ವ್ಯಕ್ತಿಯ ಜೀವನದ ಒಂದು ಸಣ್ಣ ಭಾಗವನ್ನು ಮಾತ್ರ ಹೇಳುವುದು - ಖಂಡಕಥೆ. ಅಸಂಭವ ಅಥವಾ ಕಷ್ಟಸಾಧ್ಯ ಕಾರ್ಯಗಳನ್ನು ಸಾಧಿಸಿದುದರ ವರ್ಣನೆ ಇರುವ ಸಾಹಸಕಥೆಗಳೇ ಉಲ್ಲಾಪ ಕಥೆಗಳು. ಹಾಸ್ಯವನ್ನೂ ವ್ಯಂಗ್ಯವನ್ನೂ ಒಳಗೊಂಡ ಕಥೆಗಳೇ ಪರಿಹಾಸ ಕಥೆಗಳು.

ಜನಪದ ಕತೆಗಳನ್ನು ಹಲವು ಬಗೆಯಾಗಿ ವಿಂಗಡಿಸಿರುವುದು ನಮಗೆ ಗೊತ್ತಿದೆ- ನೀತಿ ಕಥೆಗಳು, ಪ್ರಾಣಿಕಥೆಗಳು, ಕಿನ್ನರ ಕಥೆಗಳು, ಅತಿ ಮಾನುಷ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ದಡ್ಡರ ಕಥೆಗಳು ಇತ್ಯಾದಿ. ಇವೆಲ್ಲ ಮುಖ್ಯ ಆಶಯಗಳಿಗನುಗುಣವಾಗಿ ಮಾಡುವ ವಿಭಾಗೀಕರಣ. ಜೈನ ಕಥಾಸಾಹಿತ್ಯವನ್ನು ಈ ವಿಭಾಗಗಳೂ ಒಳಗೊಳ್ಳುವಂತೆ ವರ್ಗೀಕರಿಸಲಾಗಿದೆ ಎಂಬುದನ್ನೂ ನಾವು

ಮೇಲಿನ ವಿವರಣೆಯಿಂದ ಕಂಡುಕೊಳ್ಳಬಹುದು. (ಉದಾ.ಗೆ -'ನೀತಿಕಥೆಗಳು' ಎಂಬ ವರ್ಗ ಜಾನಪದದಲ್ಲಿರುವಂತೆ ಜೈನ ಕಥಾಖ್ಯಾನಗಳಲ್ಲೂ ಇದೆ. ಅದೇ ರೀತಿ 'ದೈವಿಕ ಕಥೆ'ಗಳೆಂದು ಜೈನ ಆಚಾರ್ಯರು ಕರೆದಿರುವ ಕತೆಗಳೇ ಜಾನಪದದಲ್ಲಿ ಕಿನ್ನರ ಕತೆಗಳಾಗಿವೆ. ಇತ್ಯಾದಿ). ಅದೇ ರೀತಿ - ಆರ್ನೆ ಆಂಟಿ ಹಾಗೂ ಸ್ಟಿಥ್ ಥಾಂಪ್ಸನ್ ಅವರ ಜನಪದ ಕಥೆಗಳ ಆಶಯ ಸೂಚಿಯಲ್ಲಿನ ಅದೆಷ್ಟೋ ಆಶಯಗಳು ಜೈನ ಕಥಾ ಸಾಹಿತ್ಯದಲ್ಲಿನ ಕಥೆ, ಉಪಕಥೆ, ದೃಷ್ಟಾಂತಗಳಲ್ಲಿ ಕಾಣ ಸಿಗುತ್ತವೆ. ಅಷ್ಟೇ ಅಲ್ಲ - ಇಲ್ಲಿನವುಗಳನ್ನೂ ಹೋಲುವ, ಕಂಠಸ್ಥ ಸಂಪ್ರದಾಯದಲ್ಲಿ ಹರಿದು ಬಂದು ಈಚೆಗೆ ಪ್ರಕಟವಾಗಿರುವ ಜಾನಪದ ಕತೆಗಳೂ ಸಿಗುತ್ತವೆ. ಜೈನ ಲೇಖಕರು ಸಾವಿರಾರು ವರ್ಷಗಳ ಹಿಂದಿನಿಂದಲೇ ಭಾರತೀಯ ಜನಪದ ಕತೆಗಳ ಭಂಡಾರವನ್ನು ಲೂಟಿ ಹೊಡೆದಿದ್ದಾರೆಂಬುದು ಇದರಿಂದ ಸಾಬೀತಾಗುತ್ತದೆ. ಜನಪದ ಕತೆಗಳನ್ನು ಶಿಷ್ಟಸಾಹಿತ್ಯದಲ್ಲಿ ಎಷ್ಟು ಪರಿಣಾಮಕಾರಿಯಾಗಿ, ಕಲಾತ್ಮಕವಾಗಿ ಬಳಸಿಕೊಳ್ಳಬಹುದೆಂಬುದನ್ನು ತಿಳಿಯುವುದಕ್ಕೆ ಜೈನ ಕಥಾ ಸಾಹಿತ್ಯದಷ್ಟು ಸೊಗಸಾದ ಆಕರ ಕನ್ನಡದಲ್ಲಿ ಬಹುಶಃ ಬೇರೊಂದಿಲ್ಲ.

ಬರಿ ಜನಪದ ಕತೆಗಳಷ್ಟೇ ಅಲ್ಲ, ಅನೇಕ ಅನ್ಯ ಜಾನಪದ ಅಂಶಗಳನ್ನೂ, ಸಂವೇದನೆಗಳನ್ನೂ ಜೈನ ಕಥಾ ಸಾಹಿತ್ಯದಿಂದ ವಿಫುಲವಾಗಿ ಹೆಕ್ಕಿ ತೋರಿಸಬಹುದು. ನಾಣ್ಣುಡಿಗಳು, ಗಾದೆಮಾತುಗಳು, ನಂಬಿಕೆಗಳು, ಜಾನಪದ ಅಡುಗೆಗಳು, ಆಟಗಳು, ನಡವಳಿಕೆಗಳು, ಆಶಯಗಳು - ಇಂಥ ಹಲವಾರು ಸಂಗತಿಗಳನ್ನು ಜೈನ ಕಥಾ ಸಾಹಿತ್ಯ ಸಮಕಾಲೀನ ಜಾನಪದದಿಂದ ತೆಗೆದು ತನ್ನಲ್ಲಿ ಅಳವಡಿಸಿಕೊಂಡು ತನ್ನ ಅರ್ಥವಂತಿಕೆ ಕಲಾತ್ಮಕತೆಗಳನ್ನು ಹೆಚ್ಚಿಸಿಕೊಂಡಿದೆ.

ಕನ್ನಡದಲ್ಲಿನ ಜೈನ ವಾಙ್ಮಯದಲ್ಲಿ ಒಬ್ಬನೇ ವ್ಯಕ್ತಿಯ ಕಥೆಯನ್ನು ಹೇಳುವುದನ್ನೇ ಪ್ರಧಾನ ಉದ್ದೇಶವಾಗಿ ಉಳ್ಳ (ಸಕಲ ಕಥೆ) ಕಾವ್ಯಗಳಿರುವಂತೆಯೇ (ಉದಾ- ಆದಿಪುರಾಣ, ಜೀವಂಧರ ಚರಿತೆ, ಶಾಂತಿಪುರಾಣ ಇತ್ಯಾದಿ), ಬಿಡಿ ಬಿಡಿ ಕತೆಗಳ ಸಂಗ್ರಹ ಕಾವ್ಯಗಳೂ ಇವೆ. ಈ ಎರಡನೇ ಗುಂಪಿನ ಕೃತಿಗಳನ್ನೇ 'ಜೈನ ಕಥಾ ಸಾಹಿತ್ಯ' ಎಂದು ಕರೆಯಲಾಗಿದೆ. ಕನ್ನಡದಲ್ಲಿನ ಜೈನ ಕಥಾಸಾಹಿತ್ಯದ ಪ್ರಮುಖ ಕೃತಿಗಳು ಇವು-

೧. ವಡ್ಡಾರಾಧನೆ - ಭ್ರಾಜಿಷ್ಣು ಕೃತ - ಕಾಲ.ಸು. ೧೦ನೇ ಶತಮಾನ.

೨. ಪುಣ್ಯಾಸ್ರವ - ನಾಗರಾಜ ಕೃತ - ಕಾಲ.ಸು.೧೪ನೇ ಶತಮಾನ.

೩. ಧರ್ಮಾಮೃತ - ನಯಸೇನ ಕೃತ - ಕಾಲ.ಸು. ೧೨ನೇ ಶತಮಾನ.

೪. ಧರ್ಮಪರೀಕ್ಷೆ - ವೃತ್ತವಿಲಾಸ ಕೃತ - ಕಾಲ.ಸು. ೧೪ನೇ ಶತಮಾನ.

೫. ಸಮಯ ಪರೀಕ್ಷೆ - ಬ್ರಹ್ಮಶಿವ ಕೃತ - ೧೨ನೇ ಶತಮಾನ.

೬. ಜೀವಸಂಬೋಧನೆ - ಬಂಧುವರ್ಮ.

೭. ಸಮ್ಯಕ್ತ್ವ ಕೌಮುದಿ-ಮೂರನೆಯ ಮಂಗರಸ ಸು. ೧೬ನೇ ಶತಮಾನ.

ಈ ಏಳರ ಪೈಕಿ ಮುಖ್ಯವಾಗಿ ಪುಣ್ಯಾಸ್ರವ, ಧರ್ಮಾಮೃತ, ಧರ್ಮ ಪರೀಕ್ಷೆ ಹಾಗೂ ಸಮಯಪರೀಕ್ಷೆಗಳನ್ನು ಮುಖ್ಯವಾಗಿ ಆಧಾರವಾಗಿಟ್ಟು- ಕೊಂಡು ಜೈನ ಕಥಾ ಸಾಹಿತ್ಯದಲ್ಲಿ ಅಳವಟ್ಟಿರುವ ಜಾನಪದೀಯತೆಯ ಪರಿಶೀಲನೆ ಮಾಡಲಾಗಿದೆ. 'ಸಮಯ ಪರೀಕ್ಷೆ'ಯಲ್ಲಿ ನೇರವಾದ ಕತೆಗಳಿಲ್ಲ, ಆದರೆ ದೃಷ್ಟಾಂತ ಹಾಗೂ ಉಲ್ಲೇಖವಾಗಿ ಅಲ್ಲಲ್ಲಿ ಕೆಲವು ಕತೆಗಳ ವಿಚಾರ ಬರುತ್ತದೆ. ಗಾದೆ ಮಾತುಗಳೂ ಆ ವಿಡಂಬನ ಕಾವ್ಯದಲ್ಲಿ ಸಾಕಷ್ಟಿವೆ. ಈ ಕಾರಣದಿಂದ ಈ ಕಾವ್ಯವನ್ನೂ ಇಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ. ಈ ನಾಲ್ಕು ಕೃತಿಗಳ ಬಗೆಗೆ ಒಂದು ಪರಿಚಯಾತ್ಮಕ ಲೇಖನವನ್ನು ಅನುಬಂಧದಲ್ಲಿ ಪ್ರಥಮ ಮಾಹಿತಿಗಾಗಿ ನೀಡಲಾಗಿದೆ.

೦

## ಅಧ್ಯಾಯ - ೨

# ಜೈನ ಕಥಾ ಸಾಹಿತ್ಯದಲ್ಲಿ ಜನಪದ ಕಥೆಗಳು

ಈ ಹಿಂದೆಯೇ ತಿಳಿದಂತೆ ಜೈನ ಕಥಾ ಸಾಹಿತ್ಯ ಅನೇಕ ಕಥೆಗಳ ಆಕರವಾಗಿದ್ದು, ಇವುಗಳಿಗೆ ದೊಡ್ಡ ಪರಂಪರೆಯೇ ಸಂಸ್ಕೃತ ಹಾಗೂ ಪ್ರಾಕೃತ ಜೈನ ಸಾಹಿತ್ಯದಲ್ಲಿದೆ. ಮುಖ್ಯ ಕಥೆಗಳಲ್ಲದೆ ಹಲವು ಉಪಕಥೆಗಳೂ, ದೃಷ್ಟಾಂತಗಳೂ ಉಲ್ಲೇಖ ಮಾತ್ರವಾಗಿ ಕೆಲವು ಕಥೆಗಳ ಸೂಚನೆಗಳೂ ಈ ಕೃತಿಗಳಲ್ಲಿ ದೊರೆಯುತ್ತವೆ.

ಅವಲೋಕನಕ್ಕಾಗಿ ಎತ್ತಿಕೊಂಡಿರುವ ಜೈನ ಕಥಾ ಸಾಹಿತ್ಯದ ಕೃತಿಗಳಲ್ಲಿ ದೊರೆಯುವ ಗಮನಾರ್ಹ ಕಥೆಗಳ ಸಂಖ್ಯೆ ಹೀಗಿದೆ - ಧರ್ಮಪರೀಕ್ಷೆ - ೨೧, ಪುಣ್ಯಾಸ್ರವ-೫೭, ಧರ್ಮಾಮೃತ-೧೪, ಒಟ್ಟು ೯೨. ಇವಲ್ಲದೆ ಅನೇಕ ಕತೆಗಳು ಅತಿ ಸಂಕ್ಷಿಪ್ತವಾಗಿಯೂ, ಉಲ್ಲೇಖಮಾತ್ರವಾಗಿಯೂ ಹೇಳಲ್ಪಟ್ಟಿರುವುದುಂಟು. ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಮುಖ್ಯವಾದ ಕತೆಗಳಿಲ್ಲ. ಎಲ್ಲವೂ ಸಾಂದರ್ಭಿಕವಾಗಿ ಉಲ್ಲೇಖವಾದವುಗಳು.

ಜಾನಪದ ಆಶಯಗಳನ್ನೂ ಶೈಲಿಯನ್ನೂ ಹೊಂದಿದ್ದು ಈ ಕಾವ್ಯಗಳಲ್ಲಿ ಬಳಸಿಕೊಳ್ಳಲ್ಪಟ್ಟಿರುವ ಕೆಲವು ಮುಖ್ಯ ಕತೆಗಳ ಬಗ್ಗೆ ಈಗ ವಿವೇಚಿಸಬಹುದು.

### ೧. ಸುಧಾಮೆಯ ಕತೆ

ನಾಗರಾಜ ಕವಿಯ 'ಪುಣ್ಯಾಸ್ರವ' ಎಂಬ ಚಂಪೂ ಕಾವ್ಯದ ಷಷ್ಠಾಧಿಕಾರದಲ್ಲಿ ಬರುವ 'ಸೂರ್ಯಮಿತ್ರ ಸುಕುಮಾರ ಸ್ವಾಮಿಯ ಕತೆ'ಯಲ್ಲಿ ಒಂದು ಒಳಗತೆಯಾಗಿ ಈ ಕತೆ ಬರುತ್ತದೆ. ಇದೇ ಕತೆ ಅಲ್ಪ ವ್ಯತ್ಯಾಸಗಳೊಡನೆ ವಡ್ಡಾರಾಧನೆಯಲ್ಲೂ ಸುಕುಮಾರ ಚರಿತೆ ಕಾವ್ಯದಲ್ಲೂ ಬರುತ್ತದೆ.

ಕಥೆಯ ಸಾರಾಂಶವಿಷ್ಟು - ಒಬ್ಬ ಶೆಟ್ಟಿಯ ಮಗನಿಗೆ ಹಾವು ಕಚ್ಚಿ ಸತ್ತಾಗ ಸುಡಲೆಂದು ಸ್ಮಶಾನಕ್ಕೆ ಒಯ್ದು ಸುಡುವ ಸಿದ್ಧತೆ ನಡೆಸಿದರು. ಆಗ 'ನಾನಾದೇಶಂಗಳಂ ತಿರುಗಿ ಪರದರಮಗ ಗರುಡನಾಭಿ ಎಂಬ ಗಾರುಡವಿದ್ಯಾವಿಶಾರದಂ ಬಂದವಳ ಸ್ವರೂಪಮಂ ಕೇಳ್ದು....... ಈ ಕುಮಾರಿಯಂ ನೀವೆನಗೆ ಕುಡುವೆಡೆ ಈಗಳಿಂತೆತ್ತುವೆನ್' ಎಂದನು. ತಂದೆ ಅದಕ್ಕೊಪ್ಪಿದನು. ಆತನು 'ಪ್ರಭಾತದೊಳ್ ನಿರ್ವಿಷಮಂ ಮಾಳ್ಪೆನ್........ ಈ ಶವಮಂ ಸುರಕ್ಷಿತಂ ಮಾಡಿ'ರೆಂದು ಹೇಳಿ ಹೋದನು. ಆಗಲೆಂದು ಆ ಶೆಟ್ಟಿಯು ಒಪ್ಪಿ ಆಕೆಯ ಶವಮಂಟಪದ ನಾಲ್ಕೂ ಬದಿಗೂ ಸಾವಿರ ಹೊನ್ನಿನ ಪೊಟ್ಟಣಗಳನ್ನು ಕಟ್ಟಿ, ಕಾವಲುಭಟರನ್ನು ನಿಯಮಿಸಿ ಅವರಿಗೆ ಆ ಹೊನ್ನು ಉಡುಗೊರೆಯಾಗಿ ನೀಡಲ್ಪಡುವುದೆಂದನು. ಅವರು ಒಪ್ಪಿದರು. ಆ ನಾಲ್ವರಲ್ಲಿ ಮೂವರು ಕಾವಲು ಕಾಯದೆ ಬೇರೆ ಬೇರೆ ಕೆಲಸಕ್ಕೆಂದು ರಾತ್ರಿ ಹೋಗಿಬಂದರು. ಶೆಟ್ಟಿ ಮನೆಗೆ ಹೋದನು. ಮರುದಿನ ಬೆಳಿಗ್ಗೆ ಗರುಡನಾಭಿ ಅವಳನ್ನು ಬದುಕಿಸಿ ಮದುವೆಯಾದ. ಆದರೆ ನಾಲ್ಕು ಪೊಟ್ಟಣಗಳಲ್ಲಿ ಒಂದು ಕಾಣೆಯಾಗಿತ್ತು. ಶೆಟ್ಟಿಯು - 'ಯಾರು ಅದನ್ನು ತೆಗೆದುಕೊಂಡಿದ್ದಾರೆಯೋ ಅವರ ಪಾಲಿನ ಹಣ ಕೊಟ್ಟಂತಾಯಿತು. ಉಳಿದವರು ಒಂದೊಂದನ್ನು ತೆಗೆದುಕೊಳ್ಳಿರಿ ಎಂದರೆ ಅವರು 'ನಾವಾರುಂ ಕೊಂಡುದಿಲ್ಲ ಬಲ್ಲಂದಂ ಮಾಡೆನಲ್' ಶೆಟ್ಟಿ ಕೆರಳಿ ದೊರೆಗೆ ದೂರು ಕೊಡುತ್ತಾನೆ. ದೊರೆ ಕಳ್ಳನನ್ನು ಹಿಡಿಯುವ ಜವಾಬ್ದಾರಿಯನ್ನು ತಳವಾರನಿಗೆ ಒಪ್ಪಿಸುತ್ತಾನೆ.

ಇಲ್ಲಿಯವರೆಗೆ ಕತೆಯ ಮೊದಲಭಾಗ.

ಮುಂದಿನ ಭಾಗ ಹೀಗಿದೆ- ತಲೆಬಿಸಿ ಮಾಡಿಕೊಂಡ ತಳಾರ ನಾಲ್ವರುಂ ಹಿಡಿದೊಯ್ದು ತನ್ನ ನಿವಾಸಕ್ಕೆ ತಂದಾಗ ಆವನ ಮಗಳು ಸುಮತಿ ಎನ್ನುವವಳು ಕಳ್ಳನನ್ನು ಹಿಡಿಯಲು ಮುಂದಾಗುತ್ತಾಳೆ. ಅವರಿಗೆ ಚೆನ್ನಾಗಿ ಮಜ್ಜನಭೋಜನಗಳನ್ನು ಏರ್ಪಡಿಸಿ ತನ್ನ ಸಜ್ಜಾಗೃಹದೊಳಗೆ ಬೇರೆಬೇರೆಯಾಗಿ ಕರೆಸಿಕೊಂಡು ಕಥೆಯೊಂದನ್ನು ಹೇಳುತ್ತಾಳೆ. ಅದರ ಸಾರಾಂಶವಿಷ್ಟು-

ಸುಧಾಮೆ ಎಂಬುವಳೊಬ್ಬಳು ಒಂದು ಕೊಳದಲ್ಲಿ ಕಾಲು ತೊಳೆಯುತ್ತಿದ್ದಾಗ 'ಅಲ್ಲಿರ್ದನಕ್ರಂ ಚೆಕ್ಕನೆ ಚರಣಮಂ ಪಿಡಿಯಲತಿಭೀತೆಯಾಗಿ' ಅಲ್ಲೇ ಇದ್ದ ಮೈದುನ ಧನದೇವನನ್ನು ನೆರವಿಗೆ ಕರೆಯುತ್ತಾಳೆ. ಆಕೆ ಲಗ್ನವಾದ ಮೊದಲ ದಿನ

ಸರ್ವಾಲಂಕಾರದೊಂದಿಗೆ ತನ್ನ ಬಳಿ ಬರಬೇಕೆಂದು ಮಾತು ತೆಗೆದುಕೊಂಡು ಆಕೆಯನ್ನಾತ ಬಿಡಿಸುತ್ತಾನೆ. ಅದರಂತೆ ಆಕೆ ಲಗ್ನವಾದ ದಿನ ರಾತ್ರಿ ಅವನ ಮನೆಗೆ ಹೋಗುತ್ತಿರುವಾಗ ಕಳ್ಳನೊಬ್ಬ ಅಡ್ಡಗಟ್ಟಿ ಆಭರಣಗಳನ್ನು ಕೊಡುವಂತೆ ಕೇಳುತ್ತಾನೆ. ತಾನೊಂದು ವಚನ ಪಾಲಿಸಲು ಹೋಗುತ್ತಿರುವುದಾಗಿಯೂ ಹಿಂತಿರುಗಿ ಬರುವಾಗ ಕೊಡುವುದಾಗಿಯೂ ಹೇಳುತ್ತಾಳೆ. ಅದೇ ರೀತಿ ಮುಂದೆ ಸಿಕ್ಕಿದ ಜಟ್ಟಿಗ, ಭೂತ, ತಳವಾರರಿಗೂ ಹಾಗೆ ಭಾಷೆ ಕೊಟ್ಟು ಹೋಗಿ ಮೈದುನನ ಮನೆ ಸೇರುತ್ತಾಳೆ. ತಾನು ಮಾತು ಕೊಟ್ಟಂತೆ ಅಲಂಕರಣವನ್ನು ತೋರಿಸಲು ಬಂದಿರುವುದಾಗಿ ಹೇಳುತ್ತಾಳೆ. ಆತ "ನನಗೆ ನಾದುನಿಯಪ್ಪ ಕಾರಣದಿಂ ನಿನ್ನೊಳ್ ಸರಸಮನಾಡಿದೆನಲ್ಲದೆ ನೀನೀಗಳು ಪರಸ್ತ್ರೀ ನೀನೆಂಬುದೆನ್ನೊಡಹುಟ್ಟಿದವಳು. ನೀಂ ಘಳಿಲನೆ ನಿನ್ನ ಮನೆಗೆ ಪೋಗು" ಎಂದು ಕಳಿಸುತ್ತಾನೆ. ಅವಳಿಗರಿಯದಂತೆ ಹಿಂಬಾಲಿಸಿ ಬಂದಿದ್ದ ಕಳ್ಳ, ಭೂತ ಹಾಗೂ ತಳವಾರ ಮೂವರೂ ಇದನ್ನು ಕೇಳಿಸಿಕೊಂಡು "ನೀನು ಸತ್ಯವತಿ ಎಮ್ಮ ತಾಯಿ ವೀರಸತಿ" ಎಂದು ಕಳಿಸಿದರು. ಸುಧಾಮೆ ಕ್ಷೇಮವಾಗಿ ಮನೆ ಸೇರಿದಳು.

ಈ ಕತೆಯನ್ನು ಹೇಳಿ ಸುಮತಿಯು ಆ ನಾಲ್ವರನ್ನು - 'ಇವರಲ್ಲಿ ಯಾರು ಶ್ರೇಷ್ಠರು?' ಎಂದು ಕೇಳುತ್ತಾಳೆ. ಆಗ ಒಬ್ಬನು ಮಾತ್ರ ಕಳ್ಳನೇ ಶ್ರೇಷ್ಠನೆಂದು ಹೇಳುತ್ತಾನೆ. ಅವನೇ ಕಳ್ಳನೆಂದು ಹಿಡಿದು ಬಾಯ್ಬಿಡಿಸಿದಾಗ ಆತ ಒಪ್ಪಿಕೊಳ್ಳುತ್ತಾನೆ.

ಇದೇ ಮಾದರಿಯ ಜನಪದ ಕತೆಯೊಂದನ್ನು ಎಂ.ಎ. ಜಯಚಂದ್ರ ಅವರು ಸಂಗ್ರಹಿಸಿದ್ದಾರೆ. 'ಗೌಡನ ನಾಲ್ಕು ಹರಳು' ಎಂಬ ಈ ಕತೆ ಅವರ '೧೧೫ ಜಾನಪದ ಕಿರುಗತೆಗಳು' ಎಂಬ ಬೃಹತ್ ಸಂಗ್ರಹದಲ್ಲಿ ಪ್ರಕಟವಾಗಿದೆ (ಪ್ರ. ಬೆಂ.ವಿ.ವಿ. ೧೯೭೭). ಇದೇ ರೀತಿ ಡಿ. ಲಿಂಗಯ್ಯನವರು ಸಂಗ್ರಹಿಸಿ ೧೯೭೧ರಲ್ಲಿ ಪ್ರಕಟಿಸಿರುವ 'ಅಣ್ಣತಮ್ಮಂದಿರ ನ್ಯಾಯ' ಕತೆಯೂ ಇದೇ ಮಾದರಿಯದಾಗಿದೆ (ನೋಡಿ: ಪಡಿನೆರಳು, ೧೯೭೧).

## ೨. ಅಂಜನಚೋರನ ಕತೆ

ಧೃಡನಂಬಿಕೆಯಿಂದ, ಗುರೂಪದೇಶವನ್ನು ನಂಬಿ ಮಾಡುವ ಆಚರಣೆಯಿಂದ ಶ್ರೇಯಸ್ಸೇ ವಿನಃ ಶಂಕೆಯಿಂದ ಮಾಡುವ ಕೆಲಸದಿಂದ ಪ್ರಯೋಜನವಿಲ್ಲ ಎಂಬುದು ಜೈನ ಸಾಹಿತ್ಯದಲ್ಲಿನ ಈ ಪ್ರಸಿದ್ಧ ಕತೆಯ ನೀತಿ. ಈ ಕತೆ ಹೀಗಿದೆ -

ಅಂಜನವನ್ನು ಧರಿಸಿ ಅನ್ಯರಿಗೆ ಕಾಣದಂತೆ ಅದೃಶ್ಯವಾಗಿ ಹೋಗಿ ಕಳ್ಳತನ ಮಾಡುತ್ತಿದ್ದ ಒಬ್ಬ ಕಳ್ಳನಿದ್ದನು. ಈ ವಿದ್ಯೆಯಿಂದಾಗಿ ಅವನಿಗೆ ಅಂಜನಚೋರನೆಂದು ಅಡ್ಡ ಹೆಸರಾಯಿತು. ಈತ ಒಮ್ಮೆ ರಾತ್ರಿಯಲ್ಲಿ ರಾಣಿಯ ವಜ್ರದ ಪದಕವನ್ನು ಕದ್ದು ತರುತ್ತಿದ್ದ. ಅದರ ಪ್ರಕಾಶದಿಂದಾಗಿ ತಳವಾರನು ಇದು ಅಂಜನಚೋರನ ಕೆಲಸವೆಂದೂಹಿಸಿ ಬೆನ್ನಟ್ಟಿದನು. ಅವನು ಪದಕವನ್ನು ಎಸೆದು ಊರಾಚೆಯ ಸ್ಮಶಾನಕ್ಕೆ ಓಡಿದ. ಅಲ್ಲಿ ವರಸೇನ ಎಂಬುವನು ಒಂದು ಸಾಧನೆ ಮಾಡಲು ಹೊರಟು ಸಂಶಯದಿಂದ ತೊಳಲಾಡುತ್ತಿದ್ದನು. ಜಿನದತ್ತ ಸೆಟ್ಟಿ ಎಂಬ ನಿಷ್ಠಾವಂತ ಶ್ರಾವಕನು ಅವನಿಗೆ ಉಪದೇಶಿಸಿದ್ದ ವ್ರತವದು. ಅದರ ಪ್ರಕಾರ - ಒಂದು ಆಲದ ಮರದ ಕೊಂಬೆಗೆ ನೂರೊಂದು ನಿಲುವು (ಇಳಿಬಿದ್ದ ಹಗ್ಗ)ಗಳನ್ನು ಕಟ್ಟಿ, ಅದರ ಕೆಳಗೆ ನೆಲದ ಮೇಲೆ ಮುವ್ವತ್ತೆರಡು ರೀತಿಯ ಆಯುಧಗಳನ್ನು ಮೇಲ್ಮುಖವಾಗಿ ನೆಡಬೇಕು. ಆ ಆಯುಧಗಳನ್ನು ಪೂಜಿಸಿ ಮರವನ್ನೇರಿ, ನೆಲುವಿನಿಂದ ಜೋತಾಡುತ್ತಿದ್ದು, ಮಂತ್ರಧ್ಯಾನ ಮಾಡುತ್ತಾ ಆ ನಿಲುವುಗಳನ್ನು ಕತ್ತರಿಸಬೇಕು. ಆಗ ಆಕಾಶಗಾಮಿನೀ ವಿದ್ಯೆ ಅವನ ಕೈವಶವಾಗುತ್ತಿತ್ತು. ಪೂಜೆ ಎಲ್ಲಾ ಮಾಡಿ ನಿಲುವನ್ನೇರಿದ ವರಸೇನನು ಅದನ್ನು ಕತ್ತರಿಸಲು ಧೈರ್ಯ ಸಾಲದೆ 'ಇದನ್ನು ಕತ್ತರಿಸಿದಾಗ ವಿದ್ಯೆ ಕೈವಶವಾಗದಿದ್ದರೆ ಕೆಳಗೆ ಆಯುಧಗಳ ಮೇಲೆ ಬಿದ್ದು ಪ್ರಾಣ ಹೋಗುತ್ತದಲ್ಲಾ' ಎಂದು ಚಿಂತಿಸುತ್ತಿದ್ದನು. ತಳವಾರನ ಕೈಗೆ ಸಿಕ್ಕಿ ಪ್ರಾಣ ಕಳೆದುಕೊಳ್ಳಲಿದ್ದ ಅಂಜನ ಚೋರ ಅವನ ಬಳಿ ಬಂದು ವಿಷಯ ತಿಳಿದು - 'ಜಿನದತ್ತ ಜಿನಪಾದಪದ್ಮ ಮಧುಪಂ ದುಷ್ಕರ್ಮ ದಾವಾಗ್ನಿ ಸಜ್ಜನ ಚೂಡಾಮಣಿ..... ಸತ್ಯವಾಕ್ಯಂ...... ನಾನಾ ತಳಾರನ ಕೈಯೊಳ್ಸಾಯದಿಲ್ಲಿ ಪರಿಚ್ಛೇದಮಂ ಮಾಳ್ಪೆ'ನೆಂದು ಹೇಳಿ, ಅವನನ್ನು ಬಿಡಿಸಿ ತಾನು ಅದರಲ್ಲಿ ಕುಳಿತು ಅವನಿಂದ ಮಂತ್ರವನ್ನು ಹೇಳಿಸಿಕೊಂಡು 'ಪರಮ ಜಿನೇಶ್ವರ ಪದಮಂ ಸ್ಮರಿಯಿಸಿ ಜಿನದತ್ತಸೆಟ್ಟಿಗಾದರದಿಂದಂ ಕರಯುಗಮಂ ಮುಗಿದು ನಿರ್ಭರಚಿತ್ತಂ ಪಂಚಪದಮನುಚ್ಚರಿಸುತ್ತುಂ......." ಅಷ್ಟೂ ನಿಲುವುಗಳನ್ನು ಕೊಯ್ದುಬಿಡುತ್ತಾನೆ. ಅವನಿಗೆ ಆಕಾಶಗಾಮಿನೀ ವಿದ್ಯೆ ಪ್ರಾಪ್ತಿಯಾಗುತ್ತದೆ.

ನಯಸೇನನ ಧರ್ಮಾಮೃತದ ದ್ವಿತೀಯಾಶ್ವಾಸದಲ್ಲಿ ದೀರ್ಘವಾಗಿ ಬರುವ ಪ್ರಮುಖ ಕತೆಯಿದು. ತುಂಬ ಕಲಾತ್ಮಕವಾಗಿ ನಯಸೇನ ಕತೆಗಳನ್ನು ಹೇಳಿದ್ದಾನೆ. ಇದೇ ಕಥೆ 'ರತ್ನಕರಂಡ ಶ್ರಾವಕಾಚಾರ' (ಆಚಾರ್ಯ ಸಮಂತಭದ್ರರು)ಕ್ಕೆ

ಪ್ರಭಾಚಂದ್ರನೆಂಬುವನು ಬರೆದ ಟೀಕೆಯಲ್ಲೂ ವಿಸ್ತಾರವಾಗಿದೆ. ೧೯ನೇ ಶತಮಾನದ ಕನ್ನಡ ಜೈನ ಕವಿ ಚಂದಯ್ಯನೆಂಬುವನ 'ಜೈನಾಚಾರ' ಎಂಬ ಸಾಂಗತ್ಯ ಕೃತಿಯಲ್ಲಿ ಆರು ಪದ್ಯಗಳಲ್ಲಿ ಈ ಕತೆಯ ಸಾರಾಂಶ ನಿರೂಪಿತವಾಗಿದೆ.

ಇದೊಂದು ಜಾನಪದ ಕತೆ. ಗುರೂಪದೇಶದಲ್ಲಿ ನಂಬಿಕೆ ಇಟ್ಟು ಆಯುಧಗಳೆಡೆ ಮುಖ ಮಾಡಿರುವ ನಿಲುವುಗಳನ್ನು ಕೊಯ್ದು ಕೈಲಾಸಕ್ಕೆ ಹೋದ ಆಶಯ, ಹಾಗೆ ನಂಬಿಕೆಯಿಡಲಾರದೆ ಆ ಅವಕಾಶ ಕಳೆದುಕೊಂಡ ಆಶಯ ಈ ಕತೆಯಲ್ಲಿದೆ.

ಇಂಥ ಎರಡು ಕಥೆಗಳನ್ನು ಡಾ. ಎಂ.ಎ. ಜಯಚಂದ್ರ ಪತ್ತೆ ಹಚ್ಚಿದ್ದಾರೆ. ಒಂದು- ಅವರೇ ಸಂಗ್ರಹಿಸಿರುವ 'ಅದೃಷ್ಟವಿಲ್ಲದ್ದು ಹೇಗೆ ತಾನೆ ಸಿಕ್ಕೀತು?' ಎಂಬ ಕತೆ; (ನೋಡಿ- 'ಸಂಸಾರಿ ಹೆಚ್ಚೋ, ಸನ್ಯಾಸಿ ಹೆಚ್ಚೋ? ಕ.ಸಾ.ಪ. ೧೯೮೧) ಇನ್ನೊಂದು- ಮತಿಘಟ್ಟ ಕೃಷ್ಣಮೂರ್ತಿಯವರು ಸಂಗ್ರಹಿಸಿ ಪ್ರಕಟಿಸಿರುವ 'ಗುರುವಾಕ್ಯ' ಎಂಬ ಕತೆ. (ನೋಡಿ - ಶಕುನದ ಹಕ್ಕಿ ಮತ್ತು ಇತರ ಜನಪದ ಕತೆಗಳು - ೧೯೬೯).

ಈ ಎರಡೂ ಕತೆಗಳಲ್ಲೂ, ನಯಸೇನನಲ್ಲಿರುವಂತೆ, ಊರಾಚೆಯ ಆಲದ ಮರ, ನೆಲದಲ್ಲಿ ಮೇಲ್ಮುಖವಾಗಿ ಹೂಳಿದ ಆಯುಧ, ಗುರುವಿನಿಂದ ಪಡೆದ ಮಂತ್ರೋಪದೇಶ, ನಿಲುವುಗಳನ್ನು ಕತ್ತರಿಸಬೇಕಾದ ಪರಿಸ್ಥಿತಿ, ಅನುಮಾನ, ಮತ್ತೊಬ್ಬನು ನಂಬಿಕೆಯಿಂದ ಅದನ್ನು ಸಾಧಿಸಿಕೊಳ್ಳುವುದು - ಈ ಆಶಯಗಳಿವೆ.

## ೩. ಸರಗತೆಗಳು

ಒಂದಕ್ಕೊಂದು ಸೇರಿಕೊಂಡು ಬರುವ ಕತೆಗಳ ಸರಣಿಯನ್ನೇ ಸರಗತೆಗಳೆಂದು ಕರೆಯಬಹುದು. ಇಂಥ ಸರಗತೆಗಳು ಜೈನ ಕಥಾ ಸಾಹಿತ್ಯದಲ್ಲಿ ಹಲವೆಡೆ ಕಂಡು ಬರುತ್ತವೆ. ಜಿನದತ್ತ ಎಂಬ ಶ್ರಾವಕ ಹಾಗೂ ಜಿನಪಾಲಿತನೆಂಬ ಮುನಿಯ ನಡುವೆ ಹೇಳಲ್ಪಡುವ ಈ ಕಥೆಗಳ ಗೊಂಚಲಿನಲ್ಲಿ ಒಟ್ಟು ಹನ್ನೆರಡು ಕತೆಗಳಿವೆ. ಈ ಕಥಾ ಸರಪಣಿಯು 'ಧರ್ಮಾಮೃತ'ದ ದ್ವಾದಶಾಶ್ವಾಸದಲ್ಲಿಯೂ 'ಪುಣ್ಯಾಸ್ರವ'ದ ತೃತೀಯಾಧಿಕಾರದಲ್ಲಿಯೂ ಕಂಡುಬರುತ್ತದೆ. 'ಇವುಗಳಲ್ಲಿ ದಂಡಕ ಋಷಿಯ ಕಥೆಯೊಂದನ್ನು ಬಿಟ್ಟು ಉಳಿದೆಲ್ಲವೂ ಜಾನಪದ ಕತೆಗಳೆಂದು

ಪರಿಗಣಿಸಬಹುದಾಗಿದೆ' - ಎಂದು ಇವುಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿರುವ ಡಾ. ಎಂ.ಎ. ಜಯಚಂದ್ರ ಅಭಿಪ್ರಾಯ ಪಡುತ್ತಾರೆ. ಇದು ಸರಿಯೂ ಹೌದು. ಈ ಕಥೆಗಳಲ್ಲಿನ ಆಶಯಗಳನ್ನು ನೋಡಿದರೆ ಇದೇ ರೀತಿಯ ಜನಪದ ಕತೆಗಳನ್ನು ನಾವು ಓದಿದ್ದು, ಕೇಳಿದ್ದು ನೆನಪಾಗುತ್ತದೆ. ಇವನ್ನೀಗ ಸಂಕ್ಷಿಪ್ತವಾಗಿ ನೋಡೋಣ-

**೧. ಕೃತಘ್ನನಾದ ಕಳ್ಳನ ಕಥೆ:**

ಕಳ್ಳನೊಬ್ಬನನ್ನು ತಳವಾರನು ಅಟ್ಟಿಸಿಕೊಂಡು ಬಂದಾಗ ಸೆಟ್ಟಿಯೊಬ್ಬ ಅವನ ಮೇಲೆ ಹಚ್ಚಡ ಹೊದಿಸಿ ಬಚಾವು ಮಾಡುತ್ತಾನೆ. ಅಪಾಯದಿಂದ ದೂರವಾದ ಮೇಲೆ ಕಳ್ಳ ಸೆಟ್ಟಿಗೇ ಮೋಸ ಮಾಡಿ ಹೋಗುತ್ತಾನೆ.

- ಇದು ಕಥಾ ಸಾರಾಂಶ. ಇದು ಧರ್ಮಾಮೃತ ಹಾಗೂ ಪುಣ್ಯಾಸ್ರವಗಳೆರಡರಲ್ಲೂ ಇದೆ. ವಿವರಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಗಳಿವೆ. ಇದು ಏಕಾಶಯದ ಜನಪದ ಕತೆಯ ಮಾದರಿಯಲ್ಲಿರುವುದು ಮೇಲ್ನೋಟಕ್ಕೇ ತಿಳಿಯುತ್ತದೆ.

**೨. ಕೃತಘ್ನ ಹುಲಿಯ ಕಥೆ:**

ಇದೂ ಕೂಡ ಧರ್ಮಾಮೃತ (೧೨:೧೦೪-೧೧೦) ಹಾಗೂ ಪುಣ್ಯಾಸ್ರವ (೩:೭೭ ವಚನ)ಗಳೆರಡರಲ್ಲೂ ಇದೆ.

ಬ್ರಾಹ್ಮಣ ವೈದ್ಯನೊಬ್ಬ ಕಾಡಿನ ದಾರಿಯಾಗಿ ಬರುವಾಗ ಬೇನೆಗೊಂಡು ಸತ್ತಿದ್ದ ಹುಲಿಯೊಂದನ್ನು ತನ್ನ ವಿದ್ಯಾಬಲದಿಂದ ಸಹಜ ಸ್ಥಿತಿಗೆ ತರುತ್ತಾನೆ. ಆ ಹುಲಿ ಇವನ ಉಪಕಾರವನ್ನು ನೆನೆಯದೆ ಇವನನ್ನು ತಿಂದು ಹಾಕುತ್ತದೆ. - ಇದೇ ಕಥೆಯ ಸಾರಾಂಶ.

- ಇದು ಪ್ರಾಣಿಕಥೆಯ ಒಂದು ಮಾದರಿ. ಇದೇ ರೀತಿಯ ಜನಪದ ಕತೆಗಳು ಕಂಠಸ್ಥ ಸಂಪ್ರದಾಯದಿಂದ ದಾಖಲಾಗಿರುವುದನ್ನು ನಾವು ಹಲವು ಕಡೆ ನೋಡುತ್ತೇವೆ. ಕೆಲವು ಜನಪದ ಕಥಾ ಸಂಗ್ರಹಗಳಲ್ಲಿ ಇದು ಸ್ವಲ್ಪ ಬದಲಾವಣೆಗೊಂಡು - ಬಾವಿಗೆ ಬಿದ್ದಿದ್ದ ಹುಲಿಯನ್ನು ಬ್ರಾಹ್ಮಣ ರಕ್ಷಿಸುವುದು, ಅದು ಹೊರ ಬಂದ ಬಳಿಕ ಅವನನ್ನೇ ತಿನ್ನುವ ಘಟನೆ ನಡೆಯುತ್ತದೆ.

೩. ಕೃತಘ್ನ ಮದಗಜದ ಕಥೆ

ನದೀ ದಂಡೆಯಲ್ಲಿ ಕಾಪಾಲಿಕನೊಬ್ಬನ ಮಠವಿತ್ತು. ಆತ ಒಂದು ದಿನ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ ಆನೆಮರಿಯನ್ನು ರಕ್ಷಿಸಿ ಸಾಕಿದ. ಅದು ದೊಡ್ಡದಾಗಿ ಬೆಳೆಯಿತು. ಅದನ್ನು ರಾಜನು ಬಯಸಿದಾಗ ಈ ತಪಸ್ವಿ ಕೊಡಲಾರದೆ ಕೊಟ್ಟ. ಆನೆ ಮರಳಿ ಮಠಕ್ಕೆ ಬಂದಿತು. ರಾಜನಿಗೆ ಸಿಟ್ಟು ಬಂದಿತು. ಆಗ ಈ ಸಂನ್ಯಾಸಿಯೇ ಸ್ವತಃ ಆನೆಯನ್ನು ಕೊಂಡೊಯ್ದು ರಾಜನಿಗೆ ಒಪ್ಪಿಸಿದ. ಆನೆ ಸಿಟ್ಟಿನಿಂದ ಈ ತಾಪಸನನ್ನೇ ಕೊಂದಿತು. 'ಧರೆಯೊಳ್ ನಿರ್ಧರ್ಮರೇಗೆಯ್ಯರೋ?'

- ಇದೊಂದು ಪ್ರಾಣಿಕಥೆ; ಕೃತಘ್ನತೆಯೇ ಆಶಯವಾಗುಳ್ಳದ್ದು.

೪. ಆಶ್ರಯವಿತ್ತ ಮರವನ್ನೇ ಕಡಿದವನ ಕಥೆ

ಕಾಡಿನಲ್ಲಿ ಬರುತ್ತಿದ್ದವನೊಬ್ಬನು ಮದಗಜದಿಂದ ತಪ್ಪಿಸಿಕೊಳ್ಳಲು ದೊಡ್ಡ ಮರವೊಂದನ್ನೇರಿ ಕುಳಿತುಕೊಳ್ಳುತ್ತಾನೆ. ಆನೆ ಹೋದ ನಂತರ ಅಲ್ಲಿಂದ ಇಳಿದು, ತನ್ನ ಉಪಯೋಗಕ್ಕೆ ತಕ್ಕುದೆಂದು ಆ ಹೆಮ್ಮರವನ್ನು ಕಡಿಸಿ ಉಪಯೋಗಿಸಿಕೊಳ್ಳುತ್ತಾನೆ.

- ಇದೇ ರೀತಿ ಈ ಸರಣಿಯ ಉಳಿದ ಕಿರುಗತೆಗಳೂ ಕೂಡಾ ಜನಪದ ಕಥಾ ಮಾದರಿಯವೇ ಆಗಿವೆ. ಬಾವಿಯಲ್ಲಿ ಬಿದ್ದಿದ್ದ ಮನುಷ್ಯ ಹಾಗೂ ಪ್ರಾಣಿಗಳನ್ನು ರಕ್ಷಿಸಿದವನ ಬಗ್ಗೆ ಮನುಷ್ಯ ಮಾತ್ರ ಕೃತಘ್ನನಾಗುವುದು, ಒಬ್ಬನು ನೀರಿನ ತಾಣವನ್ನು ತೋರಿಸಿದ ಕಪಿಯನ್ನೇ ಕೊಂದು ಅದರ ತೊಗಲಿನಿಂದ ಚೀಲ ಮಾಡಿ ಅದರಲ್ಲಿ ನೀರು ತುಂಬಿಸಿಕೊಂಡು ಹೋಗುವುದು, ಹೊನ್ನನ್ನು ಹೊಂದಿದ್ದ ಮುದಿ ಬ್ರಾಹ್ಮಣನ ಜೊತೆ ಪ್ರಾಮಾಣಿಕ ಸಹಚರಿಯಂತೆ ನಟಿಸುತ್ತಾ ಸೇರಿಕೊಂಡು ಕೊನೆಗೆ ಅವನಿಗೆ ಮೋಸ ಮಾಡಿ ಓಡಿ ಹೋಗುವುದು - ಈ ಕತೆಗಳೆಲ್ಲಾ ಜನಪದ ಕತೆಗಳೇ. ಹೀಗೆಯೇ - ಇನ್ನೆರಡು ಪ್ರಸಿದ್ಧ ಜನಪದ ಕತೆಗಳೂ ಇದೇ ಸರಣಿಯಲ್ಲಿ ಸಿಗುತ್ತವೆ. ಅವು-

ಅ. ವೇಶ್ಯೆಯೊಬ್ಬಳು ಕುಡಿಯಲೆಂದಿಟ್ಟುಕೊಂಡಿದ್ದ ಮದ್ಯದ ಬಟ್ಟಲಿಗೆ ಯಾರೋ ವಿಷ ಬೆರೆಸಿದ್ದರು. ಅದನ್ನು ಅರಿತ ಅವಳು ಸಾಕಿದ ಗಿಳಿ ಆ ಬಟ್ಟಲನ್ನು ದೂಡಿ ವಿಷವನ್ನು ಚೆಲ್ಲಿಬಿಟ್ಟಿತು. ಕೋಪದಿಂದ ಗಿಳಿಯನ್ನು ಕೊಂದ ಆಕೆ

ನಿಜ ತಿಳಿದಾಗ ದುಃಖಪಟ್ಟಳು. (ಧ -೧೨: ೧೩೮-೧೪೯. ಪು:೩.-೭೭ ವಚನ).

- ಇದನ್ನು ಹೋಲುವ ಕತೆಯೊಂದನ್ನು ಡಾ.ಎಂ.ಎ. ಜಯಚಂದ್ರ ಸಂಗ್ರಹಿಸಿದ್ದು, 'ರಾಜಕುಮಾರನ ಪ್ರಸ್ಥ' ಎಂಬ ಆ ಕಥೆ ಅವರ 'ಸಂಸಾರಿ ಹೆಚ್ಚೋ, ಸಂನ್ಯಾಸಿ ಹೆಚ್ಚೋ' ಸಂಗ್ರಹದಲ್ಲಿ ಪ್ರಕಟವಾಗಿದೆ.

ಆ. ಹೆಂಗಸೊಬ್ಬಳು ತಾನು ಸಾಕಿದ್ದ ಮುಂಗುಸಿಯನ್ನು ಮಗುವಿನ ಕಾವಲಿಗಿಟ್ಟು ನೀರು ತರಲು ಹೋಗಿದ್ದಾಗ ಹಾವೊಂದು ಮಗುವಿನ ಬಳಿ ಬರುವುದನ್ನು ನೋಡಿ ಮುಂಗುಸಿ ಕಾದಾಡಿ ಹಾವನ್ನು ಕೊಲ್ಲುವುದು, ಬಂದ ಹೆಂಗಸು ರಕ್ತಾರಕ್ತವಾದ ಮುಂಗುಸಿಯ ಬಾಯನ್ನು ನೋಡಿ ತಪ್ಪು ತಿಳಿದು ಮುಂಗುಸಿಯನ್ನೇ ಕೊಂದು ಅನಂತರ ಪಶ್ಚಾತ್ತಾಪ ಪಡುವುದು.

- ಈ ಪ್ರಸಿದ್ಧ ಕತೆ ಭಾರತದ ಒಳಗೂ ಹೊರಗೂ ಅನೇಕ ಪಾಠಾಂತರಗಳೊಡನೆ ಸಿಗುವುದನ್ನು ನೋಡುತ್ತೇವೆ.

ಇದೇ ಸರಗತೆಗಳ ಸಾಲಿನಲ್ಲಿ 'ಸರ್ವರುಜಾಪಹಾರಿ ಮಾಮರ'ದ ಕಥೆ ಬರುತ್ತದೆ (ಧ: ೧೨-೧೯೧-೨೦೪, ಪು: ೩-೭೩ ವ;ಧರ್ಮಪ- ೭:೪ ವಚನ). ರಾಜನೊಬ್ಬನಿಗೆ ವ್ಯಾಪಾರಿಯೊಬ್ಬ ದೂರದ ದ್ವೀಪದಿಂದ ಎಲ್ಲ ರೋಗಗಳನ್ನೂ ಗುಣಪಡಿಸುವ ಮಾವಿನ ಹಣ್ಣನ್ನು ತಂದುಕೊಡುತ್ತಾನೆ. ಅದನ್ನು ನೆಟ್ಟು ಬೆಳೆಸುವಂತೆ ರಾಜ ತನ್ನ ವನಪಾಲಕನಿಗೆ ಕೊಡುತ್ತಾನೆ. ಆತ ನಿಷ್ಠೆಯಿಂದ ಆ ಕೆಲಸ ಮಾಡುತ್ತಾನೆ. ಮರ ಬೆಳೆದು ಹಣ್ಣು ಬಿಡುತ್ತದೆ. ಆಗ ಗರುಡನೊಂದು ಸರ್ಪವನ್ನು ಕಚ್ಚಿಕೊಂಡು ಹೋಗುತ್ತಿದ್ದಾಗ ಸರ್ಪದ ವಿಷವು ಈ ಮರದ ಒಂದು ಹಣ್ಣಿನ ಮೇಲೆ ಬೀಳುತ್ತದೆ. ಮಾಲಿ ಅದೇ ಹಣ್ಣನ್ನೇ ಅರಿಯದೆ ದೊರೆಗೆ ತಂದು ಕೊಡುತ್ತಾನೆ. ದೊರೆ ಅದನ್ನು ತನ್ನ ಒಬ್ಬನೇ ಮಗನಿಗೆ ಅದನ್ನು ಕೊಡುತ್ತಾನೆ. ಆ ಮಗ ಸತ್ತು ಹೋಗುತ್ತಾನೆ. ರಾಜ ವಿಚಾರ ಮಾಡದೆ ಆ ಮರವನ್ನೇ ಕಡಿಸಿ ಹಾಕುತ್ತಾನೆ - ಇದು ಕಥೆಯ ಸಾರಾಂಶ.

ಈ ಎಲ್ಲ ಆಶಯಗಳೂ ಕನ್ನಡದಲ್ಲಿನ ಈ ಮೂರೂ ಕಥಾ ಸಂಗ್ರಹಗಳಲ್ಲಿ (ಧರ್ಮಾಮೃತ, ಪುಣ್ಯಾಸ್ರವ, ಧರ್ಮಪರೀಕ್ಷೆ) ದೊರೆಯುತ್ತದೆ. ಇದೇ ಕಥೆ

ಕಂಠಸ್ಥ ಸಂಪ್ರದಾಯದಲ್ಲೂ ಸ್ವಲ್ಪ ವ್ಯತ್ಯಾಸದೊಡನೆ ಕಂಡುಬರುತ್ತಿದ್ದು, ಪೂರ್ವೋಲ್ಲೇಖಿತ - 'ರಾಜಕುಮಾರನ ಪ್ರಸ್ಥ' ಕತೆಯಲ್ಲೇ ಅಂತರ್ಗತವಾಗಿದೆ. ಅಲ್ಲಿ ವ್ಯಾಪಾರಿಯ ಬದಲು ವೃದ್ಧ ದಂಪತಿ ಸಾಕಿದ ಗಿಳಿಯೊಂದು ಈ ಹಣ್ಣನ್ನು ತಂದು ಅವರಿಗೆ ಕೊಡುತ್ತದೆ. ಅವರು ಅದನ್ನು ರಾಜನಿಗೆ ಕೊಡುತ್ತಾರೆ. ರಾಜ ಅದನ್ನು ಬಿತ್ತಿ ಬೆಳೆಸುತ್ತಾನೆ. ಅದರ ಮೊದಲ ಹಣ್ಣನ್ನು ಹಾವೊಂದು ಕಚ್ಚುತ್ತದೆ. ರಾಜ ಆ ಹಣ್ಣನ್ನು ತನ್ನ ಜೂಲುನಾಯಿಗೆ ತಿನ್ನಿಸುತ್ತಾನೆ. ಅದು ಸಾಯುತ್ತದೆ. ರಾಜ ಆ ಮುದುಕನನ್ನು ಶಿಕ್ಷಿಸುತ್ತಾನೆ.

ಎಷ್ಟೊಂದು ಸಾರೂಪ್ಯತೆ ಇದೆ! ಜೈನ ಕಥೆಗಾರರು ಹೀಗೆ ಕಂಠಸ್ಥ ಸಂಪ್ರದಾಯದಲ್ಲಿ ಹರಿಯುತ್ತಿದ್ದ ಅದೆಷ್ಟೋ ಮಾರ್ಮಿಕ ಕತೆಗಳನ್ನು ಅಲ್ಲಿಂದೆತ್ತಿಕೊಂಡು ತಮ್ಮ ಪ್ರತಿಭೆಯ ಪುಟಕ್ಕಿಟ್ಟು ನೀತಿಬೋಧನೆಗಾಗಿ, ಧರ್ಮಪ್ರಭಾವನೆಗಾಗಿ ಉಪಯೋಗಿಸಿಕೊಂಡಿದ್ದಾರೆ.

## ೪. ಶ್ರೇಣಿಕನ ಬೆಡಗಿನ ಮಾತುಗಳು

ಶ್ರೇಣಿಕ - ಜೈನ ಪುರಾಣಕಾವ್ಯಗಳಲ್ಲಿ ಒಂದು ಪ್ರಧಾನ ಪಾತ್ರ. ಅನೇಕ ಕತೆಗಳು ಸಮವಸರಣದಲ್ಲಿ ಗಣಧರರಿಂದ ಶ್ರೇಣಿಕನಿಗೆ ಹೇಳಲ್ಪಟ್ಟದ್ದೆಂದು ನಿರೂಪಿತವಾಗಿವೆ. 'ಈ ಶ್ರೇಣಿಕ ಜೈನ ಪುರಾಣಗಳ ಜನಮೇಜಯನಿದ್ದಂತೆ' (ಹಂಪನಾ: ನೋಂಪಿಯ ಕತೆಗಳು, ಪ್ರಸ್ತಾವನೆ). ಸಾಮ್ರಾಟನಾದ ಈತ ಮಹಾ ಚತುರ. ಈತನ ಬುದ್ಧಿವಂತಿಕೆಯನ್ನು ಅರುಹುವ ಅನೇಕ ಕತೆಗಳು 'ಪುಣ್ಯಾಸ್ರವ'ದ ತೃತೀಯಾಧಿಕಾರದಲ್ಲಿ ಬರುತ್ತವೆ. ಆ ಕತೆಗಳೆಲ್ಲ ಜನಪದ ಆಶಯಗಳನ್ನೇ ಹೊಂದಿವೆ.

ಶ್ರೇಣಿಕನ ಬುದ್ಧಿವಂತಿಕೆಯನ್ನು ಆವನ ಒಗಟಿನಂಥ ಮಾತುಗಳ ಮೂಲಕವೂ ತೋರ್ಪಡಿಸುವ ಕತೆಯೊಂದು ಮೊದಲಬಾರಿಗೆ ನಾಗರಾಜನ 'ಪುಣ್ಯಾಸ್ರವ'ದಲ್ಲಿ ದೊರೆಯುತ್ತದೆ. ಇಲ್ಲಿ ಶ್ರೇಣಿಕ ದಾರಿಹೋಕನಾಗಿ ನಡೆಯುತ್ತಿದ್ದಾಗ ತನ್ನ ಇಂದ್ರದತ್ತನೆಂಬ ಸಹಪ್ರಯಾಣಿಕನೊಂದಿಗೆ ಹೋಗುವಾಗ ಹತ್ತು ಒಗಟಿನಂತಹ ಮಾತುಗಳನ್ನು ಕೇಳುತ್ತಾನೆ. ಅಥವಾ ಅಂಥ ವರ್ತನೆ ತೋರುತ್ತಾನೆ. ಅವನನ್ನು ಮಾವಾ - ಎಂದು ಕರೆಯುವುದು, ನೀರಿನಲ್ಲಿ ಚಪ್ಪಲಿ ಧರಿಸಿಯೇ ಹೋಗುವುದು, ನೆರಳಿನಲ್ಲಿ ಕೊಡೆ ಹಿಡಿದು ಹೋಗುವುದು, ಜೋಳ ಬಿತ್ತುವವನನ್ನು ಕಂಡು

-'ನೀನು ಬಿತ್ತುವುದು ಸತ್ತ ಜೋಳವೋ' ಎನ್ನುವುದು, ಇತ್ಯಾದಿಗಳೆಲ್ಲ ಇದರಲ್ಲಿ ಸೇರಿವೆ. ಇದನ್ನೆಲ್ಲ ನೋಡಿ ಇವ ಮರುಳನೆಂದು ಆ ಇಂದ್ರದತ್ತನು ತನ್ನ ಮಗಳು ನಂದಶ್ರೀಗೆ ಮನೆಯಲ್ಲಿ ಹೇಳಿದಾಗ ಆಕೆ ಅವುಗಳ ಗೂಢಾರ್ಥವನ್ನು ಬಿಡಿಸಿ ಹೇಳುತ್ತಾಳೆ.

- ಇದೊಂದು ಜಾನಪದ ಆಶಯ. ಸಹಪ್ರಯಾಣಿಕನ ಬೆಡಗಿನ ಮಾತುಗಳಿಗೆ ಅರ್ಥವನ್ನು ಕೇಳಿದವನ ಮಗಳು ಹೇಳುವ ಈ ಆಶಯವನ್ನು ಸ್ಟಿಥ್ ಥಾಂಪ್ಸನ್ ಸೂಚಿಯಲ್ಲಿ ೧-೧-೫೮೬ ಎಂದು ಗುರುತಿಸಲಾಗಿದೆ. ಡಾ. ಜೀಶಂಪ ಅವರು ಸಂಪಾದಿಸಿರುವ 'ದಕ್ಷಿಣ ಕರ್ನಾಟಕದ ಜಾನಪದ ಕಥೆಗಳು' ಗ್ರಂಥದಲ್ಲಿನ 'ರತ್ನಾಜಿ' ಕತೆ ಇದೇ ಆಶಯದ್ದು. ಅಲ್ಲಿ ಒಬ್ಬ ಗೌಡನಿಗೆ ಸಹಪ್ರಯಾಣಿಕನಾಗಿ ಒಬ್ಬ ಕಳ್ಳನ ಮಗನಿದ್ದಾನೆ. ಅವನ ಇಂಥದೇ ವರ್ತನೆ, ಮಾತುಗಳಿಗೆ ಗೌಡನ ಮಗಳು ವಿವರಣೆ ಹೇಳುತ್ತಾಳೆ.

ಇದೊಂದು ಬುದ್ಧಿವಂತಿಕೆಯ ಕಥೆ. ಧಾರ್ಮಿಕ ಉದ್ದೇಶವೇನೂ ಇದನ್ನು ಬಳಸಿಕೊಳ್ಳುವಲ್ಲಿ ಜೈನ ಕವಿಗಳಲ್ಲಿರಲಿಲ್ಲ. ಇಂಥ ಅನೇಕ ಬುದ್ಧಿವಂತಿಕೆಯ ಕತೆಗಳನ್ನು ಶ್ರೇಣಿಕನ ನಿಶಿತಮತಿಯ ಚಿತ್ರಣಕ್ಕಾಗಿ ಪುಣ್ಯಾಸ್ರವಕಾರನು ಬಳಸಿಕೊಂಡಿದ್ದಾನೆ. ಆದರೆ ಇವು ಅವನಿಗಿಂತ ಮೊದಲೇ ಜೈನ ಕಥಾ ಪರಂಪರೆಯಲ್ಲಿ ಸೇರಿಕೊಂಡುಬಿಟ್ಟಿದ್ದವು. ಅದನ್ನು ಕನ್ನಡ ಕೃತಿಕಾರರು ತಮ್ಮ ಅವಶ್ಯಕತೆಗಳಿಗನುಗುಣವಾಗಿ ಹಿಗ್ಗಿಸಿ- ಕುಗ್ಗಿಸಿ ಭಾಷಾಂತರಿಸಿಕೊಂಡಿದ್ದಾರೆ. ಜಾನಪದದಿಂದ ಕತೆಗಳನ್ನು ಮೊಗೆದುಕೊಂಡು ತಮ್ಮ ಧರ್ಮ ಪ್ರಭಾವನೆ, ನೀತಿಬೋಧನೆ, ಕಾವ್ಯರಚನೆಗಾಗಿ ಬಳಸಿಕೊಳ್ಳುವುದು ಎಲ್ಲ ಭಾಷೆಗಳ ಜೈನ ಲೇಖಕರ ಸಾಮಾನ್ಯ ತಂತ್ರವಾಗಿತ್ತು. ಇಂದು ಪ್ರಾದೇಶಿಕ ಭಾಷೆಗಳಲ್ಲಿರುವ ಜೈನ ಕಾವ್ಯಗಳಲ್ಲಿ ಹೆಚ್ಚಿನವು ಸಂಸ್ಕೃತ, ಪ್ರಾಕೃತ ಕೃತಿಗಳ ಮೇಲೆ ಆಧಾರಿತವಾಗಿರುವುದರಿಂದ ಅಲ್ಲಿ ಕಂಡುಬರುವ ಕತೆಗಳೇ ಪಾರಂಪರಿಕವಾಗಿ ಇಲ್ಲಿಯೂ ಕಂಡು ಬರುತ್ತವೆ.

## ೫. ಬಾವಿಯನ್ನು ಅರಮನೆಗೆ ತರುವ ಕತೆ

ರಾಜನೊಬ್ಬನು ದಡ್ಡತನದಿಂದಲೋ ಅಥವಾ ಇನ್ನೊಬ್ಬರಿಗೆ ಸಮಸ್ಯೆಯನ್ನು ಒಡ್ಡುವ ದೃಷ್ಟಿಯಿಂದಲೋ ಬಾವಿಯೊಂದನ್ನು ತನ್ನ ಅರಮನೆಗೆ ತರುವಂತೆ

ಆಜ್ಞಾಪಿಸುವ ಆಶಯವನ್ನು ಹೊಂದಿರುವ ಜನಪದ ಕತೆಗಳು ಪ್ರಪಂಚದ ಹಲವೆಡೆ ಸಿಕ್ಕಿವೆ. ಸೂಚಿಯ ಪ್ರಕಾರ ಈ ಆಶಯದ ಸಂಖ್ಯೆ - H ೧೦೨೫.೧.

ಕನ್ನಡದಲ್ಲಿಯೂ ಈ ಆಶಯದ ಜನಪದ ಕತೆಗಳಿವೆ. ಎಂ.ಎ. ಜಯಚಂದ್ರ ಅವರು ಸಂಗ್ರಹಿಸಿರುವ - 'ಜಂಬೂನಾಗಯ್ಯನ ಚಿಕ್ಕ ಸೊಸೆ' (ನೋಡಿ-೧೧೫ ಜಾನಪದ ಕಿರುಗತೆಗಳು. ಪು. ೧೩೭), ಹಾಗೂ ಡಿ. ಲಿಂಗಯ್ಯ ಅವರು ಸಂಗ್ರಹಿಸಿರುವ 'ಏಳು ಜನ ಸೊಸೆಯರು' (ನೋಡಿ - ಮಣ್ಣಿನ ಮಿಡಿತ, ೧೯೬೯, ಪು. ೭೭) ಕತೆಗಳಲ್ಲಿ ಈ ಆಶಯವಿದೆ. ರಾಜನು ಬಾವಿಯನ್ನು ತನ್ನ ಮನೆಗೆ ತರಲು ಒಬ್ಬನಿಗೆ ಆಜ್ಞಾಪಿಸುತ್ತಾನೆ. ಅದಕ್ಕೆ ಈ ಸೊಸೆಯರು -'ರಾತ್ರಿ ಕೇಳಿದ್ವು ನಮ್ಮನೆ ಬಾವೀನ, ನಿಮ್ಮನೆ ಬಾವಿ ಬಂದ್ರೆ ಇಬ್ರೂನೂ ತೆಕ್ಕೆ ಹೊಯ್ಕೊಂಡು ಬರ್ತೀವಿ ಅಂತ ಹೇಳ್ತು ನಮ್ಮನೆ ಬಾವಿ' ಎಂದು ಉತ್ತರ ಹೇಳುತ್ತಾರೆ. ಹಾಗೆ ಮಾಡಲಾರದ ರಾಜ ಸುಮ್ಮನಾಗುತ್ತಾನೆ.

ಇದೇ ಆಶಯದ ಕತೆ 'ಪುಣ್ಯಾಸ್ರವ'ದ ತೃತೀಯಾಧಿಕಾರದಲ್ಲಿ ಶ್ರೇಣಿಕನ ಮಗ ಅಭಯಕುಮಾರನ ಬುದ್ಧಿವಂತಿಕೆಯ ದ್ಯೋತಕವಾಗುವ ಕತೆಗಳಲ್ಲಿ ಒಂದಾಗಿ ಬರುತ್ತದೆ. ಈ ಮಗ ತಂದೆಗರಿಯದಂತೆ ದೂರದ ನಂದಿಗ್ರಾಮದಲ್ಲಿರುತ್ತಾನೆ. ಆ ಗ್ರಾಮದವರ ಮೇಲೆ ಶ್ರೇಣಿಕನಿಗೆ ಹಿಂದಿನದೊಂದು ದ್ವೇಷವಿರುತ್ತದೆ. ಆಗ ಒಂದು ದಿನ ಅವನು -

'ನಿಮ್ಮೂರ್ರ ಕರ್ಪೂರದ ಬಾವಿಯನೆಮ್ಮಲ್ಲಿಗೆ ಕಳುಪುವುದೆಂದೆಡೆ ಕೇಳ್ದು ಪಾವನರ ಭಯಕುಮಾರನುಪದೇಶದೊಳರಸ ಸಮೀಪದವರಿಗೆಲ್ಲಂ ಲಂಚಮಂ ಕೊಟ್ಟು ಶ್ರೇಣಿಕನ ನಿದ್ರೆಯವಸರದಲ್ಲಿ ಬಾವಿ ಬಂದುದೆನೆ ಧರಾಧಿಪನಿರ್ದಲ್ಲಿಯೇ ಇರಲೆಂಬುದು ಊರಿಂಗೆ ವಿಪ್ರರ್ ಮಗುಳ್ದು ಬಪ್ಪುದುಂ ಶ್ರೇಣಿಕಂ ನಿದ್ರೆಯಂ ತಿಳಿದು ಬಾವಿಯೆಲ್ಲಿರ್ದುದೆಂಬುದುಂ ಪ್ರಧಾನರಿಂತೆಂದರ್ - ನೀವಲ್ಲಿಯೆ ಇರಹೇಳಿದ ಕಾರಣವಿರಿಸಿದರ್ ಎನೆ'........ (೩:೨೮ ವ)

- ಹೀಗೆ ಮೂಲ ಜಾನಪದ ಆಶಯವಿದ್ದರೂ ಅನಂತರದಲ್ಲಿ ಅದನ್ನು ಇಲ್ಲಿ ಮಾರ್ಪಡಿಸಿಕೊಳ್ಳಲಾಗಿದೆ.

ಅಭಯ ಕುಮಾರನ ಬುದ್ಧಿವಂತಿಕೆಯನ್ನು ಚಿತ್ರಿಸುವ ಇಂಥ ಅನೇಕ ಬುದ್ಧಿವಂತಿಕೆಯ ಕತೆಗಳು ಪುಣ್ಯಾಸ್ರವದಲ್ಲಿ, ದೇವಚಂದ್ರನ ರಾಜಾವಳಿ ಕಥೆಯಲ್ಲಿ

ಇವೆ. ಸಂಕ್ಷಿಪ್ತವಾಗಿ ನಿರೂಪಿಸಲ್ಪಟ್ಟಿವೆ. ಎಲ್ಲವೂ ಜಾನಪದ ಆಶಯಗಳನ್ನೇ ಹೊಂದಿದ್ದು ಸಮಾನ ಸ್ವರೂಪದ ಜನಪದ ಕತೆಗಳು ಕನ್ನಡದಲ್ಲಿ ಈಗಾಗಲೇ ಪ್ರಕಟವಾಗಿರುವ ಕಥಾ ಸಂಗ್ರಹಗಳಲ್ಲಿ ಕಾಣಸಿಗುತ್ತವೆ.

ಇಲ್ಲಿ ಉಲ್ಲೇಖಿತವಾಗಿರುವ ಕೆಲವು ಜನಪದ ಕತೆಗಳು ಬೌದ್ಧ ಕತೆಗಳಲ್ಲೂ ಕೆಲವು ಕನ್ನಡ ವೀರಶೈವ ಕಥಾಕೋಶಗಳಲ್ಲೂ ಇವೆ (ವಿವರಗಳಿಗೆ ಡಾ.ಎಂ.ಎ. ಜಯಚಂದ್ರರ ನಿಬಂಧವನ್ನು ನೋಡಬಹುದು.).

೬. ಹಾವಿನೊಂದಿಗೆ ಮದುವೆ

ಮನುಷ್ಯರು ಪ್ರಾಣಿಯನ್ನು ಹೆರುವ ಆಶಯ ಪ್ರಪಂಚದಾದ್ಯಂತ ಅನೇಕ ಜನಪದ ಕತೆಗಳಲ್ಲಿ ದೊರೆಯುತ್ತದೆ. ಈ ಪ್ರಾಣಿಯನ್ನು ಮಾನವ ಮದುವೆಯಾಗುವ, ಅನಂತರದಲ್ಲಿ ಈ ಪ್ರಾಣಿ ರಾತ್ರಿ ವೇಳೆ ಮನುಷ್ಯ ರೂಪು ತಾಳಿ ಹೆಂಡತಿಯೊಡನೆ ಸುಖಿಸುವ, ಕೆಲ ಕಾಲಾನಂತರ ಅದು ಹೇಗೋ ಪುನಃ ಪೂರ್ಣಾವಧಿ ಮನುಷ್ಯನೇ ಆಗಿಬಿಡುವ ಆಶಯಗಳೂ ಅನೇಕ ಜನಪದ ಕತೆಗಳಲ್ಲಿವೆ.

ಈ ಕಥೆ ಕನ್ನಡ ಜೈನ ಕಥಾ ಸಾಹಿತ್ಯದ ಪ್ರಮುಖ ಕೃತಿಗಳಲ್ಲೊಂದಾದ ನಾಗರಾಜನ ಪುಣ್ಯಾಸ್ರವದಲ್ಲಿ ಮೊದಲ ಬಾರಿಗೆ ಸಿಗುತ್ತದೆ. ಒಂದು ಪುಟದಷ್ಟರಲ್ಲಿ ನಿರೂಪಿತವಾಗಿರುವ ಈ ಕತೆ ಹೀಗಿದೆ-

ಸಾಗರದತ್ತನೆಂಬುವನು ರಾಜಶ್ರೇಷ್ಠಿ. ಆತನ ಭಾರ್ಯೆ ವಸುಮತಿ. ಸಮುದ್ರದತ್ತನೆಂಬುವನು ಅಲ್ಲಿಯ ಇನ್ನೊಬ್ಬ ವ್ಯಾಪಾರಿ. ಆತನ ಮನೋರಮೆ ಸಾಗರದತ್ತೆ. ಅವರಿಬ್ಬರೂ ಸ್ನೇಹದಿಂದ ತಮ್ಮ ಮಕ್ಕಳನ್ನು ಪರಸ್ಪರ ಮದುವೆ ಮಾಡಬೇಕೆಂದು ಭಾಷೆ ಕೊಟ್ಟುಕೊಂಡಿರುತ್ತಾರೆ. ಮುಂದೆ ಸಾಗರದತ್ತ - ವಸುಮತಿಯರಿಗೊಬ್ಬ ನಾಗಪುತ್ರ (ನಾಗರೂಪದ ಪುತ್ರ) ಹುಟ್ಟುತ್ತಾನೆ. ವಸುಮಿತ್ರನೆಂದು ಆತನಿಗೆ ಹೆಸರಾಗುತ್ತದೆ. ಇತ್ತ ಸಮುದ್ರದತ್ತ- ಸಾಗರದತ್ತೆಯರಿಗೆ ನಾಗದತ್ತೆ ಎಂಬ ಮಗಳಾಗುತ್ತಾಳೆ. ಆದರೆ ಮಾತು ಕೊಟ್ಟಿದ್ದಂತೆ ನಾಗಪುತ್ರನಾದ ವಸುಮಿತ್ರನಿಗೂ ನಾಗದತ್ತೆಗೂ ಮದುವೆಯಾಗುತ್ತದೆ. 'ಇಂತಪ್ಪ ಸುಕುಮಾರಿಗೆಂತಪ್ಪಗಂಡನಾದನೆಂದು ದುಃಖದೊಳ್ಪೆಂದು ಭೇದಿಸುತ್ತಿರಲು', ತಾಯಿ

ಚಿಂತಿಸುವುದನ್ನು ನೋಡಿ ಮಗಳೇ 'ಏನು ಕಾರಣ'ವೆಂದು ಕೇಳುತ್ತಾಳೆ. ಆಗ ತಾಯಿ 'ನಿನ್ನರಸಂ ವ್ಯಾಳಂ ಗಡ ಮುನ್ನಿದ ನಾನರಿಯೆನು ಈಗ ಕೇಳ್ದುದರಿಂದಂ ಚಿನ್ನೆ ಬಡವಾದೆನು' ಎನ್ನುತ್ತಾಳೆ. ಆಗ ನಾಗದತ್ತೆ - 'ಎನ್ನ ಗಂಡನ್ ಪಗಲ್, ಪಾವಾಗಿ ಪೇಳಿಗೆಯೊಳಿರ್ಪಂ ರಾತ್ರಿಯೊಳ್ ದಿವ್ಯಪುರುಷನಾಗಿ ಭೋಗಿಪ್ಪ'ನೆಂದು ಹೇಳುತ್ತಾಳೆ. ಅದನ್ನು ಕೇಳಿದ ತಾಯಿ ತನ್ನ ಬೀಗಿತ್ತಿಯೊಡನೆ ಆಲೋಚಿಸಿ ಒಂದು ರಾತ್ರಿ ಆ ನಾಗರೂಪಿಯಾದ ವಸುಮಿತ್ರನು ಹಾವಿನ ದೇಹವನ್ನು ಬಿಟ್ಟು ಪುರುಷ ರೂಪು ತಾಳಿದ ಬಳಿಕ ಆ ಹಾವಿನ ದೇಹವನ್ನು ತಂದು ಸುಟ್ಟು ಹಾಕಿಬಿಡುತ್ತಾಳೆ. ಅಂದಿನಿಂದ ಆತ ಪುರುಷರೂಪದಲ್ಲೇ ಇರುತ್ತಾನೆ.

ಮಾನವರು ವಿವಿಧ ಪ್ರಾಣಿಗಳನ್ನು ಹೆರುವ ಆಶಯವಿರುವ ಕನ್ನಡದ ಕೆಲ ಜನಪದ ಕತೆಗಳಿಗೆ ಉದಾಹರಣೆಯನ್ನು ಈ ಕತಾಸಂಗ್ರಹಗಳಲ್ಲಿ ಕಾಣಬಹುದು: - 'ಹಾವಾಗಿ ಹರಿದ ಅಣ್ಣಯ್ಯ' (ಸಂ.ಜಿ.ವಿ. ದಾಸೇಗೌಡ), ಜಾನಪದ ಕಥಾಮೃತ (ಧವಳಶ್ರೀ. ೧೯೬೮), ಕರ್ನಾಟಕ ಜಾನಪದ ಕಥೆಗಳು (ಎಚ್.ಎಲ್. ನಾಗೇಗೌಡ, ೧೯೭೭), ಮಣ್ಣಿನಮಿಡಿತ (ಡಿ.ಲಿಂಗಯ್ಯ ೧೯೬೯), ೧೧೫ ಜಾನಪದ ಕಿರುಗತೆಗಳು (ಪೂರ್ವೋಕ್ತ), ಒಬ್ಬನೇ ಹೇಳಿದ ೨೨ ಜನಪದ ಕತೆಗಳು (ಸಿ. ವೀರಣ್ಣ. ೧೯೭೪), ಕನ್ನಡ ಜನಪದ ಕತೆಗಳು (ಜೀಶಂಪ, ೧೯೭೦), ಇತ್ಯಾದಿ. ಈ ಸಂಗ್ರಹದ ಕತೆಗಳಲ್ಲಿ ಮಾನವರು ಏಡಿ, ನಾಯಿ, ಆಮೆ, ಹಾವು, ಹಂದಿಗಳನ್ನು ಹೆರುವ ಆಶಯಗಳಿವೆ. ಇವೇ ಕೆಲವು  ಕತೆಗಳಲ್ಲಿ ಮಾನವರು ಹೀಗೆ ಹುಟ್ಟಿದ ಹಾವನ್ನು, ಬೇರೆ ಪ್ರಾಣಿಗಳನ್ನು ಮದುವೆಯಾಗುವ ಆಶಯವೂ ಇವೆ. ಟಿ.ಆರ್. ರಾಜಪ್ಪ ಅವರು ಸಂಪಾದಿಸಿರುವ 'ದಾಳಿಂಬೆ ರಾಣಿ' ಸಂಗ್ರಹದ 'ಬೆಟ್ಟದ ಬ್ಯಾಗೆಗೆ ಬಿದ್ದವಳು' ಕಥೆಯಲ್ಲೂ ಸ್ತ್ರೀಯೊಬ್ಬಳು ಸರ್ಪವನ್ನು ಮದುವೆಯಾಗುವ ಆಶಯವಿದೆ. ಪೂರ್ವೋಕ್ತ ಸಂಗ್ರಹಗಳಲ್ಲಿನ ಕೆಲವು ಕತೆಗಳಲ್ಲಿ (ಉದಾ: ಎಚ್.ಎಲ್. ನಾಗೇಗೌಡ, ಎಂ.ಎ. ಜಯಚಂದ್ರ) ಪ್ರಾಣಿ ಶರೀರರನ್ನು ತಾತ್ಕಾಲಿಕವಾಗಿ ಬಿಟ್ಟು ದಿವ್ಯ ಮಾನವ ಶರೀರ ತಾಳಿದವನ ಆ ಪ್ರಾಣಿ ಶರೀರವನ್ನು ಸುಟ್ಟುಹಾಕುವ, ಆ ಮೂಲಕ ಆತ ಮಾನವ ಶರೀರದಲ್ಲೇ ಸ್ಥಿರವಾಗಿ ನಿಲ್ಲುವಂತೆ ಆಗುವ ಆಶಯಗಳಿವೆ.

'ಪುಣ್ಯಾಸ್ರವ'ದಲ್ಲಿ ಬರುವ ಈ ಮೇಲೆ ಉಲ್ಲೇಖಿಸಿರುವ ವಸುಮಿತ್ರ - ನಾಗದತ್ತೆಯರ ಕತೆಯಲ್ಲಿ ಈ ಎಲ್ಲ ಆಶಯಗಳೂ ಇರುವುದನ್ನು ಗಮನಿಸಬಹುದು. ಆದ್ದರಿಂದ ಇದೊಂದು ಜಾನಪದ ಕತೆ ಎಂಬುದು ನಿಸ್ಸಂಶಯ.

## ೭. ರಾಜನ ತಲೆಗೆ ಕಾಲು ತಾಗಿಸಿದರೆ ಶಿಕ್ಷೆ ಏನು?

ಅಕಬರ್ - ಬೀರಬಲ್ಲರ ಕಥೆಗಳಲ್ಲಿ ಇಂಥ ಒಂದು ಕತೆ ಬರುತ್ತದೆ. ಆಸ್ಥಾನಕ್ಕೆ ಬಂದ ಅಕ್ಬರ್ ಸಭಾಸದರನ್ನು - "ಅರಸನ ಗಡ್ಡ ಎಳೆದವರಿಗೆ ಏನು ಮಾಡಬೇಕು?' ಎಂದು ಪ್ರಶ್ನಿಸಿದಾಗ, ಒಬ್ಬೊಬ್ಬರು ಒಂದೊಂದು ಬಗೆಯ ಶಿಕ್ಷೆ ಸೂಚಿಸಿರುತ್ತಾರೆ. ಬೀರಬಲ್ ಮಾತ್ರ - ಅವರ ಬಾಯಿಗೆ ಮಿಠಾಯಿ ಹಾಕಬೇಕು ಎನ್ನುತ್ತಾನೆ. ಅದೇ ಸರಿಯಾದ ಉತ್ತರವಾಗಿರುತ್ತದೆ. ಯಾಕೆಂದರೆ ಗಡ್ಡ ಎಳೆದಿದ್ದು ಇನ್ನಾರೂ ಆಗಿರದೆ ಬಾದಶಹನ ಪುಟ್ಟ ಮಗುವಾಗಿರುತ್ತದೆ.

ಇದನ್ನೇ ಹೋಲುವ ಕತೆಯೊಂದು ಪುಣ್ಯಾಸ್ರವದಲ್ಲಿದೆ (೧೧:೮-೯).

ಲೋಕಪಾಲನೆಂಬುವನೊಬ್ಬ ದೊರೆ. ಅವನ ಆಪ್ತ ಬಳಗದಲ್ಲಿ ಕುಬೇರಮಿತ್ರನೆಂಬೊಬ್ಬ ಸೆಟ್ಟಿಯೂ ಇರುತ್ತಾನೆ. ದೊರೆ ಸ್ವೇಚ್ಛಾಚಾರಿಯಾಗದಂತೆ ಈ ಕುಬೇರಮಿತ್ರ ನಿಯಂತ್ರಿಸುತ್ತಿದ್ದ. ಅವನ ಪ್ರಭಾವ ಹೆಚ್ಚಿರುವುದನ್ನು ಸಹಿಸದ ಜನ ಅವನು ದೊರೆಯಿಂದ ದೂರವಿರುವಂತೆ ಮಾಡುತ್ತಾರೆ.

ಒಂದು ದಿನ ಅಂತಃಪುರದಲ್ಲಿ ರಾಣಿಯ ಕಾಲು ವಿನೋದ ಪ್ರಸಂಗದಲ್ಲಿ ದೊರೆಯ ತಲೆಗೆ ತಗಲುತ್ತದೆ. ಮರುದಿನ ರಾಜ ಆಸ್ಥಾನದಲ್ಲಿ 'ಅರಸಿನ ಶಿರಮಂ ತಾಗಿಸಿದ ಕಾಲ್ಗೆ ಶಾಸ್ತಿಯನೇನಂ ಮಾಳ್ಪುದು?' ಎಂದು ಪ್ರಶ್ನಿಸುತ್ತಾನೆ. ದುಷ್ಟ ಸಚಿವರೆಲ್ಲ ಸೇರಿ - 'ದೇವರ ಮಸ್ತಕಮನೊದ್ದಾ ಪಾದಮಂ ಪರ್ದಿಂಗೆ ಬಿರ್ದಿಕ್ಕುವುದೆನೆ' - ರಾಜನಿಗೆ ಬೇಸರವಾಗುತ್ತದೆ. ಆಗ ಕುಬೇರಮಿತ್ರ ಸೆಟ್ಟಿಯನ್ನು ಕರೆಸಿ ಕೇಳಿದಾಗ ಅವನು ಬುದ್ಧಿವಂತಿಕೆಯಿಂದ 'ಗುರುವಿನ ಪಾದವಾದಡೆ ಪೂಜಿಸುವುದು, ತನ್ನರಸಿಯ ಪಾದವಾದಡೆ ರತ್ನಮಯ ಮಂಜೀರಮನೀವುದು, ಬಾಲಕನ ಪಾದವಾದಡೆ ಲಡ್ಡುಗೆಯಂ ಕುಡುವುದು' ಎನ್ನುತ್ತಾನೆ. ಅರಸನಿಗೆ ಸಂತೋಷವಾಗುತ್ತದೆ. ಸೆಟ್ಟಿಗೆ ಮುನ್ನಿನ ಸ್ಥಾನವೇ ಪ್ರಾಪ್ತವಾಗುತ್ತದೆ.

ಈ ಎರಡೂ ಕತೆಗಳಲ್ಲಿ ಸಮಾನ ಆಶಯವಿರುವುದನ್ನು ಗಮನಿಸಬಹುದು. ಈ ಬುದ್ಧಿವಂತಿಕೆಯ ಕತೆ ಭಾರತದ ಬೇರೆಬೇರೆ ಭಾಷೆಗಳಲ್ಲೂ ತುಸು ವ್ಯತ್ಯಾಸದೊಡನೆ ಕಂಡುಬರುವುದೆಂದು ಡಾ. ಎಂ.ಎ. ಜಯಚಂದ್ರ ಸೂಚಿಸುತ್ತಾರೆ. ಕನ್ನಡದ ಇನ್ನೊಂದು ಜೈನಕಾವ್ಯ ಚಾವುಂಡರಾಯ ಪುರಾಣದಲ್ಲೂ ಇದು ಕಂಡು ಬರುತ್ತದೆ. ಆದ್ದರಿಂದ ನಿಸ್ಸಂಶಯವಾಗಿ ಇದೊಂದು ಜಾನಪದ ಕತೆ.

## ೮. ಕೆಲಸ ಕೇಳುವ ಕೋತಿಯ ಕತೆ

ನಾವೆಲ್ಲ ಸಾಮಾನ್ಯವಾಗಿ ಒಂದು ಕತೆಯನ್ನು ಕೇಳಿರುತ್ತೇವೆ. ಯಾರೋ ಒಬ್ಬನಿಗೆ ಯಾವುದೋ ಒಂದು ಭೂತ ಸೇವಕನಾಗಿ ಸೇರಿಕೊಳ್ಳುವುದು, ಒಂದಲ್ಲಾ ಒಂದು ಕೆಲಸವನ್ನು ಅದಕ್ಕೆ ಹೇಳದಿದ್ದರೆ ಅದು ತನ್ನ ಒಡೆಯನನ್ನೇ ನುಂಗಿ ಬಿಡುವುದು; ಆದರೆ ಯಾವುದೇ ಕೆಲಸ ಹೇಳಿದರೂ  ಅದನ್ನು ಈ ಭೂತ ಕ್ಷಣಾರ್ಧದಲ್ಲಿ ಮಾಡಿ ಬಿಡುತ್ತದೆ. ಕೊನೆಗೆ ಮಾಲೀಕ ಒಂದು ಉಪಾಯ ಯೋಚಿಸುತ್ತಾನೆ. ಅದರಂತೆ - ಒಂದು ಕಂಬವನ್ನು ಮನೆ ಮುಂದೆ ನೆಡಿಸಿ ಸದಾ ಅದನ್ನು ಏರುತ್ತಾ ಇಳಿಯುತ್ತಾ ಇರುವಂತೆ ಆಜ್ಞಾಪಿಸುತ್ತಾನೆ. ಆ ಪಿಶಾಚಿ ಹಾಗೆಯೇ ಅಲ್ಲಿ ಬಂಧಿತನಾಗಿರಬೇಕಾಗುತ್ತದೆ. - ಇದು ಜಾನಪದ ಆಶಯ ಎಂಬುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ. ಇದೊಂದು ಬುದ್ಧಿವಂತಿಕೆಯ ಆಶಯ.

ಇದೇ ಆಶಯದ ಕತೆಯೊಂದು ನಾಗರಾಜನ 'ಪುಣ್ಯಾಸ್ರವ'ದಲ್ಲಿ ದೊರೆಯುತ್ತದೆ. ಅಲ್ಲಿನ ಏಕಾದಶಾಧಿಕಾರದಲ್ಲಿ ಬರುವ ಸುಕೇತುವಿನ ಕಥೆಯಲ್ಲಿ ಈ ಕತೆ ಅಂತರ್ಗತವಾಗಿದೆ. ಸುಕೇತು ಒಬ್ಬ ಪುಣ್ಯವಂತ ಧರ್ಮಿಷ್ಠ ನಿರ್ದೋಷಿ ಶ್ರೇಷ್ಠಿ. ಇವನಿಗೆ ತೊಂದರೆ ಕೊಡಬೇಕೆಂದು ವ್ಯಂತರನೊಬ್ಬ ಕೆಲಸ ಮಾಡುವ ಕೋತಿಯ ರೂಪದಲ್ಲಿ ಬಂದು ಅವನ ಬಳಿ ಸೇರಿಕೊಳ್ಳುತ್ತಾನೆ. 'ಈಗಳೆನಗೊಂದು ಕೆಲಸಮನಲಸದೆ ಪೇಳ್ವುದೆಂದು' ಆ ಮಾಯಾ ಮರ್ಕಟಕೇಳಿದಾಗ, ಪ್ರತಿಬಾರಿಯೂ ಅದಕ್ಕೆ - ಹೊಸದೊಂದು ನಗರ ನಿರ್ಮಿಸುವ, ಜನಗಳನ್ನು ಅಲ್ಲಿಗೆ ಸ್ಥಳಾಂತರಿಸುವ, ಅಲ್ಲಿಗೆ ಬೇಕಾದಷ್ಟು ಧವಸಧಾನ್ಯಗಳನ್ನು ತಂದುಹಾಕುವ, ಅಲ್ಲಿ ತನಗೆ ಪಟ್ಟಾಭಿಷೇಕ ಮಾಡಲಿಕ್ಕೆ ಬೇಕಾದ ಏರ್ಪಾಟು ಮಾಡುವ........ ಇತ್ಯಾದಿ ಭಾರೀ ಕೆಲಸಗಳನ್ನೇ ಹೇಳಿದರೂ ಎಲ್ಲವನ್ನೂ ಆ ಕ್ಷಣದಲ್ಲೇ ಮಾಡಿ ಮುಗಿಸಿ ಬಂದು ಮತ್ತೆ ಕೆಲಸ ಕೇಳಿದಾಗ-

'ಸುಕೇತುವಾ ಕಪಿಯ  ಚಪಳತೆಗೆ ವಿಸ್ಮಯಂಬಟ್ಟು ಇಂತೆಂದನೆಲೆ ಮರ್ಕಟಾ, ನಮ್ಮರಮನೆಯ ಮುಂದಣ ಬಯಲೊಳ್ ತಾಳುದ್ದಮಪ್ಪ ಕಂಭಮಂ ನಟ್ಟದರ ಮೊದಲೊಳಗ್ರಮಂ ಮುಟ್ಟುವ ಲೋಹದ ಸಂಕಲೆಯಂ ಕಟ್ಟಿ ಸಂಕಲೆಯ ತುದಿಗೊಂದು ಸರಿಗೆಯಂ ಮಾಡಿ ನಿನ್ನ ಕೊರಳೊಳಾ ಸರಿಗೆಯನಿಕ್ಕಿಕೊಂಡು ಕೊಲ್ಲಾಟಿಗನಂತೆ ಕಂಭಮನೇರುತ್ತಮಿಳಿಯುತ್ತಿರ್ಪುದಾವು ನೋಡಿ ಸಾಕೆಂಬನ್ನೆಗಮೆನೆ

ಕಪಟ ಕಪಿಚರಂ ಕರಮೊಳ್ಳಿತೆಂದು ಕಂಭದಿಂ ನೆಲಕ್ಕೆ ನೆಲದಿಂ ಕಂಭಕ್ಕೆ ಏರಿ ಇಳಿಯುತ್ತಂ ನಾಲ್ಕೆಂಟು ದಿವಸಕ್ಕೆ ಸೆಟ್ಟಿ ಸಾಕೆನ್ನದುದಕ್ಕೆ ಬೇಸತ್ತು ಸಂಕಲೆಯಂ ಮುರಿದು ಸಿದ್ಧಾಯಂ ಮೇಲೆ ಕೆಡೆದೊಕ್ಕಲಿಗನಂತೆ ಪೇಳದೋಡಿಪ್ಪೋಗೆ.......'

ಏಕಾಶಯದ ಜನಪದ ಕತೆಯನ್ನು ಜೈನಕವಿ ಎಷ್ಟು ಚೆನ್ನಾಗಿ ಬಳಸಿಕೊಂಡಿದ್ದಾನೆಂಬುದನ್ನಿಲ್ಲಿ ಗಮನಿಸಬಹುದು.

**'ಧರ್ಮಪರೀಕ್ಷೆ'ಯಲ್ಲಿನ ಜನಪದ ಕತೆಗಳು**

ವೃತ್ತವಿಲಾಸ ಕವಿಯ 'ಧರ್ಮಪರೀಕ್ಷೆ' ಒಂದು ವಿಡಂಬನ ಕಾವ್ಯ. ಇದೊಂದು ಕಥಾ ಗುಚ್ಛ. ಇಲ್ಲಿ ಕವಿಯ ಉದ್ದೇಶವೆಂದರೆ - ಕೆಟ್ಟ ದೇವ, ಗುರು, ಶಾಸ್ತ್ರಗಳಲ್ಲಿನ ನಂಬಿಕೆಯನ್ನು ತೊರೆದು ಧಾರ್ಮಿಕನಾದವನು ಯಥಾರ್ಥವಾದ ದೇವ, ಗುರು, ಶಾಸ್ತ್ರಗಳಲ್ಲಿ ನಂಬಿಕೆಯನ್ನು ತಾಳುವಂತೆ ಮಾಡಬೇಕೆಂಬುದು. ಅದಕ್ಕಾಗಿ ಅನ್ಯ ಮತ ವಿಡಂಬನೆ, ವಿಶೇಷವಾಗಿ ವೈದಿಕ ಮತಗಳ ವಿಡಂಬನೆ ಇಲ್ಲಿ ಪ್ರಧಾನವಾಗಿ ಬಂದಿದೆ.

ಇಲ್ಲಿನ ಕಥೆಗಳ ಪೈಕಿ ನಾಲ್ಕು ಕತೆಗಳು ಸ್ಪಷ್ಟವಾಗಿ ಜನಪದ ಕತೆಗಳೇ ಆಗಿವೆ. ಅವು- ೧. ಪಾಪಿಯೆಂಬರಸನ ಕಥೆ, ೨. ಅಮೃತ ಫಲದ ವೃಕ್ಷ ಕಡಿಸಿದ ರಾಜನ ಕಥೆ, ೩. ಮೌನಸ್ಪರ್ಧೆಯ ಮೂರ್ಖರ ಕಥೆ ಮತ್ತು ೪. ಗಲ್ಲಪೋಟನ ಕಥೆ.

ಇವಲ್ಲದೆ ಇಲ್ಲಿನ ಇನ್ನು ಕೆಲವು ಕಥೆಗಳು (ಉದಾ - ದುರ್ಧರನ ಕಥೆ, ರಜಕ ಚಂದನದ ಕಥೆ, ಟೊಳ್ಳಗಣ್ಣ ಮೂರ್ಖನ ಕಥೆ, ಇತ್ಯಾದಿ) ಜಾನಪದ ಆಶಯಗಳನ್ನೇ ಹೊಂದಿವೆ. 'ಕನ್ನಡದಲ್ಲಿ ಇವುಗಳ ಸಂವಾದಿ ಜನಪದ ಕಥೆಗಳು ಇನ್ನೂ ಪ್ರಕಟವಾಗಿಲ್ಲವಾದರೂ ಭಾರತದ ಇತರ ಭಾಷೆಗಳ ಜಾನಪದ ಸಾಹಿತ್ಯದಲ್ಲಿ ಇವು ದೊರೆಯಬಹುದೆಂದು ಭಾವಿಸಬಹುದಾಗಿದೆ' - ಎಂಬ ಡಾ. ಜಯಚಂದ್ರರ ಅಭಿಪ್ರಾಯ ಸಾಧುವಾಗಿದೆ (ನೋಡಿ - 'ಕನ್ನಡ ಜೈನ ಕಾವ್ಯಗಳಲ್ಲಿನ ಜಾನಪದ ಕಥೆಗಳು - ಒಂದು ಅಧ್ಯಯನ. ಪು. ೧೦೪). ಹೀಗೆ ಭಾವಿಸಲು ಇವುಗಳ ಆಶಯಗಳು ಜಾನಪದ ಕಥೆಗಳ ಆಶಯ ಸೂಚಿಯಲ್ಲಿ ಕಾಣುವುದೇ ಕಾರಣ. ಈ ಕಥಾಕೋಶದ ಇನ್ನು ಎರಡು ಕೆಲವು ಕತೆಗಳು (ಷೋಡಶಮುಷ್ಟಿಯ ಕಥೆ

ಹಾಗೂ ಮಂಡೂಕನ ಕಥೆ) ನ್ಯಾಯ ಹಾಗೂ ಗಾದೆಗಳ ಹಿನ್ನೆಲೆಯನ್ನು ವಿವರಿಸುವ ಕಥೆಗಳಾಗಿವೆ.

ಇದಲ್ಲದೆ 'ಧರ್ಮಪರೀಕ್ಷೆ'ಯಲ್ಲಿ ಜೈನೇತರ ಕಾವ್ಯಗಳಿಂದ ಎತ್ತಿಕೊಂಡಿರುವ ಹಲವು ಕಥಾ ಪ್ರಸಂಗಗಳಿವೆ. ಇವುಗಳಲ್ಲಿ ಮಾಂಡವ್ಯನ ಕಥೆ ಹಾಗೂ ಶಿವನು ಗಂಗೆಯನ್ನು ಪಡೆದ ಕಥೆಗಳು ಜನಪದ ಕಥೆಗಳೇ ಆಗಿವೆ.

'ಧರ್ಮಪರೀಕ್ಷೆ'ಯಲ್ಲಿನ ಕಥೆಗಳ ಜಾನಪದೀಯತೆ, ಅವುಗಳಿಗೆ ಸಂವಾದಿಯಾಗಿರುವ ಜನಪದ ಕಥೆಗಳು, ಇತ್ಯಾದಿಗಳ ಬಗ್ಗೆ ಡಾ. ಎಂ.ಎ. ಜಯಚಂದ್ರ ಅವರ ಪೂರ್ವೋಲ್ಲೇಖಿತ ನಿಬಂಧದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ (ಪು. ೧೦೩-೧೨೫). ಪುನರುಕ್ತಿಯ ಭಯದಿಂದ ಅದನ್ನಿಲ್ಲಿ ವಿವರವಾಗಿ ಚರ್ಚಿಸಿಲ್ಲ. ಅನೇಕ ಸ್ವಾರಸ್ಯಕರ ಜಾನಪದ ಆಶಯಗಳು (ತಂದೆ-ಮಗಳು, ಅಣ್ಣ-ತಂಗಿಯರು ಲಗ್ನವಾಗುವ, ವಿಚಿತ್ರ ರೀತಿಯಲ್ಲಿ ಗರ್ಭಧರಿಸುವ, ಹೆಂಗಸರಿಗೆ ಗಡ್ಡ ಮೀಸೆಗಳು ಏಕಿಲ್ಲ ಎಂಬುದು, ಮೊದಲಾದವು) ಇಲ್ಲಿನ ಕಥೆಗಳಲ್ಲಿ ಕಂಡು ಬರುತ್ತದೆ.

**'ಸಮ್ಯಕ್ತ್ವ ಕೌಮುದಿ'ಯಲ್ಲಿನ ಜನಪದ ಕತೆಗಳು**

'ಸಮ್ಯಕ್ತ್ವಕೌಮುದಿ' - ನಡುಗನ್ನಡ ಕಾಲದಲ್ಲಿ ರಚಿತವಾದ ಜೈನಕಾವ್ಯಗಳಲ್ಲೊಂದು. ಮೂರು ಜನ ಕವಿಗಳು ಪ್ರತ್ಯೇಕವಾಗಿ ಇದೇ ಹೆಸರಿನ, ಇದೇ ವಸ್ತುವುಳ್ಳ ಕಾವ್ಯವನ್ನು ರಚಿಸಿದ್ದಾರೆ. ಅವು ಹೀಗಿವೆ-

೧. ಸಮ್ಯಕ್ತ್ವ ಕೌಮುದಿ - ಚಿಕ್ಕಮಲ್ಲಣ ವಿರಚಿತ - ಕಾಲ.ಸು. ೧೪೯೨. (ಅಪ್ರಕಟಿತ)

೨. ಸಮ್ಯಕ್ತ್ವ ಕೌಮುದಿ - ಮೂರನೇ ಮಂಗರಸ - ಕಾಲ.ಸು. ೧೫೦೮.

೩. ಸಮ್ಯಕ್ತ್ವ ಕೌಮುದಿ - ಪಾಯಣವ್ರತಿ ವಿರಚಿತ - ಕಾಲ.ಸು. ೧೬೩೦.

ಈ ಕಾವ್ಯಗಳ ಉದ್ದೇಶ ಒಂದೇ- ಸಮ್ಯಕ್ತ್ವವನ್ನು ಬೋಧಿಸುವುದು, ಅದಕ್ಕಾಗಿ ಅನೇಕ ಕತೆಗಳನ್ನು ಇಲ್ಲಿ ನಿರೂಪಿಸಲಾಗಿದೆ. ಆದ್ದರಿಂದ ಸಮ್ಯಕ್ತ್ವ ಕೌಮುದಿ ಕೂಡಾ ಒಂದು ಕಥಾಕೋಶವೆಂದೇ ಗ್ರಹಿಸಬಹುದು. ಇಲ್ಲಿನ ಅನೇಕ ಕಥೆಗಳು ಜನಪದ

ಕಥೆಗಳೇ ಆಗಿವೆ. ಇಲ್ಲಿ ಹೆಚ್ಚು ವಿವರಗಳಿಗೆ ಹೋಗದೆ ಇದರಲ್ಲಿನ ಯಾವ ಯಾವ ಕಥೆಗಳು ಜನಪದ ಕಥೆಗಳೆಂಬುದನ್ನು ಸಂಗ್ರಹವಾಗಿ ತಿಳಿಯಬಹುದು-

## ೧. ಮುದಿಹಂಸದ ಕತೆ:

ಈ ನೀತಿಕಥೆಯಲ್ಲಿ ಮುದಿ ಹಂಸದ ಎಚ್ಚರಿಕೆಯ ಮಾತನ್ನು ಕೇಳದೆ ಹಂಸಗಳ ಸಂಸಾರವೇ ನಾಶವಾದುದರ ವರ್ಣನೆ ಇದೆ. ಮರವೊಂದರ ಎತ್ತರದ ಕೊಂಬೆಯಲ್ಲಿದ್ದ ಹಂಸಗಳ ಸಂಸಾರವನ್ನು ನೋಡಿ ಬೇಟೆಗಾರನೊಬ್ಬ ಮರದ ಬುಡದಲ್ಲಿ ಗಟ್ಟಿಯಾದ ಬಳ್ಳಿಯೊಂದನ್ನು ಬೆಳೆಸುತ್ತಾನೆ. ಅದರ ಬಗ್ಗೆ ಆರಂಭದಲ್ಲೇ ಮುದಿಹಂಸ ಎಚ್ಚರಿಸುತ್ತದೆ. ಆದರೆ ಎಳೆ ಹಂಸಗಳು ಅದರ ಮಾತನ್ನೇ ಗೇಲಿ ಮಾಡುತ್ತವೆ. ಕೊನೆಗೆ, ಬೆಳೆದ ಬಳ್ಳಿಯನ್ನು ಏರಿ ಬೇಟೆಗಾರ ಗೂಡಿನ ಬಳಿ ಬರುತ್ತಿದ್ದಾಗ ಮುದಿಹಂಸದ ಸಲಹೆಯಂತೆ ಎಲ್ಲವೂ ಸತ್ತಂತೆ ಮಲಗುತ್ತವೆ. ನಿರಾಶೆಗೊಂಡ ಆತ ಅವನ್ನು ಕೆಳಕ್ಕೆ ಎಸೆಯುತ್ತಾನೆ. ಆಗ ಅವು ಹಾರಿ ಹೋಗುತ್ತವೆ.

- ಇದೇ ಆಶಯದ ಅನೇಕ ಜನಪದ ಕತೆಗಳು ವಿವಿಧ ಭಾಷೆಗಳಲ್ಲಿ ಸಿಗುತ್ತವೆ. ಇಲ್ಲಿ ಎರಡು ಆಶಯಗಳಿವೆ. ಬಳ್ಳಿಯನ್ನು ಬೆಳೆಸುವುದು ಒಂದು ಆಶಯವಾದರೆ, ಸತ್ತಂತೆ ನಟಿಸಿ ತಪ್ಪಿಸಿಕೊಳ್ಳುವುದು ಎರಡನೇ ಆಶಯ.

ಮೂರೂ ಜನ ಕವಿಗಳ ಕೃತಿಗಳಲ್ಲಿ ಕಂಡುಬರುವ ಈ ಕಥೆ ಒಂದು ಜನಪದ ಕಥೆ ಎಂಬುದು ನಿರ್ವಿವಾದ. ಕಂಠಸ್ಥ ಸಂಪ್ರದಾಯದ ಜನಪದ ಕಥೆಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಇದು ಕಂಡು ಬರುತ್ತದೆ. ಕೆಲವೆಡೆ ಇದು - ಬಳ್ಳಿ ಹಿಡಿದು ಬೇಟೆಗಾರ ಮೇಲೆ ಬಂದು ಬಲೆ ಹಾಕುವುದು, ಹಕ್ಕಿಗಳು ಸತ್ತಂತೆ ಬಿದ್ದಿರುವುದು, ಅವನು ನಿರಾಶೆಯಿಂದ ಅವನ್ನು ಕೆಳಕ್ಕೆ ಎಸೆದಾಗ ಅವು ಹಾರಿ ಹೋಗುವುದು- ನಡೆಯುತ್ತದೆ. ಇನ್ನೊಂದೆಡೆ ಮರ, ಹಕ್ಕಿ, ಬೇಟೆಗಾರನ ಬದಲು-ಕೆರೆ, ಮೀನು ಹಾಗೂ ಮೀನುಗಾರನ ಪ್ರಸ್ತಾಪ ಬರುತ್ತದೆ. ಕೆರೆಯಲ್ಲಿ ನೀರು ಕಡಮೆಯಾಗುತ್ತಿರುವುದನ್ನು ನೋಡಿ ಬೇರೆ ಕೆರೆಗೆ ಹೋಗೋಣ ಎಂದು ಮುದಿ ಮೀನು ಅನ್ನುವುದು, ಮರಿಮೀನುಗಳು ನಿರ್ಲಕ್ಷಿಸುವುದು. ಕೊನೆಗೆ ನೀರು ಹೆಚ್ಚು ಒಣಗಿದಾಗ ಮೀನುಗಾರ ಇವುಗಳನ್ನು ಹಿಡಿದು ಬುಟ್ಟಿಯಲ್ಲಿ ಹಾಕುವುದು, ಸತ್ತಂತೆ ನಟಿಸಿದ ಮೀನುಗಳನ್ನು ಅವನು ವಾಪಸ್ಸು ನೀರಿಗೆಸೆಯುವುದು, ಆಗಲೂ

ಬುದ್ಧಿ ಮಾತು ಕೇಳದೆ ಒದ್ದಾಡುತ್ತಿದ್ದ ಮೀನೊಂದನ್ನು ಮಾತ್ರ ತಾನೇ ತೆಗೆದುಕೊಂಡು ಹೋಗುವುದು ಇದು ನಡೆಯುತ್ತದೆ.

೨. ಇಂದ್ರದತ್ತ ಮಹಾರಾಜನ ಕಥೆ:

ತನ್ನ ದಂಡಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ರಾಜಧಾನಿಗೆ ಬರುತ್ತಿದ್ದ ಈ ರಾಜ ರಾಜಧಾನಿಯನ್ನು ಇನ್ನೇನು ಪ್ರವೇಶಿಸಲಿದ್ದಾಗ ಕೋಟೆ ಕುಸಿಯುತ್ತದೆ. ಅದನ್ನು ಪುನರ್ನಿರ್ಮಿಸಿದರೂ ಪುನಃ ಕುಸಿಯುತ್ತದೆ. ಆಗ ಚಾರ್ವಾಕ ಸಿದ್ಧಾಂತದ ಮಂತ್ರಿಯೊಬ್ಬ ನರಬಲಿ ಕೊಡಲು ಸೂಚಿಸುತ್ತಾನೆ. ಜೈನನಾದ ರಾಜ ಒಪ್ಪುವುದಿಲ್ಲ. ರಾಜನ ಅಭಿಮತವನ್ನು ಧಿಕ್ಕರಿಸಿ ಉಳಿದವರೆಲ್ಲರೂ ನರಬಲಿಯ ಸಿದ್ಧತೆ ಮಾಡುತ್ತಾರೆ. ಇವರು ಕೊಡುವ ಲಕ್ಷ ಹೊನ್ನಿಗೆ ಆಸೆ ಪಟ್ಟು ಅತಿ ದರಿದ್ರನಾದ ಬ್ರಾಹ್ಮಣನೊಬ್ಬ ತನ್ನ ಮಗನನ್ನು ಸ್ವತಃ ಬಲಿ ಕೊಡಲು ಮುಂದೆ ಬಂದ. 'ತನ್ನವರೆಲ್ಲರೂ ತನ್ನ ಬಗ್ಗೆ ಮುನಿದಾಗ ಇನ್ನು ಕಾಪಾಡುವುದಾದರೂ ಯಾರು?' ಎಂದು ಯೋಚಿಸಿದ ಬಾಲಕ ಧೈರ್ಯವಾಗಿದ್ದು ದೈವ ಚಿಂತನೆಯಲ್ಲಿದ್ದ.

- ಇಲ್ಲಿನ ಕೋಟೆ ಕುಸಿಯುವ, ನರಬಲಿ ಕೊಡುವ ಅಥವಾ ಅದರ ಸಿದ್ಧತೆ ನಡೆಸುವ ಆಶಯಗಳು ಜಾನಪದ ಆಶಯಗಳು. ಹೀಗೆ 'ಹಾರ'ವಾಗುವ ಆಶಯದ ಅನೇಕ ಜನಪದ ಕಥೆ, ಗೀತೆಗಳು ನಮ್ಮಲ್ಲಿವೆ. ಶುನಶ್ಶೇಫನ ಕಥೆಯೂ ಇದೇ ಆಶಯದ್ದೇ. ಜೈನ ಕಥೆಗಾರರು ಈ ಮಾದರಿಯನ್ನು ತುಸು ಬದಲಿಸಿಕೊಂಡು ತಮ್ಮ ಉದ್ದೇಶಕ್ಕೆ ಪೂರಕವಾಗುವಂತೆ ಬಳಸಿಕೊಂಡಿದ್ದಾರೆ. ಬಲಿಗೆಂದು ತಂದ ವ್ಯಕ್ತಿ ಸ್ಥಿತಪ್ರಜ್ಞನಾಗಿರುವುದು, ಅವನ ಮಾತಿನಿಂದ ಇಡೀ ಸಮೂಹವೇ ಮನಃಪರಿವರ್ತನೆಗೊಳ್ಳುವುದು, ಬಹುಶಃ ಜೈನರು ಮಾಡಿಕೊಂಡಿರುವ ಪರಿವರ್ತನೆ. 'ಯಶೋಧರ ಚರಿತೆ' ಕತೆಯ ಉತ್ತರಾರ್ಧದಲ್ಲಿ ಆಗುವುದೂ ಇದೇ.

೩. ಹುಲಿ ಬ್ರಾಹ್ಮಣನನ್ನು ತಿಂದ ಕಥೆ:

ಒಂದೂರಿನ ಅರಸನಿಗೆ ಸುಂದರಿಯಾದ ಮಗಳೊಬ್ಬಳಿರುತ್ತಾಳೆ. ಅವಳಿಗೆ ಆಸೆಪಟ್ಟ ಬ್ರಾಹ್ಮಣನೊಬ್ಬ ಅವಳನ್ನು ಬುದ್ಧಿವಂತಿಕೆಯಿಂದ ಪಡೆಯಲು ಉಪಾಯ ಹೂಡುತ್ತಾನೆ. ರಾಜನ ಬಳಿ ಬಂದು ತಾನೊಬ್ಬ ಒಳ್ಳೆಯ ಜ್ಯೋತಿಷಿ ಎಂದು ಪರಿಚಯಿಸಿಕೊಳ್ಳುತ್ತಾನೆ. ಕುತೂಹಲದಿಂದ ರಾಜ ಮಕ್ಕಳನ್ನೆಲ್ಲ ಕರೆಯಿಸಿ ಅವರ

ಭವಿಷ್ಯ ಹೇಳುವಂತೆ ಕೇಳುತ್ತಾನೆ. ಅವರ ಕೈ ನೋಡಿ ಏನೇನೋ ಹೇಳುತ್ತಾಹೋದ ಬ್ರಾಹ್ಮಣ ಆ ಹುಡುಗಿಯ ಕೈನೋಡಿ- 'ಇವಳು ಹುಟ್ಟಿದ ಮನೆ, ಕೊಟ್ಟ ಮನೆ ಎರಡೂ ಇವಳು ಋತುಮತಿಯಾದ ಸಮಯದಲ್ಲಿ ಹಾಳಾಗುತ್ತವೆ' ಎಂದ. ದೊರೆ ಭೀತನಾಗುತ್ತಾನೆ. ಈ ಬ್ರಾಹ್ಮಣ ದೋಷ ಪರಿಹಾರವನ್ನೂ ಹೇಳುತ್ತಾನೆ. ಅವಳನ್ನು ಒಂದು ಮಂದಾಸಿನಲ್ಲಿ ಮುಚ್ಚಿಟ್ಟು ಅಮಾವಾಸ್ಯೆಯ ರಾತ್ರಿಯಲ್ಲಿ ಊರಾಚೆ ಹರಿಯುವ ನದಿಯಲ್ಲಿ ತೇಲಿಬಿಡುವುದೇ ಆ ಪರಿಹಾರ. ದೊರೆ ನಿಜವೆಂದು ತಿಳಿದು ಹಾಗೆಯೇ ಮಾಡುತ್ತಾನೆ. ಈ ಬ್ರಾಹ್ಮಣ ಆ ತಾಣದಿಂದ ಎರಡು ಗಾವುದ ಕೆಳಗೆ ನದಿ ದಂಡೆಯಲ್ಲಿ ಮಂದಾಸು ತೇಲಿ ಬರುವುದನ್ನೇ ಕಾಯುತ್ತಿದ್ದ. ಬಂದೊಡನೆ ಅದನ್ನು ಎಳೆದುಕೊಂಡು ಆಕೆಯನ್ನು ಬಿಡಿಸಿ ತನ್ನೊಡನೆ ಕರೆದುಕೊಂಡು ಹೋಗುವುದು ಅವನ ಹಂಚಿಕೆ.

ಆದರೆ ಆದದ್ದು ಬೇರೆಯೇ. ರಾಜನ ಭಟರು ಇವಳಿದ್ದ ಮಂದಾಸನ್ನು ನದಿಯಲ್ಲಿ ಬಿಟ್ಟು ಹೋಗುವ ವೇಳೆಗೆ ಪಕ್ಕದ ರಾಜ್ಯದ ದೊರೆ ಬೇಟೆಗಾಗಿ ಬಂದವನು ಅಲ್ಲಿಗೇ ಬಂದ. ಮಂದಾಸನ್ನು ನೋಡಿ ಅಚ್ಚರಿಗೊಂಡು ಅದನ್ನು ದಡಕ್ಕೆಳೆದು ತಂದು ಒಳಗಿದ್ದ ಇವಳನ್ನು ನೋಡಿದ. ಇವಳ ಕಥೆ ಕೇಳಿ, ಇವಳನ್ನು ಬಿಡಿಸಿ, ತಾನು ಸೆರೆಹಿಡಿದಿದ್ದ ಹುಲಿಯನ್ನು ಅದರೊಳಗಿಟ್ಟು ಮುಚ್ಚಿದ. ಮತ್ತೆ ನದಿಯಲ್ಲಿ ತೇಲಿಬಿಟ್ಟ.

ಕೆಳ ಪಾತ್ರದಲ್ಲಿ ಕಾಯುತ್ತಿದ್ದ ಬ್ರಾಹ್ಮಣ ತೇಲಿಬಂದ ಮಂದಾಸವನ್ನು ಕಂಡು, ಖುಷಿಯಿಂದ ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಅದನ್ನು ತೆರೆದ. ಸುಂದರಿಯಾದ ಹುಡುಗಿಯ ಬದಲು ಕ್ರೂರಿಯಾದ ಹುಲಿ ಹೊರಗೆ ಎಗರಿ ಅವನನ್ನು ತಿಂದು ಹಾಕಿತು.

- ಇದು ಒಂದು ಶುದ್ಧಾಂಗ ಜನಪದ ಕಥೆ. ಎಲ್ಲ ಭಾಷೆಗಳಲ್ಲೂ ಈ ಮಾದರಿಯ ಜನಪದ ಕಥೆಗಳು ದೊರೆಯುತ್ತವೆ. ಕನ್ನಡದಲ್ಲಿ ಇಂತಹ ಎರಡು ಜನಪದ ಕಥೆಗಳಿರುವುದನ್ನು ಡಾ.ಎಂ.ಎ. ಜಯಚಂದ್ರರು ಪತ್ತೆ ಮಾಡಿದ್ದಾರೆ. ಇವುಗಳ ಸಂಕ್ಷಿಪ್ತ ವಿವರ ಹೀಗಿದೆ-

೧. **ಪತಿವ್ರತೇನ ಕೆಣಕಿದ್ದರ ಫಲ** - ಸಂ. ಕೆ.ವೈ. ಶಿವಕುಮಾರ್, - ಎಪ್ಪತ್ತೊಂದು ಜನಪದ ಕಥೆಗಳು, ೧೯೭೫, ಪು. ೪೯೪-೯೮.

- ಇಲ್ಲಿ ಬ್ರಾಹ್ಮಣನ ಬದಲು ಜಂಗಮ, ಹುಲಿಯ ಬದಲು ಕರಡಿ, ಮತ್ತೊಬ್ಬ ರಾಜನ ಬದಲು ಸೂಳೆಯೊಬ್ಬಳು ಪೆಟ್ಟಿಗೆಯಲ್ಲಿದ್ದ ಹೆಣ್ಣು ಹೊರಬರಲು ಸಹಾಯ ಮಾಡುವುದು - ಇಂಥ ಸಣ್ಣ ಬದಲಾವಣೆಗಳಿವೆ.

೨. **ಗೌಡ್ನ ಹುಡ್ಗಿ** - ಸಂ. ಎಚ್.ಎಸ್. ರಾಮಚಂದ್ರೇಗೌಡ, ಹಾಸನಜಿಲ್ಲೆಯ ಜನಪದ ಕಥೆಗಳು, ೧೯೮೦, ಪು. ೪೫-೪೭.

-ಇಲ್ಲಿ ಗೌಡನ ಮಗಳ ಮೇಲೆ ಮನಸ್ಸಿಟ್ಟ ಮಾಸ್ತರೊಬ್ಬ ಶಾಸ್ತ್ರಗಾರನಿಗೆ ಲಂಚ ಕೊಟ್ಟು ಆ ಮಗಳನ್ನು ನಕ್ಷತ್ರ ಸರಿಯಿಲ್ಲದ ಕಾರಣ ಪರಿತ್ಯಜಿಸುವಂತೆ ಹೇಳುತ್ತಾನೆ. ಗೌಡ ಹುಡುಗಿಯನ್ನು ಪೆಟ್ಟಿಗೆಯಲ್ಲಿಟ್ಟು ಹೊಳೇಲಿ ತೇಲಿಬಿಡುತ್ತಾನೆ. ದೊರೆ ಮಗನೊಬ್ಬ ಪೆಟ್ಟಿಗೆ ತೆರೆದು, ಅದರಲ್ಲಿ ಕರಡಿಯನ್ನಿಟ್ಟು ತೇಲಿ ಬಿಡುತ್ತಾನೆ. ಆ ಮೇಷ್ಟ್ರು ಪೆಟ್ಟಿಗೆ ತೆರೆದಾಗ ಕರಡಿ ಅವನನ್ನು ಕೊಲ್ಲುತ್ತದೆ.

ಈ ಮೌಖಿಕ ಸಂಪ್ರದಾಯದ ನೀತಿ ಕತೆಯನ್ನು ಜೈನ ಕತೆಗಾರರು ಹಾಗೆಯೇ ಅಳವಡಿಸಿಕೊಂಡಿರುವುದನ್ನು ಸಮ್ಯಕ್ತ್ವ ಕೌಮುದಿಯಲ್ಲಿ ಕಾಣಬಹುದು.

ಜನಪದ ಕತೆಗಳು ಜೈನ ಕಾವ್ಯಗಳಲ್ಲಿ ಅಲ್ಲಲ್ಲಿ ಉಲ್ಲೇಖಮಾತ್ರವಾಗಿ ಬಂದಿರುವ ಪ್ರಸಂಗಗಳೂ ಕಡಿಮೆ ಏನಿಲ್ಲ. ಇಂಥ ಉಲ್ಲೇಖಗಳು ಒಂದೊಂದು ಸಾಲಿನಲ್ಲಿ ಮಾತ್ರ ಬಂದಿರುತ್ತವೆ. ಪಾಯಣ್ಣ ವ್ರತಿಯ ಸಮ್ಯಕ್ತ್ವ ಕೌಮುದಿಯಲ್ಲಿ ಇಂಥ ಒಂದು ಅಪರೂಪದ ಕಥೆಯ ಉಲ್ಲೇಖವಿದೆ. 'ಹೆಣ್ಣಿಗಾಗಿ ದೇವೇಂದ್ರನು ಕೋಳಿಯೂ ಆದನು' ಎಂಬುದೇ ಈ ಉಲ್ಲೇಖ (ಹೆಣ್ಣಿಗಾದನು ಕೋಳಿ ಸುರಪ). ತಾನೊಲಿದ ಹೆಣ್ಣಿನ ಮುನಿಸನ್ನು ಕಳೆಯಲು ದೇವೇಂದ್ರನು ಬೇರೆ ಬೇರೆ ರೂಪ ತಾಳಿ ಪ್ರಯತ್ನಿಸುತ್ತಾನೆ. ಒಮ್ಮೆ ಕೋಳಿಯಾಗಿ ಅವಳು ಒಣಗಲು ಹಾಕಿದ್ದ ರಾಗಿಯನ್ನು ತಿಂದರೂ ಸಹ ಅವಳು (ಅದು ದೇವೇಂದ್ರ ಎಂದು ತಿಳಿದಿದ್ದರಿಂದ) ಓಡಿಸದೆ ಸುಮ್ಮನಿರುತ್ತಾಳೆ. ಅನಂತರ ಗರುಡನಿಂದ ಅವಳ ಮುನಿಸಿಗೆ ಕಾರಣ ತಿಳಿದ ಇಂದ್ರನು ಅವಳ ತಪ್ಪು ಕಲ್ಪನೆಯನ್ನು ಪರಿಹರಿಸಿದಾಗ ರಾಜಿಯಾಗುತ್ತದೆ. - 'ಹೆಣ್ಣಿಗಾದನು ಕೋಳಿ ಸುರಪ' ಎಂಬ ಉಲ್ಲೇಖದ ಹಿಂದಿರುವ ಈ ಕಥೆ ಶುದ್ಧ ಜಾನಪದ ಕಥೆ ಎಂದು ಮೇಲ್ನೋಟಕ್ಕೆ ತಿಳಿಯುತ್ತದೆ. ಇದೇ ಮಾದರಿಯ ಎರಡು ಕನ್ನಡ ಜನಪದ ಕತೆಗಳು ಈಗಾಗಲೇ ಪ್ರಕಟವಾಗಿವೆ.

೧. ಮಳೆರಾಯ - ಮಾರ್ದೆಣ್ಣ - (ಕಥನಗೀತೆ) ಸಂ.ಕ.ರಾ.ಕೃ. - ಜಾನಪದ ಕಥನ ಗೀತೆಗಳು,೧೯೬೨.

೨. ಒಬ್ಬನೇ ಹೇಳಿದ ೨೨ ಜನಪದ ಕಥೆಗಳು - ೧೯೭೪.

**ಧನಕೀರ್ತಿಯ ಕತೆ**

ಇದು ನಯಸೇನನ 'ಧರ್ಮಾಮೃತ'ದಲ್ಲಿ ಬರುತ್ತದೆ. ಅದರ ಹತ್ತನೆ ಆಶ್ವಾಸದಲ್ಲಿ ಅಹಿಂಸಾಣುವ್ರತದ ಆಚರಣೆಯ ಫಲಕ್ಕೆ ಉದಾಹರಣೆಯಾಗಿ ಕತೆ ಬರುತ್ತದೆ. ಇದು ಚಂದ್ರಹಾಸನ ಕತೆಯನ್ನು ಬಹುಮಟ್ಟಿಗೆ ಹೋಲುತ್ತದೆ. ಹುಟ್ಟಲಿರುವ ಮಗು ಮುಂದೆ ರಾಜ್ಯಕ್ಕೆ ಅರಸನಾಗುವನೆಂದು ಭವಿಷ್ಯ ನುಡಿಯುವುದು, ಅದನ್ನು ತಿಳಿದ ಪ್ರಮುಖನೊಬ್ಬ ಖಳನಾಯಕನ ಪಾತ್ರವಹಿಸಿ ಆ ಮಗುವನ್ನು ಕೊಲ್ಲಿಸಲು ಹಲವು ರೀತಿಯಲ್ಲಿ ಪ್ರಯತ್ನಿಸುವುದು, ಎಲ್ಲವೂ ವಿಫಲವಾಗಿ ಆತ ಪ್ರವರ್ಧಮಾನಕ್ಕೆ ಬರುತ್ತಲೇ ಹೋಗುವುದು, ಕೊನೆಗೆ ಆ ಖಳನಾಯಕನ ಮಗಳನ್ನೇ ಮದುವೆಯಾಗುವುದು, ಆದರೂ ಆತನ ದ್ವೇಷ ಮುಂದುವರೆಯುವುದು, ಕೊನೆಗೆ ಖಳನಾಯಕನ ಸೋಲು, ಸಾವು ಹಾಗೂ ಕಥಾನಾಯಕನಿಗೆ ರಾಜ್ಯಪ್ರಾಪ್ತಿ - ಈ ಎಲ್ಲ ಘಟನೆಗಳೂ ಚಂದ್ರಹಾಸನ ಕಥೆಯಲ್ಲಿರುವಂತೆ ಧನಕೀರ್ತಿಯ ಕತೆಯಲ್ಲೂ ಇವೆ. ಒಂದು ಮುಖ್ಯವಾದ ವ್ಯತ್ಯಾಸವೆಂದರೆ - ಧನಕೀರ್ತಿಯನ್ನು ಕೊಲ್ಲಲೆತ್ನಿಸಿದ ಶ್ರೀದತ್ತ ಕೊನೆಯಲ್ಲಿ ವಿಷದ ಲಡ್ಡುಗೆಗಳನ್ನು ತಿಂದು ತಾನೇ ಸಾಯುತ್ತಾನೆ. ಮತ್ತು - ಜೈನ ಧರ್ಮದ ನಂಬಿಕೆಗೆ ಅನುಗುಣವಾಗಿ ಧನಕೀರ್ತಿ ಹೀಗೆ ಪ್ರಾಣಕಂಟಕಗಳಿಂದ ಬದುಕಿ ಉಳಿಯಲು, ಆತ ಹಿಂದಿನ ಜನ್ಮದಲ್ಲಿ ಬೆಸ್ತನಾಗಿದ್ದಾಗ ಕೈಗೆ ಸಿಕ್ಕಿದ ಮೀನೊಂದಕ್ಕೆ ಐದು ಬಾರಿ ಜೀವದಾನ ಮಾಡಿದ್ದೇ ಕಾರಣ ಎನ್ನುವ 'ಮೃಗಸೇನ ಧೀವರನ ಕಥೆ' ಕೂಡಾ ಇದಕ್ಕೆ ತಾಗಿಕೊಂಡೇ ಬಂದಿದೆ. ಚಂದ್ರಹಾಸನ ಕತೆಗೆ ಈ ಬಗೆಯ ಪೂರ್ವ ವೃತ್ತಾಂತವಿಲ್ಲ.

ಧನಕೀರ್ತಿ ಚಂದ್ರಹಾಸನ ಕತೆಯ ಮುಖ್ಯ ಆಶಯಗಳೆಲ್ಲ ಜನಪದ ಕಥೆಯ ಆಶಯಗಳೇ. ಪ್ರಪಂಚದ ಹಲವೆಡೆಗಳಲ್ಲಿ ಇದಕ್ಕೆ ಸಮಾನವಾದ ಮಾದರಿಯ ಕಥೆಗಳಿವೆ. (ವಿವರಗಳಿಗೆ ನೋಡಿ - ಡಾ.ಎಂ.ಎ. ಜಯಚಂದ್ರ, ಪೂರ್ವೋಲ್ಲೇಖಿತ ಗ್ರಂಥ. ಪುಟ. ೧೫೯).

## ವಸಂತ ತಿಲಕೆಯ ಕಥೆ

ಈಡಿಪಸ್ ಕಥೆಯ ಮುಖ್ಯ ಭಾಗದ ಭಾರತೀಯ ರೂಪವೆನ್ನಬಹುದಾದ ಕತೆ ಇದು. ಬಂಧುವರ್ಮನೆಂಬ ಪ್ರಥಮ ದರ್ಜೆಯ ಕವಿಯ ವಿಶಿಷ್ಟ ಕೃತಿ 'ಜೀವಸಂಬೋಧನಂ'ನಲ್ಲಿ ಇದು ದೊರೆಯುತ್ತದೆ.

ವಸಂತತಿಲಕೆ ಎಂಬೊಬ್ಬ ಸೂಳೆ ಗರ್ಭಿಣಿಯಾದಾಗ ತನ್ನ ಸೌಂದರ್ಯ ತುಸು ಮಾಸಿದ್ದನ್ನು ಕಂಡು ಆ ಗರ್ಭವನ್ನೇ ದ್ವೇಷಿಸುತ್ತಾಳೆ. ಜನಿಸಿದ ಗಂಡು-ಹೆಣ್ಣು ಅವಳಿ ಮಕ್ಕಳನ್ನು ವಿರುದ್ಧ ದಿಕ್ಕುಗಳಲ್ಲಿ ಬಿಸುಡುತ್ತಾಳೆ. ಅವು ಬೇರೆ ಬೇರೆ ಕಡೆಗಳಲ್ಲಿ ವ್ಯಾಪಾರಸ್ಥರ ಮನೆಗಳಲ್ಲಿ ಬೆಳೆದು ಪ್ರಾಪ್ತ ವಯಸ್ಕರಾದಾಗ ಮದುವೆಯಾಗುತ್ತಾರೆ. ಈ ಗಂಡು ವ್ಯಾಪಾರ ಮಾಡುತ್ತಾ ವಸಂತತಿಲಕೆಯಿದ್ದ ಉಜ್ಜಯಿನಿಗೆ ಬಂದು, ಅವಳನ್ನು ಕಂಡು ಅನುರಕ್ತನಾಗಿ ಅವಳನ್ನೇ ವರಿಸಿ ಶ್ರೀಮಂತನೂ ಆಗಿ ಅವಳಿಂದ ಒಂದು ಮಗುವಿನ ತಂದೆಯೂ ಆಗುತ್ತಾನೆ. ಇತ್ತ ಊರಿನಲ್ಲಿದ್ದ ಅವನ ಹೆಂಡತಿ ಕಮಲೆಯಿಂದ ಭಿಕ್ಷೆ ಸ್ವೀಕರಿಸಲು ಮುನಿಗಳೊಬ್ಬರು ನಿರಾಕರಿಸುತ್ತಾರೆ. ಕಾರಣ ಕೇಳಿದಾಗ ಈ ವೃತ್ತಾಂತವೆಲ್ಲ ಅವಳಿಗೆ ತಿಳಿಯುತ್ತದೆ. ಅವಳು ಕೊರವಂಜಿಯಾಗಿ ಉಜ್ಜಯಿನಿಗೆ ಬಂದು, ವಸಂತತಿಲಕೆಗೆ ಭಿನ್ನ ಮಾರ್ಗದಿಂದ ವಿಷಯ ತಿಳಿಸುತ್ತಾಳೆ.

ಇಲ್ಲಿರುವ - ತಾಯಿ-ಮಗನ ಮದುವೆ, ಅಣ್ಣ-ತಂಗಿಯರ ಮದುವೆಯ ಆಶಯಗಳು ಪ್ರಪಂಚದ ಹಲವು ಕಡೆಗಳಲ್ಲಿನ ಜನಪದ ಕತೆಗಳಲ್ಲಿ ದೊರೆಯುತ್ತವೆ. ಮುನಿಯು ಭಿಕ್ಷೆಯನ್ನು ತಿರಸ್ಕರಿಸುವುದು ಒಂದು ಮಾರ್ಪಾಟು ಹೊಂದಿದ ಆಶಯವೆಂದು ಗ್ರಹಿಸಬಹುದು. ಬಂಜೆಯಿಂದ ಭಿಕ್ಷೆಯನ್ನು ತಿರಸ್ಕರಿಸುವುದು ಒಂದು ಸಾಮಾನ್ಯ ಆಶಯ. ಜೈನ ಕತೆಗಳಲ್ಲಿ ಇದು ಹೀಗೆ ಮಾರ್ಪಾಟಾಗಿದೆ.

ತಾಯಿ - ಮಗನನ್ನು ಮದುವೆಯಾಗುವ ಆಶಯದ ಕತೆಗಳು ಕನ್ನಡದಲ್ಲೇ ಹಲವಾರು ಇವೆ. 'ಅವಳ ಮಗನೇ ಅವಳ ಗಂಡ' (ಧವಳಶ್ರೀ - ಜಾನಪದ ಕಥಾಮೃತ - ೧೯೬೮), 'ಮಗನನ್ನೇ ಮದುವೆಯಾದಳು' (ಡಿ. ಲಿಂಗಯ್ಯ - ಪಡಿನೆರಳು, ೧೯೭೧), 'ವಿಧಿಯಮ್ಮನ ಕಥೆ' (ಜೀಶಂಪ - ಆಯ್ದ ಜನಪದ ಕಥೆಗಳು - ೧೯೭೦) -ಇತ್ಯಾದಿ. ಇಂಥ ಕೆಲವು ಕಡೆಗಳಲ್ಲಿ ಮಗನನ್ನು ಲಗ್ನವಾದೆನೆಂದು ತಿಳಿದಮೇಲೆ ತಾಯಿ ಕೊಂಡಕ್ಕೆ ಹಾರುವ ಅಥವಾ ಬೇರೆ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಅಂಶವಿದೆ.

ಅಣ್ಣನು ತಂಗಿಯನ್ನೇ ಮದುವೆಯಾಗುತ್ತೇನೆಂದು ಹಟ ಹಿಡಿಯುವ, ಮದುವೆಯ ಏರ್ಪಾಟು ನಡೆಯುವ, ಆದರೆ ಕಾರಣಾಂತರಗಳಿಂದ ಮದುವೆ ನಿಂತುಹೋಗುವ ಆಶಯದ ಹಲವು ಜನಪದ ಕತೆಗಳು ಕನ್ನಡದಲ್ಲಿ ಇವೆ. 'ತಂಗಿಯನ್ನೇ ಮದುವೆಯಾಗಬೇಕು' (ಜಿ.ವಿ. ದಾಸೇಗೌಡ, ಹಾವಾಗಿ ಬಂದ ಅಣ್ಣಯ್ಯ - ಸಂಕಲನ), 'ಬಾಗೇಮರ' (ಕೆ.ವೈ. ಶಿವಕುಮಾರ್ - ಎಪ್ಪತ್ತೊಂದು ಜನಪದ ಕತೆಗಳು), ಗುಲದಂಜಮ್ಮಕತೆ (ಜೀಶಂಪ - ಕನ್ನಡ ಜನಪದ ಕತೆಗಳು) - ಇವು ಈ ಮಾದರಿಯ ಕತೆಗಳಿಗೆ ಕೆಲವು ಉದಾಹರಣೆಗಳು.

ಬದುಕಿನಲ್ಲಿ ಎಷ್ಟೊಂದು ವಿಚಿತ್ರವಾದ ಸಂಬಂಧಗಳು ಏರ್ಪಡಬಹುದೆಂಬುದನ್ನು ತೋರಿಸಲು ವಿಭಿನ್ನ ಆಶಯಗಳನ್ನು ತುಸು ಬೆಳೆಸಿ, ಮಾರ್ಪಾಟು ಮಾಡಿ ಜೈನ ಕಥೆಗಾರರು ಬಳಸಿಕೊಂಡಿದ್ದಾರೆಂದು ತಿಳಿಯಬಹುದು. ವಸಂತತಿಲಕೆಯ ಕತೆ ಅನೇಕ ಸಂಸ್ಕೃತ ಪ್ರಾಕೃತ ಜೈನ ಸಾಹಿತ್ಯ ಕೃತಿಗಳಲ್ಲಿ ಕೂಡ ದೊರೆಯುತ್ತದೆ.

ಜೈನ ಕಥಾ ಸಾಹಿತ್ಯದಲ್ಲಿ ಜನಪದ ಕತೆಗಳ ಸಮಾವೇಶ ಹೇಗೆ ಆಗಿದೆ ಎಂಬುದನ್ನು ಈವರೆಗಿನ ವಿವರಣೆಯಿಂದ ತಕ್ಕಮಟ್ಟಿಗೆ ವಿಶದವಾಗಿಯೇ ತಿಳಿದಂತಾಗಿದೆ. ವಿವರಿಸಿದಷ್ಟೂ ಬೆಳೆಯುತ್ತಲೇ ಹೋಗುವ ಈ ಭಾಗಕ್ಕೆ ಇನ್ನು ತಡೆ ಹಾಕಬಹುದು. ಈವರೆಗಿನ ವಿವರಣೆಯಿಂದ - ಅನೇಕ ಜಾನಪದ ಆಶಯಗಳು, ಆ ಆಶಯಗಳನ್ನುಳ್ಳ ಕತೆಗಳು ಜೈನ ಕಥಾ ಸಾಹಿತ್ಯದಲ್ಲಿ ಧಾರಾಳವಾಗಿ ಬಳಸಿಕೊಳ್ಳಲ್ಪಟ್ಟಿವೆ ಎಂಬುದು ವ್ಯಕ್ತವಾಗುತ್ತದೆ. ಜೈನ ಕಥಾಕೋಶಗಳಲ್ಲಿ ಕಂಡುಬರುವ ಇನ್ನೂ ಕೆಲವು ಆಶಯಗಳನ್ನು ಹೀಗೆ ಪಟ್ಟಿಮಾಡಬಹುದು:

೧. ಜಿನಪೂಜೆಗೆಂದು ಹೋಗುತ್ತಿರುವಾಗ, ಅಥವಾ ಅದಕ್ಕೆ ಪೂರ್ವ ಸಿದ್ಧತೆ ಮಾಡುತ್ತಿರುವಾಗ, ಆಕಸ್ಮಿಕವಾಗಿ ಸಾವು ಉಂಟಾಗಿ, ಮರುಜನ್ಮದಲ್ಲಿ ಆ ಜೀವಿ ಉನ್ನತ ಸ್ಥಾನದಲ್ಲಿ ಹುಟ್ಟುವುದು. (ಉದಾ: ಪುಣ್ಯಾಸ್ರವ -ಪುಷ್ಕಳಾವತಿ, ಕುಸುಮಲತೆಯರ ಕತೆ, ೧-೪೨, ಭವದತ್ತೆಯ ಕತೆ-೧೨-೧೪).

೨. ಮಲಗಿದ್ದಾಕೆಯ ಮೈಯ ಸುವಾಸನೆಯಿಂದ ಆಕರ್ಷಿತಗೊಂಡು ಬಂದ ಹಾವಿನ ಕಡಿತದಿಂದ ಸಾವು ಉಂಟಾಗುವುದು (ಉದಾ: ಪುಣ್ಯಾ. ೧-೮೫).

೩. ಗಂಡನೊಬ್ಬನು ಸೋದರಿ ಅಥವಾ ಪುತ್ರೀ ಭಾವದಿಂದ ಹೆಣ್ಣೊಬ್ಬಳನ್ನು ತಂದು ಮನೆಯಲ್ಲಿಟ್ಟುಕೊಳ್ಳುವುದು, ಅವನ ಹೆಂಡತಿ ಅಸೂಯೆಯಿಂದ, ಗಂಡನಿಲ್ಲದಾಗ ಅವಳನ್ನು ಹೊರಗಟ್ಟುವುದು (ಉದಾ: ಪುಣ್ಯಾ-ಕರಕಂಡು ಮಹಾರಾಜನ ಕತೆ, ೧೨-೫೩).

೪. ಉನ್ನತ ಕುಲದ ರಾಜಪುತ್ರ ಬಾಲ್ಯದಿಂದ ನೀಚಜಾತಿಯವನಲ್ಲಿ ಬೆಳೆಯುವುದು, ಜೈನ ಕತೆಗಳಲ್ಲಿ ಸಿಗುವ ಸಾಮಾನ್ಯ ಆಶಯಗಳಲ್ಲಿ ಒಂದು. (ಉದಾ: ಪುಣ್ಯಾ: ಕರಕಂಡು ಮಹಾರಾಜನ ಕತೆ)

೫. ತಂದೆ - ಮಕ್ಕಳೆಂಬ ಅರಿವಿಲ್ಲದೆ ಅವರ ನಡುವೆ ಯುದ್ಧವಾಗುವುದು ಒಂದು ಜಾನಪದ ಆಶಯ. ಸೊಹ್ರಾಬ್ -ರುಸ್ತುಂ, ಲವಕುಶ-ರಾಮ, ಅರ್ಜುನ-ಬಭ್ರುವಾಹನ - ಈ ಕತೆಗಳು ಪ್ರಸಿದ್ಧವಾಗಿವೆ. ಜೈನ ಕತೆಗಳಲ್ಲಿ ಈ ಆಶಯ ಅಪರೂಪವಾಗಿ ಕಾಣಸಿಗುತ್ತದೆ. (ಉದಾ: ಪುಣ್ಯಾ: ಕರಕಂಡು ಮಹಾರಾಜ ಹಾಗೂ ದಂತಿವಾಹನ ಇವರ ನಡುವೆ ನಡೆದ ಯುದ್ಧ)

೬. ಹುತ್ತದಲ್ಲಿ ಜಿನಪ್ರತಿಮೆ ಇರುವುದು. (ಉದಾ: ಪುಣ್ಯಾ: ಪುಟ - ೬೫)

೭. ಭಕ್ತನ ತಪ್ಪಿನಿಂದಾಗಿ ಜಿನ ವಿಗ್ರಹವು ಪಾತಾಳಕ್ಕೆ ಹೋಗುವುದು.

(ಉದಾ: ಪುಣ್ಯಾ: ಕರಕಂಡು ಮಹಾರಾಜನ ಕಥೆ)

- ಹೀಗೆ, ಜೈನ ಕಥಾ ಸಾಹಿತ್ಯದಲ್ಲಿ ಸಾಮಾನ್ಯ ಜಾನಪದ ಆಶಯಗಳಿರುವಂತೆಯೇ ತುಸು ಪರಿಷ್ಕೃತ ಆಶಯಗಳೂ, ಜೈನ ಸಂಸ್ಕೃತಿಗೇ ವಿಶಿಷ್ಟವಾದ ಕೆಲವು ಆಶಯಗಳೂ ಕಂಡುಬರುತ್ತವೆ.

## ಅಧ್ಯಾಯ - ೩

# ಗಾದೆಗಳು, ನುಡಿಗಟ್ಟುಗಳು

ಪ್ರತಿಯೊಂದು ಗಾದೆಯೂ ಸಾರ್ವತ್ರಿಕ ಅನುಭವದ ಸೂತ್ರರೂಪ. 'ಗಾದೆ ಎಂದರೆ, ಹಲವರ ಅನುಭವ, ಒಬ್ಬನ ಜಾಣತನ' (Proverb in the experience of many, but wit of one) ಎಂಬ ಮಾತೊಂದು ರೂಢಿಯಲ್ಲಿದೆ. ಗಾದೆಯನ್ನು ಬಳಸುವುದರಿಂದಾಗುವ ದೊಡ್ಡ ಪ್ರಯೋಜನವೆಂದರೆ - ವಿವರಣೆಯ ಅಗತ್ಯವೇ ಇಲ್ಲವಾಗುವುದು. ಇದರ ಜೊತೆಗೆ- ಮಾತು (ಬರಹ) ಆಕರ್ಷಕವಾಗುವುದು ಇನ್ನೊಂದು ಲಾಭ. ಆದ್ದರಿಂದಲೇ - ಹಿಂದಿನ ಕಾಲದಿಂದಲೂ ಕವಿಗಳು ಇವನ್ನು ಉಪ್ಪಿನಕಾಯಂತೆ ಬಳಸಿಕೊಳ್ಳುತ್ತಲೇ ಬಂದಿದ್ದಾರೆ. ಜೈನಕವಿಗಳು ಇದರಲ್ಲಿ ಎತ್ತಿದ ಕೈ ಎನಿಸಿಕೊಂಡಿದ್ದಾರೆ. ಪ್ರಾಚೀನ ಕನ್ನಡ ಜೈನ ಕಥಾ ಸಾಹಿತ್ಯದಲ್ಲಿ ಬಳಕೆಯಾಗಿರುವ ಗಾದೆಗಳ ಸಂಖ್ಯೆ ಸಾವಿರಾರು. ಇವುಗಳಲ್ಲಿ ಬಹಳಷ್ಟು ಈಗಲೂ ಹೊಸಗನ್ನಡ ರೂಪದಲ್ಲಿ ಬಳಕೆಯಲ್ಲಿವೆ. ಪ್ರಚಲಿತವಿದ್ದ ಗಾದೆಗಳಷ್ಟೇ ಅಲ್ಲದೆ, ಗಾದೆಗಳಂತೆಯೇ ಕಾಣುವ, ನಿಜಕ್ಕೂ ಚಾಲ್ತಿಯಲ್ಲಿತ್ತೋ ಇಲ್ಲವೋ ಎಂದು ಹೇಳಲು ಕಷ್ಟವಾಗುವ, ಅನೇಕ ಸದೃಶ ವಾಕ್ಯಗಳೂ ಈ ಕಥಾಸಂಗ್ರಹಗಳಲ್ಲಿ ಕಾಣಸಿಗುತ್ತವೆ. ಇದರ ಜೊತೆಗೆ ಅನೇಕ ಜಾನಪದ ನುಡಿಗಟ್ಟುಗಳೂ ಸಹ ಈ ಸಂಗ್ರಹಗಳಲ್ಲಿ ಕಂಡುಬರುತ್ತವೆ. ಈ ಅಧ್ಯಾಯದಲ್ಲಿ ಜೈನ ಕಥಾಸಾಹಿತ್ಯದಲ್ಲಿ ಕಂಡುಬರುವ ಈ ಭಾಷಿಕ ಜಾನಪದ ಅಂಶಗಳ ಬಗೆಗೆ ಒಂದಷ್ಟು ಚರ್ಚೆ ನಡೆಸಬಹುದು.

'ಹೆದರೋನ ಮೇಲೆ ಕಪ್ಪೆ ಎಸೆದ ಹಾಗೆ'.......ಎನ್ನುವುದು ನಮ್ಮಲ್ಲಿ ಈಗಲೂ ಪ್ರಚಲಿತವಿರುವ ಸಾಮಾನ್ಯ ಗಾದೆ. ಇದು ಸಾಕಷ್ಟು ಹಿಂದಿನಿಂದಲೂ ಬಳಕೆಯಲ್ಲಿರಬೇಕು. 'ಪುಣ್ಯಾಸ್ರವ'ದಲ್ಲಿ ಇದೇ ಗಾದೆ ಹೀಗೆ ಬರುತ್ತದೆ-

'ಅಂಜುವರ ಮೇಲೆ ಕಪ್ಪೆಯಂ ಬಿಸುಟರ್'........ (೧-೫೪ ವಚನ)

'ಹಾವಿಗೆ ಹಾಲು ಹಾಕಿದ್ರೆ ವಿಷ ಅಲ್ದೆ ಇನ್ನೇನು ಬರ್ತದೆ?' ಎನ್ನುವುದೋ ಅಥವಾ 'ಹಾವಿಗೆ ಹಾಲೆರೆದ ಹಾಗಾಯ್ತು' ಎನ್ನುವುದೋ ನಮ್ಮಲ್ಲಿ ಸಾಮಾನ್ಯ ರೂಢಿ. 'ಪುಣ್ಯಾಸ್ರವ'ದಲ್ಲಿ ಈ ಗಾದೆಯನ್ನೊಂದು ದೃಷ್ಟಾಂತವೆಂಬಂತೆ ಬಳಸಲಾಗಿದೆ-

'ಪಾವಿಂಗಂ ಪಾಲೆರೆದೊಡೆ ಕೇವಳ ವಿಷವಿರ್ಪ ತೆರದಿ'....... (೩. ೬೫)

'ಓದಿ ಓದಿ ಮರುಳಾದ ಕೂಚುಭಟ್ಟ' ಎಂಬ ಗಾದೆ ಹ್ರಸ್ವಗೊಂಡು, ಇದೇ ಪುಣ್ಯಾಸ್ರವದ ಚಾರುದತ್ತನ ಕತೆಯಲ್ಲಿ ಅಡಕಗೊಂಡಿರುವುದು ಹೀಗೆ - 'ಓದಿ ಮರುಳಾದನ್' (೪-೧೫ ವಚನ). ಚಾರುದತ್ತನು 'ಸುಕವಿಗಳ ಸುಜಾಣರ ಭರತಜ್ಞರ ಭಾವಯುತರ ಗೋಷ್ಠಿಗಳಲ್ಲಿ'ಯೇ ಹೊತ್ತು ಕಳೆಯುತ್ತಿದ್ದ ಸಂಸಾರ ಸುಖವನ್ನು ನಿರ್ಲಕ್ಷಿಸಿದ್ದನ್ನು ತಿಳಿದ ಅವನ ಅತ್ತೆ ಸುಮಿತ್ರೆ ತನ್ನ ಬೀಗಿತಿಯೂ ಚಾರುದತ್ತನ ತಾಯಿಯೂ ಆದ ದೇವಿಲೆಯ ಬಳಿ ಹೋಗಿ - 'ರತಿಯನಿಳಿಕೆಯ್ವಳೆನ್ನಯ ಸುತೆ' ಎನ್ನುವಂತಿದ್ದೂ ಭೋಗಕ್ಕಾಟಿಸದೆ ಇರುವ ಚಾರುದತ್ತನು ಓದಿ ಮರುಳಾದವನು ಎನ್ನುವಾಗ ಈ ಗಾದೆಯ ಬಳಕೆಯಾಗಿದೆ.

'ಹೆದರೋನನ್ನ ಹಾವ್ ಸುತ್ತಿಕೊಂಡಹಾಗೆ' - ಎನ್ನುವ ಗಾದೆಯೂ ಪುಣ್ಯಾಸ್ರವದಲ್ಲಿದೆ - 'ಪಂದೆಯಂ ಪಾವಡರ್ದಂತೆ' - ಎನ್ನುವ ಮಾತಿನಲ್ಲಿ (ಪಂಚಮಾಧಿಕಾರ -೧೫೮. ವಚನ).

'ಕನಸಿನ ಬತ್ತಕ್ಕೆಚ್ಚಿತ್ತು ಗೋಣಿಯಾಂತಂತೆ' - ಎಂಬುದು ನಯಸೇನ ಬಳಸಿರುವ ನೂರಾರು ಗಾದೆಗಳಲ್ಲೊಂದು. 'ಧರ್ಮಾಮೃತ'ದಲ್ಲಿ ಅಂಜನಚೋರನ ಕತೆಯಲ್ಲೊಂದುಕಡೆ ಈ ಗಾದೆಯ ಬಳಕೆಯಾಗಿದೆ. 'ಬದುಕಿದ್ರೆ ಬೇಡಿ ತಿನ್ನಬಹುದು' - ಎಂಬ ಗಾದೆ ನಮ್ಮಲ್ಲಿ ಚೆನ್ನಾಗಿ ಪ್ರಚಲಿತವಿದೆ. ಇದೇ ಅರ್ಥದಲ್ಲಿ ಹಿಂದೆ ಬಳಕೆಯಲ್ಲಿದ್ದ ಗಾದೆ - 'ಜೀವಮುಳ್ಳೊಡೆ ಹಾಡಿಕೊಂಡುಣಲಕ್ಕುಂ' ಸಹ ಧರ್ಮಾಮೃತದ ಅಂಜನಚೋರನ ಕಥೆಯಲ್ಲಿ ಬಳಸಿಕೊಳ್ಳಲ್ಪಟ್ಟಿದೆ.

'ಮಾಡಿದ್ದುಣ್ಣೋ ಮಹರಾಯ' - ಒಂದು ಜನಪ್ರಿಯ ಗಾದೆ. ಇದನ್ನೇ ಸ್ವಲ್ಪ ಮಾರ್ಪಡಿಸಿ ಸುಭಾಷಿತವೆನ್ನುವಂತೆ ನಾಗರಾಜ ಕವಿ 'ಪುಣ್ಯಾಸ್ರವ'ದಲ್ಲಿ

ಹೇಳಿದ್ದಾನೆ- 'ಮಾಡಿದುದನುಣ್ಣದೆ ಪೋಪವರಾರ್ ಧರಿತ್ರಿಯೊಳ್' ಎಂದು (ಪುಟ. ೨೦೦).

'ತಿರುಕ ಕಂಡ ಕನಸಿನಂತೆ'- ಎಂಬುದು ಒಂದು ಪ್ರಸಿದ್ಧ ನುಡಿ. ಕನಸನ್ನು ನೆನೆಸಿಕೊಳ್ಳುವುದು ಮರುಹಗಲಿನಲ್ಲೇ. ಇದೇ ಒಂದು ಗಾದೆ ಮಾತಿನಂತೆ ಕಾಣಿಸಿಕೊಂಡಿದೆ. ನಯಸೇನನ ಧರ್ಮಾಮೃತದಲ್ಲಿ - 'ಇರುಳ್ ಕಂಡ ಕನಸಂ ಪಗಲ್ ನೆನೆವಂತೆ' (ಧ. ೧-೧೫೪) ಎಂಬ ವಾಕ್ಕಿನ ರೂಪದಲ್ಲಿ.

ಇನ್ನು ಕೆಲವು ಗಾದೆಗಳು ಆಗ ಬಳಕೆಯಲ್ಲಿದ್ದು ಈಗ ಚಾಲ್ತಿಯಿಂದ ಮರೆಯಾಗಿರುವಂತಿವೆ. ಕೆಲವು ಉದಾಹರಣೆಗಳು-

೧. ತರುವಲಿಯ ಕಿರೀಟಮನಾಲಿಕಲ್ಲ ಮಳೆಗೊಂಡುದೆಂಬಂತೆ..... (ಧ.೧-೧೫೮)
೨. ಅಳೆಯಬರ್ದೆ ಗಳೆಯಂ ಕುಡಿಯಿಸಿದರೆಂಬಂತೆ..... (ಧ.೧-೧೭೭) (ಗಳೆ ಎಂದರೆ ಜಮೀನನ್ನು ಅಳೆಯುವ ಅಳತೆಗೋಲು. ಇವು ಬೇರೆಬೇರೆ ಅಳತೆಯವು ಇರುತ್ತಿದ್ದವು.)
೩. ಪರದರೊಳ್ ಮರುಳಿಲ್ಲ, ಸೂಳೆ ಸಾಧುವಲ್ಲ (ಧ. ೧-೧೭೮).
(ವ್ಯಾಪಾರಿಗಳಲ್ಲಿ ದಡ್ಡರಿಲ್ಲ, ಸೂಳೆಯರಲ್ಲಿ ಸಾಧು ಸ್ವಭಾವದವರಿರುವುದಿಲ್ಲ).
೪. ಮರುಳ ಪಯಣಕ್ಕೆ ತರಗೆಲೆಯೆ ಸಂಗಡಿಗನೆಂಬಂತೆ (ಧ.೧-೧೯೫).
(ಪಿಶಾಚಿಯ ಪ್ರಯಾಣಕ್ಕೆ ತರಗೆಲೆಯೇ ಜೊತೆಗಾರ).
೫. ಅರಿಬರಿಗುಂ ಆಯು ತಪ್ಪಿದೊಡೆ (ಧ. ೧-೨೦೯).
(ಆಯಸ್ಸು ಮುಗಿಯಿತೆಂದರೆ ಎಚ್ಚರ ಹರಿಯುತ್ತದೆ - ಅಂದರೆ ಸಾವೇ ಗತಿ ಎಂದರ್ಥ.)
೬. ಕೊಟ್ಟ ಕುನ್ನಿ ಬೆಳೆವೆಳೆನಾಯಾಯ್ತು (ಧ. ೫-೪೨).
೭. ಪಿಂಡಿಯಂ ಬಿಡಿಸವೋದ ಮರುಳ್ ಖಂಡುಗೆಣ್ಣೆಯನಾಂತು ಬಂದುದೆಂಬಂತೆ (ಧ. ೫-೮೨).
(ಹಿಂಡಿಯನ್ನು ಬಿಡಿಸಲು ಹೋದ ಪಿಶಾಚಿ ಖಂಡುಗದಷ್ಟು ಎಣ್ಣೆಯನ್ನು ಹೊತ್ತು ಬಂದಿತು).

೮. ಪಲ್ಲಿಂಗೆ ಪಾಲಂ ಬಿಟ್ಟೊಡೊಸಡೆಲ್ಲಂ ದೈವಂ ತಿಂದುದೆಂಬಂತೆ (ಧ. ೨-೯೪)

(ಹಲ್ಲಿಗೆ ಹಾಲು ಹಾಕಿದರೆ ದೈವವು ಒಸಡನ್ನೇ ತಿಂದು ಹಾಕಿತೆಂಬಂತೆ).

೯. ಎತ್ತಿಕೊಂಡ ಕಳ್ಳಂ ಬಾಯಂ ಸುಟ್ಟೋಡಿದನೆಂಬಂತೆ (ಧ. ೨-೯೫)

(ಹಿಡಿದುಕೊಂಡ ಕಳ್ಳನು ಬಾಯನ್ನು ಸುಟ್ಟು ಓಡಿಹೋದ - ಎಂದ ಹಾಗೆ).

೧೦. ಮಕ್ಕಳಂ ಪಡೆವೆನೆಂದು ಮರ್ದಂ ಕುಡಿದ ಮರುದಿವಸಕ್ಕೆ ಗಂಡಂ ಸತ್ತನೆಂಬಂತೆ (ಧ. ೨-೯೬).

೧೧. ಮೂಗಿನೊಳುಳುವಾತಂಗೆ ನೇಗಿಲಂ ಕೊಟ್ಟರೆಂಬಂತೆ (ಧ.೨-೧೪೯)

(ಮೂಗಿನಿಂದ್ಲ ಉಳುತ್ತಿದ್ದವನಿಗೆ ನೇಗಿಲನ್ನು ಕೊಟ್ಟ ಹಾಗೆ - ಅವನ ಕಷ್ಟ ಸರಿದು ತುಂಬ ಅನುಕೂಲವಾಯಿತೆಂಬ ಅರ್ಥ.)

೧೨. ಗಾಳಿಯಂ ಮೆಲ್ವನ ಬಾಯ್ಗವಲಂ ಪೊಯ್ದರೆಂಬಂತೆ (ಧ. ೨-೧೪೯)

(ಗಾಳಿಯನ್ನು ತಿನ್ನುವವನ ಬಾಯಿಗೆ ಅವಲಕ್ಕಿ ಹಾಕಿದ ಹಾಗೆ).

೧೩. ಕಳಲ್ ಬಂದಂಗೆ ಕೈಯೆಡೆಗೊಟ್ಟರೆಂಬಂತೆ (ಧ. ೨-೧೪೯).

೧೪. ಕೆಟ್ಟನೂರುಂ ತಪಂಬಟ್ಟ ನೂರುಂ (ಧ ೨-೨೧೧).

೧೫. ಪುಟ್ಟಿದೆಡೆಯ ಪೊನ್ನುರುವುದು; ಪೋದೆಡೆಯ ತಪಮುರುವುದು (ಧ. ೨-೨೧೧).

(ಹುಟ್ಟಿದೂರಿನ ಹೊನ್ನು ಶ್ರೇಷ್ಠ, ಹೋದ ಕಡೆಯ ತಪಸ್ಸು ಶ್ರೇಷ್ಠ).

- ಹೀಗೆ ಆ ಕಾಲದಲ್ಲಿ ಬಳಕೆಯಲ್ಲಿದ್ದು ಈಗ ಬಹುಮಟ್ಟಿಗೆ ಬಾಯ್ತಪ್ಪಿ ಹೋಗಿರುವ ಹಲವಾರು ಗಾದೆಗಳು ಜೈನ ಕಥಾಸಾಹಿತ್ಯದಲ್ಲಿ ದಾಖಲೆಗೊಂಡಿವೆ. ಆದರೆ ಈಗಲೂ ಬಳಕೆಯಲ್ಲಿರುವ ಗಾದೆಗಳಿಗೆ ಸಮಾನಾರ್ಥಕಗಳಾದ ಗಾದೆಗಳು ಆಗಲೂ ಬಳಕೆಯಲ್ಲಿದ್ದುವೆನ್ನುವುದಕ್ಕೆ ಇನ್ನಷ್ಟು ಉದಾಹರಣೆಗಳನ್ನು ಕೊಡುವುದು ಕಷ್ಟವೇನಲ್ಲ. ಕೈಹಾಕಿದಲ್ಲೆಲ್ಲಾ ಸಿಗುವಷ್ಟು ಧಾರಾಳವಾಗಿದೆ ಅವು. ನೋಡಿ:

೧. 'ಮೊದಲಿಂ ಪಂದಿಗಳೊಡನಾಡಿದ ಕರುವುಂ ಪಂದಿಯಂತೆ ಪೇಲಂ ತಿಂಗುಂ' (ಧ. ೨-೭೬)

- ಮೊದಲಿಂದಲೂ ಹಂದಿಗಳ ಜೊತೆ ಕರುವೊಂದು ಸೇರಿದರೆ ಅದೂ ಸಹ ಹಂದಿಗಳಂತೆ ಮಲವನ್ನೇ ತಿನ್ನುತ್ತದೆ ಎಂಬುದು ಈ ಮಾತಿನ ಅರ್ಥ. ಸಹವಾಸ ಎಂತೋ ಅಂತೇ ವ್ಯಕ್ತಿ ಆಗುತ್ತಾನೆ ಎಂಬುದಿದರ ಭಾವ. ಇದೇ ಭಾವವನ್ನು ವ್ಯಕ್ತಪಡಿಸುವ 'ಕಳ್ಳರ ಜೊತೇಲಿ ಒಳ್ಳೆಯವನು ಸೇರಿದರೆ ಅವನು ಶುದ್ಧ ಕಳ್ಳನೇ ಆಗ್ತಾನೆ', ಹಾಗೂ 'ಕುರಿಗಳ ಜೊತೇಲಿ ಸಿಂಹದ ಮರಿ ಸೇರ್‍ಕೊಂಡ್ರೆ ಅದು ಕುರಿ ಹಾಗಾಗ್ದೆ ಮತ್ತೇನಾಗ್ತದೆ?' ಎಂಬ ಮಾತುಗಳು ಗಾದೆಗಳಂತೆ ಬಳಕೆಯಲ್ಲಿರುವುದನ್ನು ನಾವು ಬಲ್ಲೆವು.

೨. 'ಮೋಹದಾಕೆ ಒತಿಯಾದಳ್' - ಎಂಬುದು 'ಕೂಡಿದವರಿಗೆ ಕೋಡಗ ಮುದ್ದು' ಎಂಬ ಗಾದೆಗೆ ಸಮಾನಾರ್ಥಕದಂತಿದೆ. (ಧ. ೨-೮೨)

೩. 'ಮುನ್ನಂ ಬಂದ ಕಿವಿಯಿಂದಂ ಬಳಿಕ್ಕೆ ಬಂದ ಕೋಡು ಕೂರಿತ್ತೆಂಬ ನಾಣ್ಣುಡಿಯಂತೆ' (ಧ. ೨-೧೦೮) ಹೆಚ್ಚು ಕಡಿಮೆ ಅದೇ ರೂಪದಲ್ಲಿ ಈಗಲೂ ಬಳಕೆಯಲ್ಲಿದೆ.

೪. 'ಎಡೆಯನರಸಾದೊಡೆ ಕೊಡೆಯ ಕಾವು ಮೇಗಾದುದೆಂಬಂತೆ' (ಧ. ೨-೧೨೪).

ದನಕಾಯುವವನು ದೊರೆಯಾದರೆ ಕೊಡೆಯ ಕಾವು ಮೇಲಕ್ಕಾಯಿತು, - ಎಂಬರ್ಥದ ಈ ಗಾದೆಯ ಭಾವವು - 'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲೆದ್ದು ಕೊಡೆ ಹಿಡಿದನಂತೆ' ಎಂಬ ಇಂದಿನ ಗಾದೆಯ ಭಾವಕ್ಕೆ ಸಮಾನವಾಗಿದೆ.

೫. 'ಮನೆಯನಳಿದು ಬೇಲಿಯನಿಕ್ಕುವ.........' (ಧ. ೩-೨೧) ಎಂಬುದನ್ನು- 'ಮನೆ ಮುರಿದು ಚಪ್ಪರ ಹಾಕಿದಂತೆ' ಎಂಬುದರೊಡನೆ ಹೋಲಿಸಿ.

೬. ಆಡು ಮುಟ್ಟದ ಗಿಡವಿಲ್ಲ (ಧ. ೩-೪೦).

೭. ಸಿರಿಬರೆ ಮೊಳಕಾಲನೊಡ್ಡಿದರ್ ಎಂಬಂತೆ (ಧ. ೩-೧೦೪) ಎಂಬುದನ್ನು 'ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡ' ಎಂಬುದಕ್ಕೆ ಹೋಲಿಸಿ.

೮. ಕಬ್ಬಿನ ತೋಟಮಂ ನರಿ ಪೊಕ್ಕಂತೆ (ಧ. ೨-೭೧).

೯. ನೋಂತರ್ಗೆ ಪುರಿದು ಬಿತ್ತಿದೊಡಂ ತಡೆಯದೆ ಬೆಳೆಗುಂ (ಧ. ೬-೧೯೬).

೧೦. ಸೆಟ್ಟಿಯ ಮಾತೊಳ್ಳಿದವು ಬಳ್ಳಂ ಕಿರಿದು (ಧ. ೬-೨೩೨).

೧೧. ಪಂದಿಕೆಯ್ಯಂ ತಿಂದೊಡೆ ಕತ್ತೆಯ ಕಿವಿಯಂ ಕೊಯ್ದರ್ (ಧ. ೭-೭೩).

(ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು - ಎಂಬುದಕ್ಕೆ ಸಮಾನ).

- ಹೀಗೆ ಇಂದು ಬಳಕೆಯಲ್ಲಿರುವ ಗಾದೆಗಳ ಪೂರ್ವರೂಪಗಳೂ ಸಹ ಜೈನ ಕಥಾ ಸಾಹಿತ್ಯದಲ್ಲಿ ಯಥೇಚ್ಛವಾಗಿ ದೊರೆಯುತ್ತವೆ.

ಇದೆಲ್ಲ ಒಂದೆಡೆಯಾದರೆ, ಗಾದೆಗಳೆಂದು ಖಚಿತವಾಗಿ ಹೇಳಲಾಗದ, ಆದರೆ ಹಾಗೆ ಕಾಣುವ ಕೆಲವು ವಾಕ್ಯಗಳು ಪುಣ್ಯಾಸ್ರವ, ಧರ್ಮಪರೀಕ್ಷೆ ಮೊದಲಾದ ಕೃತಿಗಳಲ್ಲಿ ಬಹಳಷ್ಟು ದೊರೆಯುತ್ತವೆ. ಇವು ಕೇವಲ ಉಪಮೆಗಳೂ ಆಗಿರಬಹುದು. ಆದರೆ ಅನುಭವದ್ರವ್ಯ ಹಾಗೂ ಬಾಹ್ಯ ಸ್ವರೂಪಗಳಲ್ಲಿ ಗಾದೆಗಳೊಡನೆ ತುಂಬ ಹೋಲುತ್ತವೆ. ಧರ್ಮಾಮೃತದಿಂದಲೇ ಕೆಲವು ಉದಾಹರಣೆಗಳನ್ನು ನೋಡಿ-

೧. ಪಿತ್ತಜ್ವರಮುಳ್ಳವಂಗೆ ಕುದಿವ ಪಾಲನೆರೆವಂತೆ (ಪು-೭೯).

೨. ಶಿಶುವಿನ ಕೈಯೊಳ್ ಮಸೆದ ಬಾಳಂ ಕೊಟ್ಟಂತೆ (ಪು-೭೯).

೩. ಸುಂಟಿ ತಿಂದ ಕೋಡಗನಂತೆ (೧-೧೪೧).

೪. ಗೋಷ್ಠಿಯಂ ಪಾವು ಪೊಕ್ಕಂತೆ (೨-೭೧).

೫. ಸತ್ತು ಕೇಳ್ವ ಸ್ವರ್ಗದಿಂ ಬರ್ದುಕೊಳ್ವ ನರಕಂ ಲೇಸು (೨-೧೩೩).

ನಾಗರಾಜನ ಪುಣ್ಯಾಸ್ರವದಿಂದರೂ ಇಂಥ ಕೆಲವು ಉದಾಹರಣೆಗಳನ್ನು ಕೊಡಬಹುದು.

೧. ಮಲೆಯಲ್ಲಿ ಕೇದಗೆಯನೇರಿದ ಕೋಡಗನಂತೆ (೧-೨೧).

೨. ನಿರ್ಧನಂ ನಿಧಿಗಂಡಂತೆ (ಪು. ೫೧. ವಚನ)

೩. ಆನೆ ಹಯನಾದಂತೆಯುಂ

೪. ಕಲ್ಪವೃಕ್ಷಂ ಪಣ್ತಂತೆಯುಂ

೫. ಮಕ್ಷಿಕಾಶಂಕೆಗುಣ್ಣರೇ

೬. ಮಿಾಸೆಂಜಲಿಗಂಜಿ ನೀರ್ದೊಳೆವರೆ.....

## ನುಡಿಗಟ್ಟುಗಳು

ತನ್ನ ಪರಿಸರದಿಂದಲೇ ಕಾವ್ಯಭಾಷೆಯನ್ನು ನಿರ್ಮಿಸಿಕೊಳ್ಳುವ ಪ್ರತಿಯೊಬ್ಬ ಸಮರ್ಥ ಕವಿಯೂ ಅದರ ದೇಸೀಯತೆಯ ಎಲ್ಲ ಅಂಶಗಳನ್ನೂ ಜಾಣ್ಮೆಯಿಂದ ಬಳಸಿಕೊಂಡು ಕೃತಿಯ ಅಭಿವ್ಯಕ್ತಿ ಸಾಮರ್ಥ್ಯವನ್ನು ಸಶಕ್ತಗೊಳಿಸುತ್ತಾನೆ. ಹೀಗೆ ಮಾಡುವಾಗ ಗಾದೆಗಳಂತೆಯೇ ಜಾನಪದ ನುಡಿಗಟ್ಟುಗಳೂ ಸಹ ಅವನ ಆಯ್ಕೆಗೆ ಸಹಜವಾಗಿ ಒಳಪಡುತ್ತವೆ. ಜೈನ ಕಥಾ ಸಾಹಿತ್ಯದಲ್ಲಿ ಅಂಥ ಅನೇಕ ದೇಸೀ ನುಡಿಗಟ್ಟುಗಳನ್ನು, ವಿಶಿಷ್ಟಾರ್ಥದ ಬಳಕೆ ಮಾತುಗಳನ್ನು ಗಮನಿಸಬಹುದು.

ಸ್ವಾಭಿಮಾನ, ಸಾಮರ್ಥ್ಯ ಇಲ್ಲದವರನ್ನು 'ಮೂಗಿಲ್ಲದವರು' ಎಂದು ಹಂಗಿಸುವ ವಾಡಿಕೆಯುಂಟು. ನಾಗರಾಜ ಕವಿ ಈ ಮಾತನ್ನು ಎತ್ತಿಕೊಂಡಿದ್ದಾನೆ. ತನ್ನ 'ಪುಣ್ಯಾಸ್ರವ'ದಲ್ಲಿ ಕುಕವಿಗಳನ್ನು ನಿಂದಿಸುತ್ತಾ - 'ಬಲ್ಲರ ಸಭೆಯೊಳ್ ಬೇರೊಂದ ರಚಿಸಿ ಕೃತಿಯಂ ತೋರಲ್ಕರಿಯದ **ಖಳಂಗದೇಂ ಮೂಗುಂಟೇ**' (೧-೨೩) ಎನ್ನುತ್ತಾನೆ.

ಇನ್ನು ಕೆಲವು ನುಡಿಗಟ್ಟುಗಳಿಗೆ ಉದಾಹರಣೆಗಳು -

೧. ಅಬ್ಬರಿಸುವಾದಿಕಾರರ **ಬೊಬ್ಬೆಗಳಿಗೆ ಬೆಬ್ಬಳಂ ಬೋಗರೆ** (ಪುಣ್ಯಾಸ್ರವ . ಪು. ೩೯ ವಚನ).

೨. **ಕಿಚ್ಚುಂ ಕಿಡಿಯುಮಾಗಿ** ಕಾದುತ್ತಮಿರೆ (ಧರ್ಮಾಮೃತ. ೧-೨೦೮).

೩. **ಕುದಿವ ಕೂಳಂತೆ ಕುದಿದು** (ಧರ್ಮಾಮೃತ. ೩-೩೩).

೪. **ಖೇಚರಿಯಲ್ಲ ನಾ ಗೀಚರಿಯೇ** (ಧರ್ಮಾಮೃತ. ೩-೪೭)

- ಹೀಗೆ ಜೈನ ಕಥಾ ಸಾಹಿತ್ಯ ಕೃತಿಗಳಲ್ಲಿ ಗಾದೆಗಳು, ಅದಕ್ಕೆ ಸದೃಶವಾದ ನಾಣ್ಣುಡಿಗಳು, ಜನಪದ ಭಾಷೆಯಲ್ಲಿ ಬಳಕೆಯಲ್ಲಿರುವ ನುಡಿಗಟ್ಟುಗಳು ವಿಪುಲ ಪ್ರಮಾಣದಲ್ಲಿ ಬಳಕೆಯಾಗಿವೆ.

# ಅಧ್ಯಾಯ - ೪

# ಗ್ರಾಮ್ಯದೇವತೆಗಳು

ಜೈನರಿಗೆ 'ಸಿದ್ಧ'ನೇ ಪರಮ ದೇವರು. "ಓಂ ನಮಃ ಸಿದ್ಧೇಭ್ಯಃ" ಎಂಬುದು ಅವರ ಪ್ರಣವ ಮಂತ್ರ. ಸಿದ್ಧನೆಂದರೆ ಮುಕ್ತಾತ್ಮ. 'ಅರ್ಹಂತ' ಎಂಬುದು ಇದಕ್ಕಿಂತ ತುಸು ಕೆಳಗಿನ ಅವಸ್ಥೆ. ಈ ಅರಹಂತರಿಗೆ ಕೇವಲಜ್ಞಾನವಾಗಿರುತ್ತದೆ. ಆದರೆ ನಿಗದಿತ ಆಯಸ್ಸು ಮುಗಿದಿರುವುದಿಲ್ಲವಾದ್ದರಿಂದ ನೆಪಮಾತ್ರಕ್ಕೆ ಮಾನವ ಶರೀರವನ್ನು ಧಾರಣೆ ಮಾಡಿಕೊಂಡಿರುತ್ತಾರೆ. ಶರೀರವನ್ನು ತ್ಯಜಿಸಿ ಅಶರೀರಿಯಾದ, ಕರ್ಮಕಲಂಕವಿದೂರನಾದ, ಮರಳಿ ಜನಿಸದ ಜೀವನನ್ನೇ ಮುಕ್ತಾತ್ಮ ಅಥವಾ ಸಿದ್ಧ ಎನ್ನುತ್ತದೆ ಜೈನಧರ್ಮ. ಶುದ್ಧ ಜೈನ ಆಚಾರದ ಪ್ರಕಾರ ಈ ಸಿದ್ಧರೇ ನಮ್ಮ ಪರಮ ಆದರ್ಶ.

ಆದರೆ ಲೌಕಿಕ ಪ್ರಭಾವಗಳಿಂದಾಗಿ ಜೈನರು ಅನ್ಯದೈವಗಳಿಗೂ ಪೂಜೆ ಮಾಡುವ ಉದಾಹರಣೆಗಳು ಹಿಂದೂ ಇಂದೂ ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿವೆ. ಜೈನ ಕಾವ್ಯಗಳಲ್ಲಿ ಇಂಥ ಉಲ್ಲೇಖಗಳೂ ದೊರೆಯುತ್ತದೆ. ಜೈನ ಕಥಾ ಸಾಹಿತ್ಯದಲ್ಲಂತೂ ಅಜೈನ ಲೌಕಿಕರ ಪ್ರಸಂಗಗಳೂ ಬರುವುದರಿಂದ ಅವರು ಪೂಜಿಸುವ ದೈವಗಳ ಪ್ರಸ್ತಾಪಗಳು ಅನೇಕ ಎಡೆಗಳಲ್ಲಿ ಬರುತ್ತವೆ. ಜಾನಪದದ ದೃಷ್ಟಿಯಿಂದ ಇದರಲ್ಲಿ ಮುಖ್ಯವಾದುದೆಂದರೆ, ಇಲ್ಲಿ ಬರುವ ಗ್ರಾಮ್ಯ ದೇವತೆಗಳ ಪ್ರಾಸ್ತಪಗಳು. ಧರ್ಮಾಮೃತ, ಸಮಯಪರೀಕ್ಷೆ, ಪುಣ್ಯಾಸ್ರವ, ಧರ್ಮಪರೀಕ್ಷೆ ಕೃತಿಗಳಲ್ಲಿ ಅನಕ ಕಡೆ ಪ್ರಾಸಂಗಿಕವಾಗಿ ಹಲವು ಗ್ರಾಮ್ಯದೇವತೆಗಳ, ಅವುಗಳ ಕುರಿತ ಆಚರಣೆಗಳ ವಿಷಯ ಬರುತ್ತದೆ. ಕೆಲವು ಕತೆಗಳಲ್ಲಿ ಒಂದಿಲ್ಲೊಂದು ಗ್ರಾಮ್ಯದೇವತೆ ಒಂದು ಪಾತ್ರವಾಗಿ ಬರುವುದೂ ಉಂಟು. ಈ ಅಧ್ಯಾಯದಲ್ಲಿ

ಜೈನ ಕಥಾಸಾಹಿತ್ಯದಲ್ಲಿ ಈ ಗ್ರಾಮ್ಯ ದೇವತೆಗಳನ್ನು ಕುರಿತ ಪ್ರಸ್ತಾಪಗಳು ಹೇಗೆ ಬಂದಿವೆ ಎಂಬುದನ್ನು ಪರಿಚಯ ಮಾಡಿಕೊಳ್ಳುವ ಮೂಲಕ ಆ ಕಾಲದ ಸಮಾಜದಲ್ಲಿ ಇವುಗಳ ಬಗೆಗಿನ ನಂಬಿಕೆಗಳು, ಆಚರಣೆಗಳು ಏನಿದ್ದವು ಎಂಬುದನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಏಕ್ಕಲದೇವಿ, ಲಕ್ಕ, ಬಾಡುಬ್ಬೆ, ಮಾರಬ್ಬೆ, ಮಸಣವಾಸಿಣಿ, ಮಸಣಬೀರ, ಮೈಲಾರ, ಎರೆಯಪ, ಆಗಸದಬ್ಬೆ, ಬಳಾರಿ, ಭೈರವ, ಮಸಣದ ಮಾರಕ್ಕ, ವೀರಭೈರವ, ಜೋಕಾರ, ಅಕ್ಕಳೆ, ಚಾವುಂಡಿ, ಕಾಳಿ, ಮಾಳಚಿ, ಕೇತ, ಕಾಟ, ಮಾರಿಗೆ, ಮಸಣಿಗೆ, - ಈ ಹೆಸರುಗಳು ಗ್ರಾಮ್ಯದೈವಗಳೆಂದು ಸಮಯಪರೀಕ್ಷೆ, ಧರ್ಮಾಮೃತ ಮೊದಲಾದ ಕಥಾ ಸಂಗ್ರಹಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ಇವುಗಳಲ್ಲಿ ಕೆಲವು ಒಂದೇ ದೈವದ ಬೇರೆ ಬೇರೆ ಹೆಸರುಗಳಿರಬಹುದು (ಉದಾ: ಮಸಣಿ, ಮಸಣವಾಸಿಣಿ, ಮಸಣಿಗೆ, ಮಸಣದ ಮಾರಕ್ಕ). ಈ ದೇವತೆಗಳನ್ನು ಮರಗಿಡಗಳಲ್ಲಿ, ರಸ್ತೆಚೌಕಗಳಲ್ಲಿ, ಹಾದಿಬದಿಯಲ್ಲಿ ಗುಡಿಕಟ್ಟಿ ಪೂಜಿಸುತ್ತಿದ್ದರೆಂಬ ಉಲ್ಲೇಖ ಬಸವಣ್ಣನವರ ಒಂದು ವಚನದಲ್ಲಿ ಬರುತ್ತದೆ.

ಹಾಳು ಮೊರಡಿಗಳಲ್ಲಿ ಊರದಾರಿಗಳಲ್ಲಿ
ಕೆರೆ ಬಾವಿ ಹೂಗಿಡು ಮರಂಗಳಲ್ಲಿ
ಗ್ರಾಮ ಮಧ್ಯಗಳಲ್ಲಿ ಚೌಪಥ ಪಟ್ಟಣ ಪ್ರವೇಶದಲ್ಲಿ
ಹಿರಿಯಾಲದ ಮರದಲ್ಲಿ ಮನೆಯ ಮಾಡಿ
ಕರೆವೆಮ್ಮೆ ಹಸುಗೂಸು ಬಸುರಿ ಬಾಣತಿ
ಕುಮಾರಿ ಕೊಡಗೂಸೆಂಬವರ ಹಿಡಿದುಂಬ ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರ ಬೆಂತರ
ಕಾಳಯ್ಯ ದೂಳಯ್ಯ ಮಾಳಯ್ಯ ಕೇತಯ್ಯಗಳೆಂಬ ನೂರು ಮಡಕೆಗೆ
ನಮ್ಮ ಕೂಡಲಸಂಗಮದೇವ ಶರಣೆಂಬುವುದೊಂದು ದಡಿ ಸಾಲದೆ?

ಹೀಗೆ ಜಿನನಲ್ಲದ ಅನ್ಯದೈವಗಳನ್ನು ಪೂಜಿಸುವುದನ್ನು ಜೈನಶಾಸ್ತ್ರಗಳಲ್ಲಿ 'ದೇವತಾ ಮೂಢತೆ' ಎಂದು ಕರೆಯಲಾಗಿದೆ. (ಜೈನಶಾಸ್ತ್ರಗಳ ಪ್ರಕಾರ ಮೂಢತೆಗಳು ಮೂರು- ದೇವತಾ ಮೂಢತೆ, ಗುರುಮೂಢತೆ, ಹಾಗೂ ಲೋಕ ಮೂಢತೆ. ಜಿನನೇ ಯಥಾರ್ಥ ದೇವರು, ಅದಲ್ಲದೆ ಅನ್ಯದೈವಗಳಲ್ಲಿ ನಂಬಿಕೆ ಇಡುವುದು ದೇವತಾ ಮೂಢತ್ವ; ಕಪಟ ಗುರು, ಯೋಗಿಗಳಲ್ಲಿ ಶ್ರದ್ಧೆಯನ್ನಿಡುವುದು ಗುರು

ಮೂಢತ್ವ; ಹಸುವಿನ ಗಂಜಳ ಹಿಡಿಯುವುದು, ತೀರ್ಥಸ್ನಾನ ಮಾಡುವುದು ಇತ್ಯಾದಿಗಳಿಂದಲೇ ಪುಣ್ಯಪ್ರಾಪ್ತಿ ಎಂದು ನಂಬುವುದು ಲೋಕ ಮೂಢತ್ವ.) ಈ ಮೂರರಿಂದಲೂ ದೂರವಿರುವುದೇ ಸಮ್ಯಗ್ದೃಷ್ಟಿತ್ವ.

ಆದರೆ ಇಂಥ ಮೂಢತೆಗಳನ್ನು ಹೊಂದಿರುವ ಜೈನರ ಸಂಖ್ಯೆ ಕಡಮೆಯೇನಿಲ್ಲ. ಶತಮಾನಗಳ ಹಿಂದೆಯೂ ಇಂಥವರು ಇದ್ದರು ಎಂಬುದಕ್ಕೆ ನಯಸೇನ, ಬ್ರಹ್ಮಶಿವ ಮೊದಲಾದವರಲ್ಲಿ ಕಂಡುಬರುವ ವಿಪುಲ ಟೀಕೆಗಳೇ ಆಧಾರವಾಗಿವೆ. ವಿಶೇಷವಾಗಿ ಹೆಂಗಸರು ಇಂಥ ದೇವತೆಗಳಲ್ಲಿ ಹೆಚ್ಚು ಶ್ರದ್ಧೆ ಹೊಂದಿರುತ್ತಿದ್ದರು. ಬ್ರಹ್ಮಶಿವನ 'ಸಮಯ ಪರೀಕ್ಷೆ' ಯಲ್ಲಿ ಬರುವ ಈ ಮಾತುಗಳನ್ನು ನೋಡಿ-

"ಒಂದೆಡೆಯಲ್ಲಿ ಜಿನಬಿಂಬವನ್ನೂ ಇನ್ನೊಂದೆಡೆಯಲ್ಲಿ ಶಿವಲಿಂಗ ವಿಷ್ಣುಬಿಂಬವನ್ನೂ ಪೂಜಿಸುವ ಸಂದೇಹಿಗೆ ಜೈನನೆಂಬ ಹೆಸರು ಶೋಭಿಸುವುದಿಲ್ಲ. ದೇವಾಲಯವನ್ನು ಕಂಡಾಗ ಅಲ್ಲಿಗೆ ಹೋಗಿ ಮಾಹೇಶ್ವರನಾಗುವ, ಬಸದಿಗೆ ಬಂದಕೂಡಲೇ ಜೈನನಾಗುವ ಕಾಗೆಗೆ ಸಮ್ಯಕ್ತ್ವವು ಒಪ್ಪುವುದಿಲ್ಲ: ಎಕ್ಕಲದೇವಿ, ಲಕ್ಕ, ಬನದ ಬಳರಿ, ಮೈಲಾರಲಿಂಗ - ಮೊದಲಾದವುಗಳ ಜಾತ್ರೆಯಲ್ಲಿ ಭಾಗವಹಿಸುವವನು ಕೌಳನೆನ್ನಿಸಿಕೊಳ್ಳುತ್ತಾನೆಯೇ ಹೊರತು ಜೈನನಾಗಲಾರ" (೪-೧೨೧).

"ಮಾರಬ್ಬೆ, ಮಸಣವಾಸಿಣಿ, ಬೀರ, ಮೈಲಾರರ ದೊಡ್ಡದೊಡ್ಡ ಪ್ರತಿಕೃತಿಗಳನ್ನೂ ಮಾಡಿಸಿಕೊಡುವವರು ನರಕದ ದುಃಖದಲ್ಲಿ ಸವೆಯಬೇಕಾಗುತ್ತದೆ". (೯-೮೫)

ಈ ಉಲ್ಲೇಖಗಳು ಗ್ರಾಮ್ಯದೇವತೆಗಳನ್ನು ಜೈನರೂ ಪೂಜಿಸುತ್ತಿದ್ದರೆಂಬುದನ್ನು ಸೂಚಿಸುತ್ತವೆ. ಜೈನ ಕಥಾ ಸಾಹಿತ್ಯದಲ್ಲಿ ಈ ಅಂಶವೂ, ಇತರರೂ ಈ ದೇವತೆಗಳಿಗೆ ನಡೆದುಕೊಳ್ಳುತ್ತಿದ್ದ ಅಂಶವೂ, ಈ ದೇವತೆಗಳನ್ನು ಕುರಿತ ನಂಬಿಕೆಗಳೂ ದಾಖಲಾಗಿವೆ. ಹೀಗೆ ದಾಖಲಾಗಿರುವ ಅಂಶಗಳನ್ನು ಈ ರೀತಿ ಸಂಗ್ರಹಿಸಬಹುದು.

೧. ಬಳರಿ :

ಈ ಶಕ್ತಿ ದೇವತೆ ಮಾರಿಗೆ ಸಮಾನಳಾದವಳು. ಬಳಾರಿ, ಬನದ ಬಳರಿ ಎಂಬಿತ್ಯಾದಿ ಅಲ್ಪ ವ್ಯತ್ಯಾಸದಿಂದಲೂ ಇವಳನ್ನು ಕರೆಯಲಾಗಿದೆ. ನಯಸೇನನು

ಬಳಾರಿ ಎಂಬ ಹೆಸರನ್ನೇ ಹೆಚ್ಚಾಗಿ ಬಳಸಿದ್ದಾನೆ. 'ಧರ್ಮಪರೀಕ್ಷೆ' ಯ ಚಂಡವೇಗನ ಕಥೆಯಲ್ಲಿ ಆತ ಪಿತ್ರಾರ್ಜಿತ ಆಸ್ತಿಯೆಲ್ಲವನ್ನೂ ಕಳೆದುಕೊಂಡು, ಹೊಸ ಐಶ್ವರ್ಯದ ಪ್ರಾಪ್ತಿಗಾಗಿ ಬಳಾರಿಯನ್ನು ಕುರಿತು ತಪಸ್ಸು ಮಾಡುತ್ತಾನೆ. ಆ ದೇವತೆ ಅವನ ತಪಕ್ಕೆ ಮೆಚ್ಚಿ ಪ್ರತ್ಯಕ್ಷಳಾಗಿ 'ನಿನಗೆ ಭಾಗ್ಯವಿಲ್ಲದೊಡಂ ನಿನ್ನ ನೆರೆಮನೆಯವರ ಭಾಗ್ಯಮಂ ಪಚ್ಚಿಕೊಡುವೆ' ನೆಂದು ಹೇಳಿ ದೊಡ್ಡ ಜಯಗಂಟೆಯನ್ನು ಅವನಿಗೆ ಕೊಟ್ಟು, ಏನನ್ನಾದರೂ ನೆನೆದು ಅದನ್ನು ಬಾರಿಸಿದರೆ ಅದು ಅವನ ಬಳಿ ಬರುತ್ತದೆ ಎಂದು ಹೇಳಿ ಅದೃಶ್ಯವಾಯಿತೆಂಬ ಮಾತು ಬರುತ್ತದೆ (ಧರ್ಮಾಮೃತ. ಅಶ್ವಾಸ ೪, ಪದ್ಯಗಳು ೧೩-೧೬).

ಬಳ್ಳಾರಿಯ ಉಲ್ಲೇಖ ಬ್ರಹ್ಮಶಿವನಲ್ಲಿ ಅನೇಕ ಬಾರಿ ಬರುತ್ತದೆ. ಅವಳು ಕುರಿಯ ಬಲಿಯನ್ನು ಹೆಚ್ಚಾಗಿ ಬಯಸುವವಳೆಂದು ಹೇಳಿಬ್ರಹ್ಮಶಿವ ಆಕೆಯನ್ನು ಖಂಡಿಸಿದ್ದಾನೆ.

ಈ ಬಳರಿಯು ಸಿರಿಸಂಪತ್ತುಗಳನ್ನು ನೀಡುತ್ತಾಳೆ. ಬಂಜೆಯರಿಗೆ ಮಕ್ಕಳ ವರವನ್ನು ನೀಡುತ್ತಾಳೆ ಎಂಬ ನಂಬಿಕೆ ಇತ್ತು ಎಂದೂ, ಜನರು ಬಳರಿಗೆ ದೇವಾಲಯವನ್ನು ಕಟ್ಟಿಸಿಕೊಡುತ್ತಿದ್ದರೆಂದೂ ಬ್ರಹ್ಮಶಿವ ಹೇಳುತ್ತಾನೆ. (ಸ.ಪ. ೯-೮೫, ೮೬). ಬಳರಿಗೆ ಜಾತ್ರೆ ನಡೆಯುತ್ತಿತ್ತು. ಆ ಉತ್ಸವದ ಕಾಲದಲ್ಲಿ 'ಅರ್ಚನೆಗುಣಿತ' ನಡೆಯುತ್ತಿತ್ತು. ಅದರಲ್ಲಿ ಉತ್ತಮ ಕುಲದವರೂ ಪಾಲ್ಗೊಳ್ಳುತ್ತಿದ್ದರು. ಎಲ್ಲ ಜಾತಿಯವರೂ ಆ ಕುಣಿತದಲ್ಲಿ ಭಾಗವಹಿಸುತ್ತಿದ್ದರು. ಅವರೆಲ್ಲ ಆಗ ಮೈಗೆ ಅರಿಶಿಣ ಹಚ್ಚಿಕೊಂಡು, ಬಾಸಿಂಗ ಮುಡಿದು, ಕೈಯಲ್ಲಿ ಕೋಲು ಹಿಡಿದು ಒಟ್ಟಾಗಿ ಕುಣಿಯುತ್ತಿದ್ದರು. ಆಗ ವಾದ್ಯ ಬಾರಿಸುತ್ತಿದ್ದ ಹೊಲೆಯರು ಎಲ್ಲರಿಂದಲೂ ಮುಟ್ಟಿಸಿಕೊಳ್ಳುತ್ತಿದ್ದರು. (ಸ.ಪ. ೯-೮೭)

೨. ಮಾರಿ :

ಕರ್ನಾಟಕದೆಲ್ಲೆಡೆ ಹಾಗೂ ಇತರ ರಾಜ್ಯಗಳಲ್ಲಿಯೂ ಪ್ರಸಿದ್ಧಳಾದ ಈ ಶಕ್ತಿದೇವತೆಯ, ಇವಳ ಕುರಿತ ನಂಬಿಕೆಗಳು ಹಾಗೂ ಆಚರಣೆಗಳ ಉಲ್ಲೇಖ ಬ್ರಹ್ಮಶಿವ, ನಯಸೇನರ ಕೃತಿಗಳಲ್ಲಿ ಪದೇ ಪದೇ ಬರುತ್ತದೆ. ಈ ಮಾರಿದೇವತೆಗೆ ಹರಕೆಯೊಪ್ಪಿಸುವ ಕಾರ್ಯ ಎಷ್ಟು ವರ್ಣಮಯವಾಗಿ ಉತ್ಸಾಹದಿಂದ ನಡೆಯುತ್ತಿತ್ತೆಂಬುದರ ವಿವರಗಳನ್ನು ಬ್ರಹ್ಮಶಿವ ಕೊಡುತ್ತಾನೆ. ವಿಸ್ತಾರವಾದ

ಸ್ಥಳಗಳನ್ನು ಈ ಕಾರ್ಯಕ್ಕಾಗಿ ಜನ ಆರಿಸಿಕೊಳ್ಳುತ್ತಿದ್ದರು. ಇಲ್ಲಿ ರಂಗವನ್ನು ಬರೆಯುತ್ತಿದ್ದರು. ವಿವಿಧ ಬಗೆಯ ಅಡುಗೆಗಳನ್ನೂ ಮಾಡಿ, ರಂಗದ ಮೇಲೆ ಅದನ್ನು ಬಲಿಯಾಗಿ ಎರಚುತ್ತಿದ್ದರು. ಮಾರಿಯನ್ನು ಬರಮಾಡಿಕೊಳ್ಳುವ, ಅದೇ ರೀತಿ ಊರಿಂದ ಹೊರಕ್ಕೆ ಕಳಿಸುವ ಕಾರ್ಯಕ್ರಮವನ್ನು ಉತ್ಸವದೋಪಾದಿಯಲ್ಲಿ ನಡೆಸುತ್ತಿದ್ದರು. ಆಹ್ವಾನಿಸಿದ ಬಳಿಕ ತಮ್ಮ ಹೊಲದಲ್ಲಿ ಬೆಳೆದ ಧಾನ್ಯಗಳ ಅಡುಗೆಯಿಂದಲೂ ಮಾಂಸದಿಂದಲೂ ನೈವೇದ್ಯ ಮಾಡುತ್ತಿದ್ದರು. (ಸ.ಪ ೯-೧೨೯)

೩. ಬಾದುಬ್ಬೆ :

ಈಕೆ ಈಗ ಯಾವ ಹೆಸರಿನಿಂದ ಕರೆಯಲ್ಪಡುತ್ತಿದ್ದಾಳೆ ಎಂದು ಹೇಳುವುದು ಕಷ್ಟ. ಬಾದುಬ್ಬೆ, ಬಾದುಂಬೆ ಎಂಬ ನಾಮಾಂತರಗಳಿಂದಲೂ ಈಕೆ ಉಲ್ಲೇಖಿತಳಾಗಿದ್ದಾಳೆ. ಈಕೆ ಸಸ್ಯಾಧಿದೇವತೆ ಎಂದು ಬ್ರಹ್ಮಶಿವ ಸೂಚಿಸಿದ್ದಾನೆ (೯-೪೨).

ಈ ಬಾದುಬ್ಬೆಯ ಹೆಸರಿನಲ್ಲಿ ಒಂದು ಕಂಬವನ್ನು (ಬಹುಶಃ ಹೊಲದಲ್ಲಿ) ರೈತನು ನೆಡುತ್ತಿದ್ದನೆಂದೂ, ಬೆಳೆ ಚೆನ್ನಾಗಿ ಬಂದರೆ ಅದು ಈ ಬಾದುಬ್ಬೆಯ ಕೃಪೆ ಎಂದು ಬಗೆಯುತ್ತಿದ್ದನೆಂದೂ ಹೇಳುವ ಬ್ರಹ್ಮಶಿವನು ಇದೊಂದು ಮೂಢತನದ ನಂಬಿಕೆ ಎಂದುಗೇಲಿ ಮಾಡಿದ್ದಾನೆ-

ಸಾಯಿರ ಖಂಡುಗಮಂ ಬೆಳೆ
ದಾ ವೊಕ್ಕಲ ಮಗನದೊಂದು ಕಂಬಮನೊಯ
ದಿಟ್ಟಾಯಾರಿನ ಬಾದುಬ್ಬೆಗೆ
ಸಾಯಿರಮಂ ಬೆಳೆದನೆಂದು ನುಡಿವರ್ಮೂಢರ್ (೯-೪೨)

ಇಲ್ಲಿ ಬಾದುಬ್ಬೆಯನ್ನು ಕುರಿತ ನಂಬಿಕೆ ಆಚರಣೆಯೂ, ಅದರ ಬಗೆಗೆ ಜೈನ ಕವಿಯ ಗೇಲಿಯೂ ದಾಖಲಾಗಿದೆ.

೪. ಬೆನಕ :

'ವಿನಾಯಕ'ದ ದೇಸೀರೂಪವೇ ಬೆನಕ. ಹಳ್ಳಿಗರು ಸಗಣಿ ಉಂಡೆಯೊಂದಕ್ಕೆ ಹುಲ್ಲಿನಗರಿ ಸಿಕ್ಕಿಸಿ ನೂಲು ಸುತ್ತಿಟ್ಟು 'ಬೆನಕ' ಎಂದು ಕರೆದು ಪೂಜಿಸುವ ಪದ್ಧತಿ ಇದೆ. ಈ ಬೆನಕವನ್ನು ಕುರಿತ ಅನೇಕ ಜನಪದ ನಂಬಿಕೆಗಳು ವಿಶೇಷವಾಗಿ

'ಸಮಯ ಪರೀಕ್ಷೆ'ಯಲ್ಲಿ ದಾಖಲಾಗಿವೆ. 'ಹಗೇವುಗಳಲ್ಲಿನ ಧಾನ್ಯ ಕೆಟ್ಟು ಹೋಗದಂತೆ ರಕ್ಷಿಸುತ್ತಾನೆಂದು ಅಲ್ಲಿ ಬೆನಕನನ್ನು ಮಾಡಿ ಇಡಿಸುತ್ತಿದ್ದರು' (೧೨-೪, ೮). ರಾಕ್ಷಸರು ಹಗೇವುಗಳನ್ನು ಪ್ರವೇಶಿಸದಂತೆ ತಡೆಯಲೆಂದು ಅದರಲ್ಲಿ ನೂಲು ಸುತ್ತಿದ ಬೆನಕನನ್ನು ಅದರ ಯಶಸ್ವಿಯಾಗಿ ಪೂಜಿಸುತ್ತಿದ್ದರು (೧೨-೩); ಹೊಲಗದ್ದೆಗಳ ಪೈರು ಯಾವ ಕಾರಣಕ್ಕೂ ಹಾಳಾಗದಿರಲೆಂದು ಬೆನಕನನ್ನು ಅಲ್ಲಿ ಸ್ಥಾಪಿಸುತ್ತಿದ್ದರು. ಕೆರೆಯ ಏರಿಗಳು ಭದ್ರವಾಗಿರಲೆಂದು ಅಲ್ಲಿ ಬೆನಕನನ್ನು ಸ್ಥಾಪಿಸುತ್ತಿದ್ದರು (೯-೪೦; ೪೧). ಎಂದು ಈ ದೈವವನ್ನು ಕುರಿತು ಆ ಕಾಲದಲ್ಲಿದ್ದ ಜಾನಪದ ಆಚರಣೆಗಳ ಬಗೆಗೆ 'ಸಮಯಪರೀಕ್ಷೆ'ಯಲ್ಲಿ ಉಲ್ಲೇಖಗಳು ದೊರೆಯುತ್ತವೆ.

೫. ಎರೆಯಪ:

ಆರೇಳು ಗ್ರಾಮದೇವತೆಗಳ ಹೆಸರನ್ನು ವಿಡಂಬನೆಯ ಉದ್ದೇಶಕ್ಕೆಂದು ಹೇಳುವಾಗ ಬ್ರಹ್ಮಶಿವನು 'ಎರೆಯಪ' ಎಂಬ ಒಂದು ದೈವದ ಹೆಸರನ್ನು ಹೇಳುತ್ತಾನೆ. ಆ ಪದ್ಯ ಹೀಗಿದೆ-

ಪಸಕಾಲದೊಳೆರೆಯಪನಾ
ಗಸದಬ್ಬೆ ಬಳಾರಿ ಭೈರವಂ ಮೈಲಾರಂ
ಮಸಣಿ ಮಾರಬ್ಬೆಯೆಂದಿಂ
ತು ಸತ್ತರಾಭಕ್ತರೇಕೆಯೋ ಕೊಂಡಾಡರೆ। (೯-೧೦೫)

- 'ಬರಗಾಲ ಬಂದಾಗ ಎರೆಯಪ, ಅಗಸದಬ್ಬೆ ಬಳಾರಿ ಭೈರವ ಮೈಲಾರ ಮಸಣಿ ಮಾರಬ್ಬೆ ಎಂದೆಲ್ಲ (ದೇವತೆಗಳೂ) ಸತ್ತರು. ಅವರನ್ನೇಕೆ ಭಕ್ತರು ಆಗ ಕೊಂಡಾಡಲಿಲ್ಲ"- ಎಂಬುದು ಇದರ ಸಮೀಪದ ಅರ್ಥ. ಬಳಾರಿ, ಭೈರವ, ಮಾರಿ- ಈ ದರ್ಜೆಯ ಒಂದು ದೈವವೇ ಎರೆಯಪ ಎಂದು ಇದರಿಂದ ಸ್ಪಷ್ಟವಾಗುತ್ತದೆ. ನಯಸೇನ ಕೂಡ 'ಧರ್ಮಾಮೃತ' ದಲ್ಲಿ ಎರೆಯಪ, ಕಾಡೆರೆಯಪ ಎಂಬ ದೈವಗಳ ಹೆಸರನ್ನು ಉಲ್ಲೇಖಿಸುತ್ತಾನೆ. ಕಾಡಿನಲ್ಲಿ ಸ್ಥಾಪಿಸಲ್ಪಡುತ್ತಿದ್ದ ಎರೆಯಪ ದೈವವನ್ನು ಕಾಡೆರೆಯಪ ಎಂದು ಕರೆಯುತ್ತಿದ್ದರೆಂದು ಊಹಿಸಬಹುದು.

ಇಷ್ಟಲ್ಲದೆ ಈ ಎರೆಯಪನ ಬಗೆಗೆ ಹೆಚ್ಚಿನ ವಿವರಣೆಗಳಿಲ್ಲ

೬. ಮೈಲಾರ :

'ಶೌರ್ಯದಿಂದ ಅಹಂಕಾರಪಟ್ಟು, ಕೋಪದಿಂದ ಹೊಟ್ಟೆಕಿಚ್ಚು ಪಟ್ಟುಕೊಂಡು, ಹೋರಾಡಿ ಸತ್ತ ಒಬ್ಬ ಜೈನವೀರನೇ ಈ ಮೈಲಾರ ಎಂಬ ಗ್ರಾಮದೈವವಾದ'- ಎಂಬ ಒಂದು ಜಾನಪದ ನಂಬಿಕೆಯನ್ನು ಬ್ರಹ್ಮಶಿವ ದಾಖಲಿಸಿದ್ದಾನೆ. (ವೀರದೊಳುಕ್ಕಿಮಚ್ಚರಿಸಿ ಕೋಪದ ಜೈನನೆ ಕಾದಿ ಸತ್ತು ಮೈಲಾರನೆನಲ್ಕೆ ರೂಢಿವಡೆದಂ'- ಸಮಯಪರೀಕ್ಷೆ ೨-೭೧). 'ಪಾಪಕರ್ಮಿಗಳಾದ ಜನ ಈ ಮೈಲಾರನಿಗೆ ಪ್ರಾಣಬಲಿ ಕೊಡುತ್ತಾರೆ, ಆದರೆ ಅವನಿಗೆ ಅದು ಇಷ್ಟವಿಲ್ಲ. ತನಗಾಗಿ ಭಕ್ತರು ಮಾಡುವ ಕೊಲೆಗಳಿಗಾಗಿ ಜುಗುಪ್ಸೆ ಪಡುವ ಅವನು ತಾನೇ ಉಪವಾಸವಿದ್ದು ಮರುದಿನ ಪಾರಣೆಯನ್ನು ಆಚರಿಸುತ್ತಾನೆ. ಆದ್ದರಿಂದ ಅವನು ಜೈನನೆನ್ನುವುದನ್ನು ನಂಬಬೇಕು' ಎಂದು ಹೇಳುವ ಮೂಲಕ (ಸ.ಪ. ೨-೭೨) ಬ್ರಹ್ಮಶಿವ ಮೈಲಾರನಿಗೆ ಪ್ರಾಣಬಲಿ ನಡೆಯುತ್ತಿದ್ದುದನ್ನು ದಾಖಲಿಸುತ್ತಾನೆ. (ಆದರೆ ಜೈನರು ಹೀಗೆ ಬಲಿಕೊಡುತ್ತಾರೆಂದು ಬ್ರಹ್ಮಶಿವನ ಅರ್ಥ ಅಲ್ಲ ಎಂಬುದನ್ನು ನಾವು ನೆನಪಿಡಬೇಕು). ಅಷ್ಟೇ ಅಲ್ಲದೆ, ಮೈಲಾರಲಿಂಗನಿಗೆ ಸಂಬಂಧಿಸಿದಂತೆ ನೋಂಪಿಯೊಂದು ನಡೆಯುತ್ತದೆಂದೂ, ಆ ಕಾಲದಲ್ಲಿ ಆ ನೋಂಪಿಯನ್ನು ವ್ರತವನ್ನು ಸ್ವೀಕರಿಸಿದ ಹಾರುವರನ್ನು ಹೊಲೆಯರು ಮುಟ್ಟಬಹುದೆಂದೂ ಇದ್ದ ಇನ್ನೊಂದು ಅಪರೂಪದ ಆಚರಣೆಯನ್ನು ಬ್ರಹ್ಮಶಿವ ದಾಖಲಿಸಿದ್ದಾನೆ; (೯-೧೨೮)

ಈ ಕೃತಿಗಳಲ್ಲಿ ಉಲ್ಲೇಖಗೊಂಡಿರುವ ಇತರ ದೇವತೆಗಳು (ಮಸಣಿ, ಇತ್ಯಾದಿ) ಶಕ್ತಿ ದೇವತೆಗಳ ವಿವಿಧ ರೂಪಗಳೆಂಬ ನಂಬಿಕೆ ಪ್ರಚಲಿತದಲ್ಲಿದೆ, ಇತ್ತು ಎಂದು ತಿಳಿದರೆ ಸಾಕು. ಆ ಎಲ್ಲ ದೇವತೆಗಳೂ ವಿವಿಧ ವರ್ಗದ ಜನರಿಂದ ವಿವಿಧ ಕಾರಣಗಳಿಗಾಗಿ ಪೂಜಾ ಸೇವೆಯನ್ನೂ ಪಡೆದುಕೊಳ್ಳುತ್ತಿದ್ದವು ಎಂಬುದು ಈ ಕಾವ್ಯಗಳಲ್ಲಿ ಉಲ್ಲೇಖಿಸಲ್ಪಟ್ಟಿರುವುದರಿಂದ ತಿಳಿಯುವ ಮುಖ್ಯಾಂಶ.

○

## ಅಧ್ಯಾಯ - ೫

# ನಂಬಿಕೆಗಳು, ನಡವಳಿಕೆಗಳು

ವ್ಯಕ್ತಿಗಳ ಬದುಕು ಅವರ ನಂಬಿಕೆಗನುಸಾರವಾಗಿ ನಡೆಯುತ್ತದೆ. ಈ ನಂಬಿಕೆಗಳು ಅಧ್ಯಯನ, ಚಿಂತನೆ, ವಿವೇಚನೆ, ಅನುಭವಗಳ ಫಲವಾಗಿ ಬಂದಿರಬಹುದು; ಅಥವಾ ಹಿರಿಯರು ಹೇಳಿದರೆಂದು, ಯಾರಿಗೋ ಏನೋ ಆಗಿತ್ತೆಂದು - ಬಂದಿರಬಹುದು. ಈ ನಂಬಿಕೆ ಮೇಲ್ಮಟ್ಟದ್ದಾಗಿರಬಹುದು, ಅಥವಾ ಎದೆಯಾಳದ್ದಾಗಿರಬಹುದು. ಕೆಲವೊಮ್ಮೆ ವ್ಯಕ್ತಿಗತವಾಗಿ ಒಂದು ವಿಷಯದಲ್ಲಿ ನಂಬಿಕೆ ಇಲ್ಲದಿದ್ದರೂ ಸಮುದಾಯದ ಇತರರನ್ನು ಎದುರು ಹಾಕಿಕೊಳ್ಳಲಾರದೆ ಅವರು ಹೇಳಿದ್ದನ್ನೋ ಮಾಡಿದ್ದನ್ನೋ ಒಬ್ಬ ವ್ಯಕ್ತಿ ತಾನೂ ಮಾಡಬಹುದು. ಈ ನಡವಳಿಕೆಗೂ ಸಹ- ಆ ಸಮುದಾಯದೊಡನೆ ತನ್ನನ್ನು ಐಕ್ಯಗೊಳಿಸಿಕೊಳ್ಳುವ ಆಕಾಂಕ್ಷೆಯೇ ಕಾರಣವಾಗಿರುತ್ತದೆ.

ವ್ಯಕ್ತಿಯ ನಡವಳಿಕೆಗಳ ಬಗೆಗಿನ ಈ ಮಾತು ಸಮುದಾಯದ ಬಗೆಗೂ ಬಹುಮಟ್ಟಿಗೆ ನಿಜ.

ವ್ಯಕ್ತಿ ಸಮುದಾಯದ ನಡವಳಿಕೆಗಳೆಲ್ಲ ಆಯಾ ಕಾಲದ ಒಟ್ಟಾರೆ ಜಾನಪದ ಜೀವನವನ್ನು ರೂಪಿಸುತ್ತವೆ. ಒಂದು ಕಾಲದ ಜನಪದ ಬದುಕಿನ ರೀತಿ ನೀತಿಗಳನ್ನು ತಿಳಿಯುವಲ್ಲಿ ಈ ನಂಬಿಕೆ ನಡವಳಿಕೆಗಳ ಅಧ್ಯಯನ ಮುಖ್ಯ ಪಾತ್ರ ವಹಿಸುತ್ತದೆ.

ಜೈನ ಕಥಾ ಸಾಹಿತ್ಯ ಕೃತಿಗಳಲ್ಲಿ ತತ್ಕಾಲದ ಜನಸಮುದಾಯದ ನಂಬಿಕೆ ನಡವಳಿಕೆಗಳ ಬಗೆಗೆ ವ್ಯಾಪಕ ಮಾಹಿತಿ ದೊರೆಯುತ್ತದೆ. ಬ್ರಹ್ಮಶಿವ, ನಯಸೇನ, ನಾಗರಾಜರು ಈ ನಿಟ್ಟಿನಲ್ಲಿ ಮುಖ್ಯ ಆಕರಗಳಾಗುತ್ತಾರೆ. ಇವರ ಕೃತಿಗಳಿಂದ

ದೊರೆಯುವ ವಿವಿಧ ಧರ್ಮದ, ವರ್ಗದ ಜನರ ನಂಬಿಕೆ ನಡವಳಿಕೆಗಳ ಚಿತ್ರವೆಂಥದೆಂಬುದನ್ನಿಲ್ಲಿ ಅವಲೋಕಿಸಬಹುದು.

೧. ಜೈನರ ನಂಬಿಕೆ ನಡವಳಿಕೆಗಳು:

೧. ಏನೇ ತೊಂದರೆಯಾದರೂ ಅದು ತನ್ನ ಕರ್ಮದ ಫಲ ಎಂದುಕೊಳ್ಳುವುದು ಎಲ್ಲ ಕಾಲದಲ್ಲೂ ಜೈನರ ಸಾಮಾನ್ಯ ನಂಬಿಕೆ. ಈ ನಂಬಿಕೆಯ ಕಾರಣವಾಗಿಯೇ ಪ್ರತಿಕಾರದ ಕ್ರಮ ಅವರಲ್ಲಿ ಸಾಮಾನ್ಯವಾಗಿ ಕಾಣುವುದಿಲ್ಲ. ಎಲ್ಲ ಜೈನಕಾವ್ಯಗಳಲ್ಲೂ ಇದಕ್ಕೆ ಉದಾಹರಣೆಗಳು ಸಿಗುತ್ತವೆ. ಧರ್ಮಾಮೃತದ ನಾಲ್ಕನೇ ಆಶ್ವಾಸದಲ್ಲಿ ಬರುವ 'ಅನಂತಮತಿಯ ಕತೆ'ಯಲ್ಲಿ ಆಕೆ ಕಾಡಿನ ನಡುವೆ ಇಳಿಸಲ್ಪಟ್ಟಾಗ 'ಫಲಮಾದುದು ಮುನ್ನಮೆನ್ನ ಮಾಡಿದ ಕರ್ಮಂ' ಎಂದುಕೊಳ್ಳುತ್ತಾಳೆ. (೪-೫೧).

೨. ಧರ್ಮವಲ್ಲದೆ ಬೇರಾವುದೂ ತಮ್ಮನ್ನು ಕಾಯದೆಂಬುದು ಜೈನರ ನಂಬಿಕೆಗಳಲ್ಲೊಂದು. 'ಧರ್ಮವೊಂದಲ್ಲದನ್ಯಂ ಶರಣಲ್ಲಂ' (ಧ ೩-೫೬). ಬ್ರಹ್ಮಶಿವನ 'ಸಮಯಪರೀಕ್ಷೆ'ಯಲ್ಲೂ ಈ ಮಾತು ಹಲವು ಕಡೆ ಹಲವು ಪಾತ್ರಗಳ ಬಾಯಿಂದ ಬರುತ್ತದೆ - 'ಜಿನಧರ್ಮಾಮೃತ ಸಾರದಿಂದ ನೀನು ಶಾಂತಿಯನ್ನು ಪಡೆದುಕೋ, ತಂಪಾಗಿರು. ನಿನ್ನ ಸತ್ಕರ್ಮವೆಂಬ ಕಾಮಧೇನುವು ಪುಣ್ಯದಿಂದ ಕರೆಯುವ ಧರ್ಮಾಮೃತವನ್ನು ತೃಪ್ತಿಯಾಗುವವಲಗೆ ಸೇವಿಸು. ನೀನಾಗ ಅಜರಾಮರನಾಗುತ್ತೀಯ. ಮುಕ್ತಿವನಿತೆಯನ್ನು ಆದಷ್ಟೂ ಬೇಗ ಸೇರಬೇಕೆಂದು ಬಯಕೆ ಇದ್ದರೆ ಜಿನಮಾರ್ಗದಲ್ಲಿ ನಡೆದು ಹಗಲಿರುಳೂ ಅದನ್ನೇ ಧ್ಯಾನಿಸು (ಸ.ಪ. ೧೫-೧೦೪, ೧೦೫).

೩. ಜೀವ (ಆತ್ಮ)ನು ಪಾಪವಶದಿಂದ ವಿವಿಧ ಜನ್ಮಗಳಲ್ಲಿ ಸುತ್ತುತ್ತಾನೆ - ಎಂಬ ನಂಬಿಕೆ ಬಹುತೇಕ ಭಾರತೀಯರಲ್ಲಿರುವಂತೆ ಜೈನರಲ್ಲಿಯೂ ಇದೆ-

> ಕಡುಸುಖಿಯಾಗಿಯುಮೊರ್ಮೆಯೆ
> ಕಡುದುಃಖಿಯುಮಾಗಿ ವೀರನಾಗಿಯುಂ ಮತ್ತಂ
> ಕಡುಪಂದೆಯಾಗಿಯುಂ ಬಿಡ
> ದೂಡನಘವಶದಿನಿಂತು ಸುಳಿವಂ ಜೀವಂ।। (ಧ ೩.೬೨)

೪. ಮುಂಜಾನೆಯ ಕಾಲದಲ್ಲಿ ಜೈನತತ್ವಗಳನ್ನು ಕೇಳಿದರೆ ಒಳ್ಳೆಯ ಬುದ್ಧಿ, ಸದ್ಗತಿ, ಪ್ರಭುತ್ವ, ಸೌಖ್ಯ, ಶಾಂತಿಗಳು ಒದಗಿಬರುತ್ತವೆ ಎಂಬುದೂ ಸಹ ಜೈನರ ನಂಬಿಕೆಗಳಲ್ಲೊಂದು:

ಶುಭಮತಿಯುಂ ಸದ್ಗತಿಯುಂ
ಪ್ರಭುತ್ವಮುಂ ಸರಳಸೌಖ್ಯಮುಂ ಶಾಂತಿಯುಮ
ತ್ಕಭಿನವಮೆನೆ ಸಮನಿಸುಗುಂ
ಪ್ರಭಾತದೊಳ್ ಜೈನಧರ್ಮಮಂ ಕೇಳಲೊಡಂ॥ (ಸ.ಪ. ೧೫-೧೧೧)

ಈ ನಂಬಿಕೆಯಿಂದಾಗಿಯೇ - ಜೈನರು ಬೆಳಿಗ್ಗೆ ಎದ್ದೊಡನೆ ಆತ್ಮನ ಧ್ಯಾನ ಮಾಡುತ್ತಾ ದೇವರಿಗೆ ನಮಸ್ಕರಿಸಿ, ಆ ದಿನವನ್ನು ಶುಭಕರ್ಯ, ಶುಭ ಚಿಂತನೆಗಳಲ್ಲಿ ಕಳೆಯುತ್ತೇನೆಂದು ಸಂಕಲ್ಪ ಮಾಡಬೇಕೆಂಬ ಆಚರಣೆ ರೂಢಿಯಲ್ಲಿ ಬಂದಿದೆ. ಭಾರತದ ಇತರ ಆಸ್ತಿಕ ಧರ್ಮಗಳಲ್ಲೂ ಇರುವ ನಂಬಿಕೆ ಇದು.

೫. ವಿವಿಧ ರೀತಿಯ ಶಿಕ್ಷೆಗಳನ್ನು ನರಕದಲ್ಲಿ ಕೊಡುತ್ತಾರೆಂಬ ನಂಬಿಕೆ ಜೈನರಲ್ಲೂ ಇದೆ. ಇದನ್ನು ವರ್ಣಿಸುತ್ತಾ ಧರ್ಮಾಮೃತದಲ್ಲಿ ಒಂದು ಕಡೆ - "ಕಿರಿಕಿರಿದಾಗಿರೆ ಮೈಯ್ಯಂ ಕೊರೆಕೊರೆದುಂ ಪುಳ್ಗಿಯಟ್ಟಿ ಕದಪಂ ಕೈಯಿಂದಿರಿದಿರಿದು......" ಎಂದು ಮುಂತಾಗಿ ಹೇಳಲಾಗಿದೆ (೩.೬೬-೮೩).

೬. ಮಹಾಪುರುಷರ ಸನ್ನಿಧಿಯಲ್ಲಿ ಜೀವಿಗಳು ಜಾತಿವೈರವನ್ನು ಬಿಟ್ಟು ಸ್ನೇಹದಿಂದಿರುತ್ತವೆ ಎಂಬುದು ಜೈನರಲ್ಲಿನ ಒಂದು ವಿಶಿಷ್ಟ ನಂಬಿಕೆ. ಯಾವುದೇ ತೇಜಸ್ವೀ ಮುನಿಯ ಕಥೆಯಲ್ಲಿ ಈ ಅಂಶ ಹೇಳಲ್ಪಟ್ಟಿರುವುದನ್ನು ಕಾಣಬಹುದು. ಅಷ್ಟೇಕೆ, ಶುದ್ಧ ಸಮ್ಯಕ್ ಚಾರಿತ್ರ್ಯವುಳ್ಳ ಶ್ರಾವಕರ ಪರಿಸರದಲ್ಲೂ ಹೀಗೇ ಆಗುತ್ತದೆಂಬ ನಂಬಿಕೆ ಜೈನರದ್ದು. ಧರ್ಮಾಮೃತದ ಮೂರನೇ ಆಶ್ವಾಸದಲ್ಲಿ ಬರುವ ಅನಂತಮತಿಯ ಕತೆಯಲ್ಲಿ ಆಕೆ ಜಿನಧ್ಯಾನಾಸಕ್ತಳಾಗಿ ಇರುತ್ತಿದ್ದ ಕಾಡಿನ ಎಡೆಯಲ್ಲಿ - 'ಪಗೆ ಕೆಳೆಯಿಲ್ಲದೆಲ್ಲಾ ಮೃಗಂಗಳಂ ಮಿತ್ರತ್ವದೊಳ್' ಇದ್ದವೆಂಬ ಮಾತು ಬರುತ್ತದೆ. ಅನೇಕ ಜೈನ ಬಸದಿಗಳಲ್ಲಿ ಹಸು-ಹುಲಿ ಒಂದೇ ಕಡೆ ನೀರು ಕುಡಿಯುತ್ತಿರುವ ಚಿತ್ರ ಕಾಣುತ್ತದೆ. ಅದು ಈ ನಂಬಿಕೆಯ ಪ್ರತೀಕ.

೭. ತಪಸ್ಸು ಮಾಡಿ ಸಮಾಧಿವಿಧಿಯಿಂದ ಸತ್ತವರು ತಮ್ಮ ಆಚರಣೆಯ ವಿಧಿಗನುಗುಣವಾಗಿ ವಿವಿಧ ವರ್ಗದ ದೇವತೆಗಳಾಗಿ ಹುಟ್ಟುತ್ತಾರೆ - ಎಂಬುದು ಜೈನರಲ್ಲಿನ ಇನ್ನೊಂದು ನಂಬಿಕೆ. ಬಾಲ್ಯದಿಂದಲೂ ಬ್ರಹ್ಮಚರ್ಯ ಪಾಲಿಸಿಕೊಂಡು ಜೈನಿಕ ನಿಷ್ಠೆಯಿಂದ ಬಾಳಿ ತಪಸ್ವಿನಿಯಾದ ಅನಂತಮತಿ ಹೀಗೆ ಮಾಡಿ 'ಪನ್ನೆರಡನೆಯ ಸಹಸ್ರಾರ ಕಲ್ಪದೊಳ್ ಪದಿನೆಂಟು ಸಾಗರೋಪಮಾಯುಷ್ಯಕ್ಕೊಡೆಯಂ' ಆದ ಸುಕಾಂತನೆಂಬ ಮಹತ್ತರ ದೇವನಾಗಿ ಹುಟ್ಟಿದಳಂತೆ (ಧ. ೩-೨೪೨). ಇಂಥ ಅನೇಕ ಉಲ್ಲೇಖಗಳು ಜೈನ ಸಾಹಿತ್ಯದಲ್ಲಿ ದೊರೆಯುತ್ತವೆ. ಈ ಕಾರಣದಿಂದಲೇ ಸಾಯುವ ಸಮಯದಲ್ಲಿ ಸಮಾಧಿ ಮರಣ ತಮಗೆ ದೊರೆಯಲಿ ಎಂದು ಜೈನ ಶ್ರಾವಕರೂ ಸಹ ಪ್ರಾರ್ಥಿಸುತ್ತಾರೆ.

೮. ಪುಣ್ಯ ಚೆನ್ನಾಗಿದ್ದರೆ ಸಿರಿ ತಾನೇ ಬರುತ್ತದೆ ಎಂಬುದೂ ಸಹ ಉಳಿದ ಭಾರತೀಯರಂತ ಜೈನರೂ ಹೊಂದಿರುವ ನಂಬಿಕೆಗಳಲ್ಲೊಂದು. ಇದನ್ನೊಂದು ಸೊಗಸಾದ ಉಪಮೆಯೊಡನೆ ನಯಸೇನ ಹೇಳುತ್ತಾನೆ-

> ಮಳೆಯುಳ್ಳೊಡೆ ಕೆರೆತೊರೆಗ
> ಳ್ಪೆಳಾಸದಿಂ ತೀವಿ ಕೋಡಿವರಿವಂತವನೀ
> ತಳದೊಳ್ ಪುಣ್ಯಂ ತನಗ
> ಗ್ಗಳಮುಳ್ಳೊಡೆ ತನಗೆ ತಾನೆ ಬಾರದೆ ಸಿರಿಯುಂ (ಧ ೪-೪೯)

೯. ಪೂರ್ವಭವದಲ್ಲಿ ಜಿನಪೂಜೆ, ದಾನ, ವ್ರತ ತಪಗಳಿಂದ ಪುಣ್ಯಸಂಪಾದನೆ ಮಾಡದಿದ್ದರೆ ಈ ಜನ್ಮದಲ್ಲಿ ಸಿರಿಸುಖ, ಆಯುಷ್ಯಗಳನ್ನು ಮಂತ್ರತಂತ್ರ ವೈದ್ಯಗಳಿಂದ ಪಡೆಯಲಾಗದು ಎನ್ನುವುದು ಜೈನರ ವಿಶ್ವಾಸ. ಹಾಗೆ ಬಯಸುವುದು -ಕಾವಿಲ್ಲದೆ ಕೊಡೆವಿಡಿದಂತೆ, ಮಡಿಕೆಯಿಲ್ಲದಡುವಂತೆ, ನಾಡುವಿಡಿಯದರಸುಗೆಯ್ವಂತೆ ಆಗುತ್ತದೆ (ಧ ೪-೫೦). ಈ ನಂಬಿಕೆ ಜೈನರ ದೈನಂದಿನ ಕ್ರಿಯೆಗಳನ್ನು ನಿರ್ದಿಷ್ಟ ರೀತಿಯಲ್ಲಿ ಸಾಗಿಸಿಕೊಂಡು ಹೋಗುವಂತೆ ಮಾಡಿದೆ. ದೇವಪೂಜೆ, ಗುರುಗಳ ಸೇವೆ, ಸ್ವಾಧ್ಯಾಯ, ಸಂಯಮ, ತಪ (ಧ್ಯಾನ) - ಇವು ಜೈನರ ದೈನಿಕ ಷಟ್ಕರ್ಮಗಳು. ಇವು ಬಹುತೇಕ ಜೈನರ ನಿತ್ಯಕರ್ಮಗಳಾಗಿರುವುದಕ್ಕೆ ಕಾರಣ - ಮೇಲಿನ ಈ ನಂಬಿಕೆ.

೧೦. ಗುರುಗಳ ಬಳಿ ವ್ರತವನ್ನು ಸ್ವೀಕರಿಸುವುದು ಜೈನರ ಒಂದು ಸದಾಚಾರವಾಗಿ ಈಗಲೂ ಬಳಕೆಯಲ್ಲಿದೆ. ಗುರುಗಳಿಂದ ಪ್ರವಚನ ಕೇಳಿದ ಬಳಿಕ ಯಾವುದಾದರೊಂದು ಸಾಮಾನ್ಯ ವ್ರತವನ್ನು ನಿರ್ದಿಷ್ಟ ಅವಧಿಯವರೆಗೆ ಅಥವಾ ಅಜೀವ ಪರ್ಯಂತಕ್ಕೆಂದು ತೆಗೆದುಕೊಳ್ಳುವುದು ಜೈನರಲ್ಲಿ ರೂಢಿ. ಉದಾ.ಗೆ - ವಾರದಲ್ಲಿ ಒಂದು ನಿರ್ದಿಷ್ಟ ದಿನರಂದು ಇಂಥ ಹಣ್ಣು ತಿನ್ನುವುದಿಲ್ಲ, ರೇಷ್ಮೆ ಬಟ್ಟೆ ತೊಡುವುದಿಲ್ಲ, ಇಂಥಿಂಥ ದಿನಗಳಲ್ಲಿ ಈರುಳ್ಳಿ, ಬೆಳ್ಳುಳ್ಳಿಗಳನ್ನು ತಿನ್ನುವುದಿಲ್ಲ - ಇಂಥ ವ್ರತಗಳನ್ನು ತೆಗೆದುಕೊಳ್ಳುತ್ತಾರೆ. ಇದು ಹಿಂದಿನಿಂದಲೂ ಬಂದಿರುವ ಒಂದು ಆಚಾರ. ಧರ್ಮಾಮೃತದ ಮೂರನೇ ಆಶ್ವಾಸದಲ್ಲಿ ಪ್ರಿಯದತ್ತ ಸೆಟ್ಟಿಯು ತನ್ನ ಮಗಳಾದ ಅನಂತಮತಿಯೊಂದಿಗೆ ವರದತ್ತ ಭಟ್ಟಾರಕರ ಬಳಿ ಹೋಗಿ ತಮಾಷೆಯಾಗಿ ಮಾತಾಡುತ್ತಾ - 'ಇವಳಿಗೆ ವ್ರತ ಕೊಡಿರಿ' ಎನ್ನುವುದು, ಅವರೂ ಸಹ ತಮಾಷೆಗಾಗಿಯೇ- "ನಿನಗಿಂದು ಮೊದಲಾಗೆ ಬ್ರಹ್ಮಚರ್ಯ ವ್ರತಮಂ ಕೊಟ್ಟೆವು" ಎನ್ನುವುದೂ ಬರುತ್ತದೆ.

ಇನ್ನೊಂದು ಉದಾಹರಣೆ - ಪುಣ್ಯಾಸ್ರವ ಹಾಗೂ ವಡ್ಡಾರಾಧನೆಯಲ್ಲಿ ಬರುವ ಪ್ರಸಿದ್ಧ ನಾಗಶ್ರೀಯ ಕತೆಯಲ್ಲಿ ಆಕೆ ಜೈನಗುರುಗಳಿಂದ ಪಂಚಾಣುವ್ರತಗಳನ್ನು ಸ್ವೀಕರಿಸುವ ವಿಷಯ. ಧರ್ಮಾಮೃತದಲ್ಲಿಯೇ ಇನ್ನೊಂದೆಡೆ - ಮೃಗಸೇನನೆಂಬ ಬೆಸ್ತನು ಜೈನ ಗುರುಗಳಿಂದ - ತನಗೆ ಸಿಗುವ ಮೊದಲ ಮೀನನ್ನು ಕೊಲ್ಲದೆ ಹಾಗೇ ಬಿಡುವ ವ್ರತವನ್ನು ಸ್ವೀಕರಿಸುವ, ಅದರ ಪಾಲನೆಯ ಫಲವಾಗಿ ಆತ ಮರುಭವದಲ್ಲಿ ದೇವನಾಗಿ ಹುಟ್ಟುವ ವಿವರ ಬರುತ್ತದೆ.

- ಇಂಥ ಅನೇಕ ಉದಾಹರಣೆಗಳು ಜೈನ ಕಾವ್ಯಗಳಲ್ಲಿ ದೊರೆಯುತ್ತವೆ.

ಜೈನೇತರರೂ ಜೈನಗುರುಗಳಿಂದ ಹೀಗೆ ವ್ರತ ಸ್ವೀಕರಿಸಿದರೆಂಬ ಉಲ್ಲೇಖಗಳು ಅವಾಸ್ತವವೇನೂ ಅಲ್ಲ. ಈಗಲೂ ಇಂಥವು ನಡೆಯುತ್ತಲಿವೆ. ಒಂದು ಧರ್ಮದ ಅನುಯಾಯಿಗಳು ಮತ್ತೊಂದು ಧರ್ಮದ ದೇವರಿಗೆ, ಗುರುಗಳಿಗೆ ನಮಸ್ಕರಿಸುವ, ಅವರು ಹೇಳಿದ ಏನಾದರೂ ಕೆಲಸವನ್ನು ನಡೆಸಿಕೊಡುವ ಪರಂಪರೆ ನಮ್ಮಲ್ಲಿ ಅತ್ರುಟಿತವಾಗಿ ನಡೆದುಕೊಂಡು ಬಂದಿದೆ. ಹದಿನಾರನೇ

ಶತಮಾನದಲ್ಲಿ ಕಾರ್ಕಳದ ಭೈರವರಸನು ಜಿನ ಮಂದಿರವೆಂದು ಕಟ್ಟಿಸಿದ ದೇಗುಲವನ್ನು ಅದು ಮುಗಿಯುವ ಹಂತದಲ್ಲಿದ್ದಾಗ, ಬ್ರಾಹ್ಮಣರ ಕೋರಿಕೆಯಂತೆ ಅವರಿಗೆ ಬಿಟ್ಟುಕೊಟ್ಟು ಈಗ ಅದು ಪ್ರಸಿದ್ಧ ವೆಂಕಟರಮಣ ದೇವಾಲಯವಾಗಿಲ್ಲವೆ? ಸಾಮಾನ್ಯರ ಬದುಕಿನಲ್ಲಿ ಧರ್ಮಸಹಿಷ್ಣುತೆ, ಸಮತಾಭಾವ ಸಹಜ ಅಂಶಗಳು. ವೈಷಮ್ಯಗಳೇನಿದ್ದರೂ ರಾಜಕಾರಣದ ಕೊಡುಗೆ.

೧೧. ಜೈನ ತಪಸ್ವಿಗಳನ್ನು ನಿಂದಿಸುವವರು ಸಾಕಷ್ಟು ಸಂಖ್ಯೆಯಲ್ಲಿದ್ದರು. ಇಂಥವರು ಪಾಪವನ್ನು ಗಳಿಸಿ ನರಕಕ್ಕೆ ಹೋಗುತ್ತಾರೆಂದು ಜೈನರು ನಂಬಿದ್ದರು- "ಪೊದೆದಾತನರಿಯದಂತೆ ಪೊದೆದ ಮಡಿ ಬಳಿಯಂ ಧೂಳಿಯೊಳ್ ಮಾಸಿಯಗಸನ ಬಾರಿಯೊಳ್ಬಿರ್ದು ನಿಗ್ರಹಕ್ಕೊಳಗಪ್ಪಂತೆ ಚಪಳರ್ ಜಿನತಪಸ್ವಿಗಳಂ ಜಿನತತ್ವಮನಿಂತುಟಂತುಟೆಂದು ಬಾಯ್ಗೆ ವಂದಂತಣಕಚಣಕಂಗೆಡೆದು ನಗೆನಗೆಯೊಳ್ ಪಾಪಮಂ ಪೊರ್ದು ನಾರಕಬಾಧೆಗೊಳಗಾಗಿ ಪಲಕಾಲಂ ದುಃಖಂಬಡುವರೆ (ಧ. ೪-೩೮).

೧೨. ಶುಭಧ್ಯಾನದಿಂದ ಸತ್ತರೆ ದೇವರಾಗುತ್ತಾರೆ (ಪುಣ್ಯಾಸ್ರವ ೨-೧೬ ವಚನ) ಎಂದೂ, ಅಶುಭಧ್ಯಾನದಿಂದ ಸತ್ತರೆ ತಿರ್ಯಕ್‌ಗತಿಯಲ್ಲಿ ಹುಟ್ಟುತ್ತಾರೆ (ಪು. ೨-೧೬ವ) ಎಂದೂ ಜೈನರ ನಂಬಿಕೆ. ಇದೇ ರೀತಿ, ಅಣುವ್ರತಗಳನ್ನು ಪಾಲಿಸಿ ಮುಡಿಪಿದರೆ ಸ್ವರ್ಗದಲ್ಲಿ ದೇವನಾಗಿ ಹುಟ್ಟುತ್ತಾರೆ ಎಂದೂ ಜೈನರಲ್ಲಿ ನಂಬಿಕೆ ಇದೆ (ಪುಣ್ಯಾ: ಪುಟ-೪೫-ವಚನ). ಜೈನರ ನಡವಳಿಕೆಗಳನ್ನು ಈ ನಂಬಿಕೆ ತುಂಬ ಪ್ರಭಾವಿಸಿರುವುದು ಈಗಲೂ ಸಾಮಾನ್ಯ ಜೈನರ ಬದುಕನ್ನು ಅವಲೋಕಿಸಿದರೆ ಗಮನಕ್ಕೆ ಬರುತ್ತದೆ.

೧೩. ಕನಸಿನಲ್ಲಿ ಸೂರ್ಯನನ್ನು ಕಂಡರೆ ಪ್ರತಾಪಶಾಲಿಯಾದ ಮಗ ಹುಟ್ಟುತ್ತಾನೆ ಎಂದು ಒಂದು ನಂಬಿಕೆ. ಕರಕಂಡು ಮಹಾರಾಜನ ಕಥೆಯಲ್ಲಿ ರಾಣಿ ಪದ್ಮಾವತಿಯು ದಂತಿ ಮಹಾರಾಜನಿಗೆ ತನಗೆ ಅಂಥ ಕನಸು ಬಿದ್ದದ್ದನ್ನು ಹೇಳುವುದೂ ಅದಕ್ಕೆ ಅವರು ಈ ಫಲ ಹೇಳುವುದೂ ಬರುತ್ತದೆ (ಪುಣ್ಯಾ ೨-೩೬). ಇದು ಜಾನಪದ ನಂಬಿಕೆ ಎನ್ನುವುದಕ್ಕಿಂಥ ಸ್ವಪ್ನಶಾಸ್ತ್ರ ಬಲ್ಲ ಜ್ಯೋತಿಷ್ಯರು ಹೇಳುವುದರಿಂದ ಜಾನಪದಕ್ಕೆ ದಾಟಿ ಬರುವ ನಂಬಿಕೆ ಎಂದು

ಭಾವಿಸಬಹುದು. ರಸಜ್ವಲೆಯಾಗಿ ಚತುರ್ಥಸ್ನಾನವಾದ ದಿನ ಮಲಗಿದ್ದಾಗ ಮರು ಬೆಳಗಿನ ಜಾವದಲ್ಲಿ ಬೀಳುವ ಕನಸಿನಲ್ಲಿ ಸಂತಾನದ ಸೂಚನೆ ಕಾಣುತ್ತದೆ (ಪುಣ್ಯಾ: ದ್ವಿತೀಯಾಧಿಕಾರ) ಎಂಬ ನಂಬಿಕೆಯೂ ಇಂಥದೇ ಮೂಲದ್ದು.

೧೪. ಗರ್ಭವತಿಗೆ ಮೂಡುವ ಬಯಕೆಗಳು ಹುಟ್ಟುವ ಮಗುವಿನ ಸ್ವಭಾವವನ್ನೂ ಆ ಮಗುವಿನಿಂದಾಗುವ ಕಾರ್ಯವನ್ನೂ ಸೂಚಿಸುತ್ತವೆಂದು ಇವರು ನಂಬಿದ್ದರು. ಅಭಯಕುಮಾರ ಹುಟ್ಟುವಾಗ ಅವನ ತಾಯಿ ಪದ್ಮಾವತಿಗೆ ಏಳುದಿನಗಳ ಕಾಲ ರಾಜ್ಯದಲ್ಲಿ ಅಭಯ ಘೋಷಣೆ ಮಾಡಿಸುವ ಬಯಕೆಯುಂಟಾಗುತ್ತದೆ (ಪುಣ್ಯ: ದ್ವಿತೀಯಾಧಿಕಾರ). ಆದರೆ ಕುಳಿಕ ಹುಟ್ಟುವಾಗ ಚೇಳಿನಿಗೆ ಗಂಡನ ಎದೆಯ ರಕ್ತವನ್ನೇ ಕುಡಿಯುವ ಬಯಕೆ ಉಂಟಾಗುತ್ತದೆ (ಪುಣ್ಯಾ: ತೃತೀಯಾಧಿಕಾರ. ಪು. ೧೧೨-೩). ಈ ಕುಳಿಕ ಮುಂದೆ ತಂದೆಯನ್ನು ಸೆರೆಯಲ್ಲಿಡುತ್ತಾನೆ.

ಈಗ ಗರ್ಭಿಣಿಯ ಬಯಕೆಗಳ ಬಗ್ಗೆ ಈ ತೆರದ ನಂಬಿಕೆ ಜೈನರಲ್ಲಿ ಅಷ್ಟಾಗಿ ಇದ್ದಂತಿಲ್ಲ.

೧೫. ಸಾಯುವ ಸ್ಥಿತಿಯಲ್ಲಿರುವ ಜೀವಿಗೆ ಪಂಚನಮಸ್ಕಾರವನ್ನು ಉಪದೇಶಿಸಿದರೆ ಅದಕ್ಕೆ ಸದ್ಗತಿ ದೊರೆಯುವುದೆಂಬ ನಂಬಿಕೆ ಎಂದಿನಿಂದಲೂ ಜೈನರಲ್ಲಿದೆ. ಈ ಕಾರಣದಿಂದಲೇ ಅಂಥ ಸ್ಥಿತಿಯಲ್ಲಿರುವ ಜೀವಿಯ ಬಳಿ ಕುಳಿತು ಪಂಚನಮಸ್ಕಾರ ಮಂತ್ರವನ್ನು ಉಚ್ಚರಿಸುತ್ತಾರೆ. ಈ ತೆರನ ನಡವಳಿಕೆ ಜೈನ ಕಾವ್ಯಗಳಲ್ಲೂ ದಾಖಲಾಗಿದೆ. ಪುಣ್ಯಾಸ್ರವದ ಚತುರ್ಥಾಧಿಕಾರದ ಸುಗ್ರೀವನ ಕತೆ ಇದಕ್ಕೊಂದು ಉದಾಹರಣೆ (ಪುಟ ೧೨೧). ಪದ್ಮರುಚಿ ಎಂಬುವನು ಸಾಯುತ್ತಿದ್ದ ಗೂಳಿಯೊಂದಕ್ಕೆ ಪಂಚನಮಸ್ಕಾರ ಮಂತ್ರವನ್ನು ಹೇಳಿದ, ಅನಂತರ ಅದು ಸತ್ತು ವೃಷಭಧ್ವಜನೆಂಬ ರಾಜಕುಮಾರನಾಗಿ ಹುಟ್ಟಿದ ಸಂಗತಿ ಅದು. ಚತುರ್ಥಾಧಿಕಾರದ ತುಂಬ ಇಂಥ ಕಥೆಗಳೇ ಇವೆ. ಸುಲೋಚನೆ ಎಂಬುವಳ ಗೆಳತಿಯಾದ ವಿಂಧ್ಯಶ್ರೀ ಎಂಬ ಹುಡುಗಿಯು ಒಂದು ದಿನ "ಪೂಗೊಯ್ಯಲ್ವೋಪವಲ್ಲಿಯಾದ ಸರ್ಪಂ ಪಿಡಿಯೆ ಸುಲೋಚನೆ

ಕೇಳ್ದು ಪರಿತಂದು ಪಂಚಪದಂಗಳಂ ಪೇಳ್ದಳೆಂಬ ಉಲ್ಲೇಖ ಇದಕ್ಕೆ ಇನ್ನೊಂದು ಉದಾಹರಣೆ (ಪುಟ ೧೨೪). ಅದೇ ರೀತಿ ಚಾರುದತ್ತನು ಸಾಯುತ್ತಿದ್ದ ಆಡೊಂದಕ್ಕೆ ಪಂಚನಮಸ್ಕಾರ ಮಂತ್ರವನ್ನು ಉಪದೇಶಿಸಲು ಅದು ಸತ್ತು ದೇವಗತಿಯನ್ನು ಹೊಂದುತ್ತದೆ (ಪುಣ್ಯಾ: ೪-೧೦).

ಕಥೆಯ ಈ ಅಂಶಗಳಿಗೆಲ್ಲ ಆಧಾರ- ಮರಣೋನ್ಮುಖಿ ಸ್ಥಿತಿಯಲ್ಲಿರುವ ಜೀವಿಯ ಪರಗತಿಯನ್ನು ಪಂಚನಮಸ್ಕಾರ ಶ್ರವಣ ಬದಲಿಸಬಲ್ಲುದು ಎಂಬ ನಂಬಿಕೆ. ಈ ಮಂತ್ರ ಜಪದಿಂದ ಸತ್ತ ಹೆಣ್ಣಾನೆ ಸೀತೆಯಾಗಿ ಹುಟ್ಟಿದ, ಧೃಡಸೂರ್ಪನೆಂಬ ಕಳ್ಳ ಶೂಲದ ಮೇಲಿದ್ದು ಈ ಮಂತ್ರ ಜಪಿಸಿ ಸೌಧರ್ಮ ಕಲ್ಪದಲ್ಲಿ ಜನಿಸಿದ ಕತೆಗಳೂ ಪುಣ್ಯಾಸ್ರವದಲ್ಲೇ ಬರುತ್ತವೆ.

೧೬. ಮುನಿಗಳನ್ನು ನಿಂದಿಸಿದರೆ ಕೆಡುಕಾಗುತ್ತಾದೆ ಎಂಬುದು ಜೈನರಲ್ಲಿನ ಇನ್ನೊಂದು ನಂಬಿಕೆ. ಸುಮ್ಮನೆ ನಿಂದಿಸುವುದಿರಲಿ, ಅವರಿಂದ ಒಮ್ಮೆ ತಪ್ಪಾದರೂ ಸಹ ಅದನ್ನು ಸಮಾಜದೆದುರು ಹೇಳಬಾರದು ಎಂಬುದು ಜೈನರಿಗೆ ವಿಧಿಸಿರುವ ಆಚಾರಗಳಲ್ಲಿ ಒಂದು (ಇದನ್ನು'ಉಪಗೂಹನಾಂಗ' ಎನ್ನಲಾಗುತ್ತದೆ). ವೇದವತಿ ಎಂಬ ಹುಡುಗಿಯು "ಒಂದು ದಿವಸಂ ಚರಿಗೆಗೆ ಬರ್ಪ ಮುನಿಗಳಂ ಕಂಡು ನಿಂದಿಸಲವರ ತಾಯಿತಂದೆಗಳ್ ಬಂದು ನಿವಾರಿಸೆ ಕೆಲವು ದಿವಸಕ್ಕಾಕೆಯ ಗಂಟಲೊಳು ಗ್ರಂಥಿಪುಟ್ಟಿರೆ ಕಂಡವರೆಲ್ಲಂ ಮುನಿಗಳ ನಿಂದಿಸಿದ ಫಲಮನುಂಡಳೆನುತ್ತಿ"....... (ಪುಣ್ಯಾ: ಪು. ೧೪೯)ದ್ದರೆಂಬ ಮಾತು ಬರುತ್ತದೆ. ಇದರಲ್ಲೇ ಮುಂದೆ ಜ್ವಾಳಿ ಎಂಬುವಳಿಗೆ ಇದೇ ಕಾರಣಕ್ಕೆ ತಿರ್ಯಕ್ ಜನ್ಮ ಪ್ರಾಪ್ತಿಯಾದುದರ ಉಲ್ಲೇಖವೂ ಬರುತ್ತದೆ.

೧೭. ಅಣುವ್ರತಗಳನ್ನು ಸರಿಯಾಗಿ ಪಾಲಿಸಿದರೆ ವ್ಯಾಧಿನಾಶ- ಎಂಬ ನಂಬಿಕೆ ಜೈನರದ್ದು. (ಪಂಚ ನಮಸ್ಕಾರ ಮಂತ್ರದ ಜಪದ ಬಗ್ಗೆಯೂ ಇದೇ ನಂಬಿಕೆ ಇದೆ.) ಮೇಲೆ ಉಲ್ಲೇಖಿಸಿರುವ ವೇದವತಿಯ ಕತೆಯಲ್ಲೇ, ಮುಂದೆ ಆಕೆ ಅಣುವ್ರತ ಪಾಲಿಸಿದಾಗ ಕೊರಳವ್ಯಾಧಿ ಗುಣವಾಗುತ್ತದೆ.

೧೮. ಪಂಚನಮಸ್ಕಾರ ಮಂತ್ರವನ್ನು ಏಕಚಿತ್ತದಿಂದ ಧ್ಯಾನಿಸುತ್ತಿದ್ದರೆ ಎಲ್ಲ ವಿಪತ್ತುಗಳೂ ದೂರಾಗುತ್ತವೆ ಎಂಬುದು ಇಂದಿಗೂ ಜೈನರ ನಂಬಿಕೆ. ಧರ್ಮಾಮೃತದ ನಾಲ್ಕನೇ ಆಶ್ವಾಸದಲ್ಲಿ ಬರುವ ಶೀಲವತಿಯ ಕತೆ

ಇದಕ್ಕೊಂದು ಉದಾಹರಣೆ. ಈಗಲೂ ಈ ನಂಬಿಕೆಯಲ್ಲಿ ನಡೆದು ತಮಗೆ ಲೌಕಿಕ ಪ್ರಯೋಜನವೂ ದೊರೆಯಿತೆಂದು ಸಾರುವ ಅನೇಕರ ಅನುಭವಗಳನ್ನು ನಾವು ಕೇಳಬಹುದು. (ನೋಡಿ-ಜಿ.ಬ್ರಹ್ಮಪ್ಪ, ಮಂತ್ರರಾಜ ಣಮೋಕಾರ, ಪ್ರ: ರತ್ನತ್ರಯ ಪ್ರಕಾಶನ, ಚಿತ್ತಭಾನು ರಸ್ತೆ, ಕುವೆಂಪು ನಗರ, ಮೈಸೂರು, ೧೯೭೭).

೧೯. ಬಸದಿಯನ್ನು ಪ್ರವೇಶಿಸುವ ಮೊದಲು ಅದನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿ ಅನಂತರ ಒಳಗೆ ಪ್ರವೇಶಿಸುವುದು ಜೈನರಲ್ಲಿನ ಪದ್ಧತಿ (ಈಗ ಎಷ್ಟೋ ಮಂದಿ ಅವಸರದಲ್ಲಿ ಹೀಗೆ ಮಾಡುವುದಿಲ್ಲ ಎಂಬುದು ಬೇರೆ ಮಾತು). ಚಿತ್ರವಾಹನನೆಂಬ ದೊರೆ ಹೀಗೆ ಬಸದಿಯನ್ನು ಪ್ರವೇಶಿಸಿದನೆನ್ನುವ ಮಾತು ಧರ್ಮಾಮೃತದರಲ್ಲಿ ಬಂದು ಈ ಆಚರಣೆಗೆ ಸಾಕ್ಷಿಯಾಗುತ್ತದೆ-

'ಭಕ್ತಿಯ ಭರದಿಂ ಮೂರು ಸೂಳ್ ಬಲವಂದು ಜಿನಗೃಹಮಂ
ಒಳಪೊಕ್ಕು.............' (ಧ. ೫.೫೫)

೨೦. ವಿವಿಧ ಬಗೆಯ ಹೂಗಳನ್ನು ದೇವರಿಗರ್ಪಿಸಿ ಪೂಜಿಸುವ ಪದ್ಧತಿ ಜೈನರಲ್ಲೂ ಇದೆ -

ಇರುವಂತಿ ಜಾಜಿ ಪಾದರಿ
ಸರಸಿರುಹಂ ಸುರಗಿ ಮೊಲ್ಲೆ ಪೊಸ ಸಂಪಗೆಯಾ
ಅದಲಿಂ ಭಕ್ತಿಯಿನಾತಂ
ಪರಮ ಜಿನೇಶ್ವರನ ಪಾದಮಂ ಪೂಜಿಸಿದಂ

(ಧ. ೫.೫೭)

೨೧. ಜೈನಧರ್ಮವನ್ನು ತೊರೆದು ಶ್ರೀವೈಷ್ಣವ ಹಾಗೂ ವೀರಶೈವ ಧರ್ಮಗಳ ಕಡೆ ಹೋಗುವ ಜೈನರೂ ಆಗ ಇದ್ದರು. (ಈ ಕಥಾಸಾಹಿತ್ಯ ಕೃತಿಗಳ ರಚನೆಯ ಕಾಲವು ಅನ್ಯಧರ್ಮಗಳು ಪ್ರಚುರಗೊಳ್ಳುತ್ತಾ ಬರುತ್ತಿದ್ದ ಹಾಗೂ ಜೈನಧರ್ಮವು ರಾಜರ ಅವಕೃಪೆಗೆ ಪಾತ್ರವಾಗಿ ಆಕ್ರಾಂತಗೊಳ್ಳುತ್ತಿದ್ದ ಕಾಲವೆಂಬುದನ್ನು ನಾವು ನೆನಪಿಡಬೇಕು). ಈ ವರ್ತನೆಗಾಗಿ ಜೈನ ಕವಿಗಳು ವ್ಯಥೆಪಡುತ್ತಿದ್ದರು. 'ಸಮಯಪರೀಕ್ಷೆ'ಯಲ್ಲಿ ಬರುವ ಈ ಮಾತುಗಳು ಜೈನರು ಸ್ವಧರ್ಮವಿಮುಖರಾಗುತ್ತಿದ್ದರೆಂಬುದಕ್ಕೆ ಸಾಕ್ಷಿಯೊದಗಿಸುತ್ತವೆ -

"ನಿರ್ಮಲವಾದ ಜೈನಾಗಮಗಳಲ್ಲಿ ಸಂಪನ್ನನಾದವನು ಅನ್ಯಮತಗಳತ್ತ ಮನಸ್ಸುಕೊಟ್ಟರೆ ಚಿನ್ನದ ಬಾಣಗಳನ್ನು ನೀರಿನಲ್ಲಿ ಪ್ರಯೋಗಿಸಿ ಹಾಳು ಮಾಡಿಕೊಂಡಂತಾಗುತ್ತದೆ. ಸಾರಾಸಾರ ವಿಚಾರ ಮಾಡಬಲ್ಲವರೇ ಮಿಥ್ಯಾತ್ವದಿಂದ ನಡೆದರೆ ನೀರಿನಲ್ಲಿ ಕಿಚ್ಚು ಎದ್ದಂತಾಗುತ್ತದೆ. ತರುವಾಯ ಆ ಕಿಚ್ಚನ್ನು ಯಾವುದರಿಂದ ಆರಿಸಲಾದೀತು? (ಸ.ಪ. ೩-೩೫, ೩೬)

೨೨. ಎಷ್ಟೇ ನಿರ್ಗತಿರೆನಿಸಿದ್ದರೂ ಶ್ರಾವಕರು ಭಿಕ್ಷೆಬೇಡುತ್ತಿರಲಿಲ್ಲ. (ಈ ಮಾತು ಈಗಲೂ ನಿಜ). ಅಡ್ಡಬಿದ್ದು, ಪ್ರಾರ್ಥಿಸಿ ಗೌರವದಿಂದ ಕೊಟ್ಟಾಗ ಮಾತ್ರವೇ ಸ್ವೀಕರಿಸುತ್ತಿದ್ದರು (ಸ.ಪ. ೭.೧೩,೧೪).

೨೩. ಶ್ರಾವಕರು ಜಿನಮುನಿಗಳನ್ನು ಭಕ್ತಿಯಿಂದ ಉಪಚರಿಸುತ್ತಿದ್ದರು. ಮನೆಮಠಗಳಿಲ್ಲದ ಮುನಿಗಳಿಗೆ ಜಿನಭಕ್ತರೇ ತಂದೆತಾಯಿಗಳು ಎನ್ನುವಷ್ಟು ಶ್ರದ್ಧೆಯಿಂದ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು (ಸ.ಪ. ೭.೧೫). ಅವರ ಪಾದಪೂಜೆ ಮಾಡುತ್ತಿದ್ದರು. (ಸ.ಪ. ೫.೧೪೧)

೨೪. ಶ್ರಾವಕರು ಆಸಕ್ತಿಯಿಂದ ಜಿನಪುರಾಣ ಶ್ರವಣ ಮಾಡುತ್ತಿದ್ದರು. (ಸ.ಪ. ೬.೨೪)

೨೫. ಜೈನರು ತಮ್ಮ ಧರ್ಮಬಾಂಧವರನ್ನು ಪ್ರೀತಿಯಿಂದ ಕಾಣುತ್ತಾ ಅವರ ನೋವು ನಲಿವುಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಆದರೆ ಬೇರೆ ಮತದವರು ತಮ್ಮ ತಮ್ಮಲ್ಲಿ ಜಗಳಾಡುತ್ತಿದ್ದರು (ಸ.ಪ. ೪.೭೪-೭೭). (ಆದರೆ ಬ್ರಹ್ಮಶಿವನ ಈ ಹೇಳಿಕೆಯನ್ನು ಪೂರ್ತಿ ನಂಬುವಂತಿಲ್ಲ. ಅನ್ಯಧರ್ಮೀಯರು ತಮ್ಮಲ್ಲಿ ಯಾವಾಗಲೂ ಜಗಳಾಡುತ್ತಿದ್ದುದೇ ನಿಜವಾದರೆ ಜೈನಧರ್ಮ ಆಗಲೂ ಸಬಲವಾಗಿಯೇ ಇರುತ್ತಿತ್ತು. ಈಗ ಜೈನರಲ್ಲಿ ಆ ಬಗೆಯ ಪ್ರೀತಿ ಇದೆ ಎಂದೂ ಹೇಳುವಂತಿಲ್ಲ).

೨೬. ಸ್ಥಿತಿವಂತರನ್ನು ಮಾತ್ರವೇ ಗೌರವಿಸುತ್ತಾ ಬಡಜೈನರನ್ನು ಅನಾದರಿಸುವ ಜೈನರೂ ಇದ್ದರು. (ಸ.ಪ. ೪-೫೯).

೨೭. ಅನ್ಯಧರ್ಮದ ದೈವಗಳನ್ನು ಪೂಜಿಸುವ ಜೈನರೂ ಸಾಕಷ್ಟಿದ್ದರೆಂಬುದು ಸಮಯ ಪರೀಕ್ಷೆಯಲ್ಲಿನ ಉಲ್ಲೇಖದಿಂದ ತಿಳಿಯುತ್ತದೆ (೧೫.೬೩, ೪.೧೨೧, ೯.೮೫).

೨೮. ಜೈನಸ್ತ್ರೀಯರಲ್ಲಿ, ತಮಗೆ ಗಂಡು ಮಕ್ಕಳಾಗಬೇಕೆಂದು ತುಂಬ ಆಶಿಸುವ, ಹೆಣ್ಣುಮಕ್ಕಳಿಗಿಂತ ಇವರಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಬೆಳೆಸುವವರೂ ಇದ್ದರು. ಇಂಥವರನ್ನು ಬ್ರಹ್ಮಶಿವನು ಟೀಕಿಸಿದ್ದಾನೆ. ಇಂಥವರಿಂದ ಜಿನಧರ್ಮಕ್ಕೆ ಹಾನಿ ಎಂದಿದ್ದಾನೆ-

ಎನಿತವಗುಣಂಗಳೊಳವಂ
ತನಿತಕ್ಕಂ ನೋಳ್ಪಡಾವಗಂ ತಾಮೆ ತವ
ರ್ಮನೆಯೆನಿಪ ಪೆಂಡಿರಿಂದಂ
ಜಿನಧರ್ಮಂ ಬೆಳಗದಿನಿತನರಿವುದು ಜೈನಂ

(ಸ.ಪ. ೫-೧೧೫)

ಹೀಗೆ, ಜೈನರಲ್ಲಿ ಬೇರುಬಿಟ್ಟಿದ್ದ ಅನೇಕ ನಂಬಿಕೆಗಳು, ಅವುಗಳ ಫಲವಾಗಿಯೇ ರೂಪುಗೊಂಡಿದ್ದ ಅನೇಕ ನಡವಳಿಕೆಗಳು, ಜೈನ ಕಥಾ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗೊಂಡಿವೆ. ಇವುಗಳಲ್ಲಿ ಅನೇಕ ನಡವಳಿಕೆಗಳು ಇಂದೂ ಜೈನ ಜಾನಪದ ಬದುಕಿನ ಭಾಗವಾಗಿ ಉಳಿದುಕೊಂಡು ಬಂದಿವೆ.

೨. ಜೈನೇತರರ ನಂಬಿಕೆ ನಡವಳಿಕೆಗಳು

ಅನ್ಯ ಸಮಾಜದವರು ಧಾರ್ಮಿಕತೆಗೆ ಸಂಬಂಧಿಸಿದಂತೆ ಹೇಗೆ ನಡೆದುಕೊಳ್ಳುತ್ತಿದ್ದರು ಎಂಬುದರ ಬಗೆಗೂ ಅನೇಕ ಮಾಹಿತಿಗಳು ಸಮಯ ಪರೀಕ್ಷೆ, ಧರ್ಮಾಮೃತ, ಪುಣ್ಯಾಸ್ರವ - ಮೊದಲಾದ ಕೃತಿಗಳಲ್ಲಿ ದೊರೆಯುತ್ತವೆ. ಅನ್ಯರ ಜಾನಪದ ಬದುಕಿನ ಒಂದು ಮುಖ ಮಾತ್ರವಾಗಿವೆ ಅವು. ಅವರ ನಡವಳಿಕೆಗಳಿಗೆ ಈ ಕವಿಗಳ ಪ್ರತಿಕ್ರಿಯೆ ಸೂಚಿಸುತ್ತಾ ಹೇಳುವ ಮಾತುಗಳಲ್ಲಿ ಈ ವರ್ತನೆಗಳು ದಾಖಲಾಗಿವೆ. ಅಂಥ ಕೆಲವು ಅಂಶಗಳು ಹೀಗಿವೆ-

೧. ಜೈನಮುನಿಯ ದೇಹದಿಂದ ಬರುವ ದುರ್ಗಂಧವನ್ನು ಸಹಿಸಲಾರದೆ ಆಡಿಕೊಳ್ಳುವವರು ಸಾಕಷ್ಟಿದ್ದರು (ಧ. ೪-೯೫-೮).
೨. ಗೋವಿನ ದೇಹದಲ್ಲಿ ಮೂವತ್ತೂರು ದೇವತೆಗಳು, ಭೂಮಿ, ಪರ್ವತಗಳು, ಸೂರ್ಯ, ಚಂದ್ರ, ಅಗ್ನಿಗಳು, ನಾಲ್ಕು ವೇದಗಳು - ಮುಂತಾದ ಎಲ್ಲವೂ ಇದೆ ಎಂದು ಭಾವಿಸಿ ಅನ್ಯಧರ್ಮೀಯರು, ಗೋವಿನ ಸೇವೆ, ಪೂಜೆ ಮಾಡುತ್ತಿದ್ದರು (ಸ.ಪ. ೯-೬೦).

೩. ಗೋವಿನ ಮುಖ ಮಂಗಳಕರವಲ್ಲ, ಆದರೆ ಅದರ ಬಾಲದ ಭಾಗ ಮಾತ್ರ ಶುಭಕರ ಎಂಬ ನಂಬಿಕೆಯೂ ಇತ್ತು (ಸ.ಪ. ೯-೭೩).

೪. ಅರಳಿಮರದ ಎಲ್ಲ ಎಲೆಗಳೂ ವಿಷ್ಣುಪ್ರತಿಷ್ಠೆ ಎಂದು ನಂಬಿದ್ದರು. ಆ ಮರವನ್ನು ನೆಟ್ಟು ಬೆಳೆಸಿ ಪೂಜಿಸಿ ಸುತ್ತುಹಾಕಿ ನಮಸ್ಕರಿಸುತ್ತಿದ್ದರು. (ಸ.ಪ. ೯-೫೧, ೫೮)

೫. ಜನರಿಗೆ ಹಾವಿನ ವಿಷಯದಲ್ಲಿ ತುಂಬ ಭಯಭಕ್ತಿಗಳಿದ್ದವು. ತುರಿ ಎಂಬ ಚರ್ಮರೋಗವನ್ನು 'ಫಣಿ' ಎಂದು ನಾಗನ ಹೆಸರಿನಲ್ಲಿ ಕರೆಯುತ್ತಿದ್ದರು (ಸ.ಪ. ೯-೨೦). ಚರ್ಮರೋಗಗಳು (ತೊನ್ನು ಇತ್ಯಾದಿ) ನಾಗರಿಂದ ಉಂಟಾಗಿವೆ ಎಂದೇ ನಂಬಿ ಕಿವಿಯಲ್ಲಿ ನಾಗರ ಮುರಿಯನ್ನಿಟ್ಟುಕೊಂಡು ಹುತ್ತಗಳನ್ನು ಪೂಜಿಸುತ್ತಿದ್ದರು. ಹಾವನ್ನು ಕೊಲ್ಲುವುದು ಪಾಪಕರ ಎಂದು ಭಾವಿಸಿದ್ದರು. ಯಾರಾದರೂ ನಾಗನನ್ನು ಕೊಂದ ಸುದ್ದಿ ಕೇಳಿದರೆ ಆ ಕೂಡಲೇ ಸ್ನಾನ ಮಾಡಿ ಸೂತಕ ಕಳೆದುಕೊಂಡೆವೆಂದು ಭಾವಿಸುತ್ತಿದ್ದರು (ಸ.ಪ. ೯-೭೭). ನಾಗರ ಪಂಚಮಿಯಲ್ಲಿ ಜೈನರೂ ನಾಗನನ್ನು ಪೂಜಿಸುತ್ತಿದ್ದರು (ಇದು ಈಗಲೂ ಇದೆ).

೬. ಆಯುಧಗಳು, ಮನೆಬಳಕೆಯ ಸಾಮಾನುಗಳು, ಒನಕೆ, ಬೀಸುವ ಕಲ್ಲು ಇತ್ಯಾದಿಗಳು, ಮಡಕೆ, ಹಳ್ಳ, ಭೂಮಿ, ಸಮುದ್ರ, ಗುಡ್ಡ - ಇತ್ಯಾದಿ ಅಚೇತನ ವಸ್ತುಗಳನ್ನು ಜನ ಪೂಜಿಸುತ್ತಿದ್ದರು (ಸ.ಪ. ೯-೮೨, ೮೩, ಧ. ೫-೨೪೦). ಈ ಟೀಕೆಯನ್ನು ಈ ವಿಡಂಬನಕಾರರು ಮಾಡಿದ್ದರೂ ಸಹ, ಎಲ್ಲ ವಸ್ತುಗಳ ಬಗೆಗಿನ ಕೃತಜ್ಞತಾ ಭಾವನೆಯೇ ಈ ಜಾನಪದ ನಡವಳಿಕೆಯ ಮೂಲ ಎಂಬುದು ಎಲ್ಲರಿಗೂ ಗೊತ್ತು.

೭. ಗಂಗೆಯಂತಹ ಪವಿತ್ರನದಿಗಳಲ್ಲಿ ನೀರನ್ನು ಮುಕ್ಕಳಿಸಿ ಉಗಿಯಬಾರದೆಂದೂ ಅದು ಪಾಪಕರ ಎಂದೂ ಜನ ನಂಬಿದ್ದರು. (ಸ.ಪ. ೯-೩೩)

೮. ಕಾಶಿ, ರಾಮೇಶ್ವರ, ಕುರುಕ್ಷೇತ್ರ, ಶ್ರೀಪರ್ವತ ಮೊದಲಾದ ಕ್ಷೇತ್ರಗಳಿಗೆ ಪುಣ್ಯಸಂಪಾದನೆಯ ದೃಷ್ಟಿಯಿಂದ ಯಾತ್ರೆ ಹೋಗುವುದು, ಅಲ್ಲಿ ಜಾತ್ರೆನಡೆಸುವುದು, ಅವುಗಳ ಬಗೆಗಿನ ಐತಿಹ್ಯಗಳನ್ನು ಬಣ್ಣಿಕಟ್ಟಿ ಹೇಳುವುದು,

ಅಲ್ಲಿ ಧಾನಧರ್ಮಾದಿಗಳನ್ನು ಮಾಡಿದರೆ ತಮ್ಮ ಸಂಪತ್ತು ವೃದ್ಧಿಸುವುದೆಂದೂ ಜನ ನಂಬಿ ಹಾಗೆ ನಡೆದುಕೊಳ್ಳುತ್ತಿದ್ದರು. ಕುರುಕ್ಷೇತ್ರದಲ್ಲಿ ಹಣ ಬಿತ್ತಿ ಬಂದರೆ ತಮಗೆ ಗಾಡಿಗಟ್ಟಳೆ ಹಣ ಸಿಗುತ್ತದೆ ಎಂದೂ ಜನ ಭಾವಿಸಿದ್ದರು. (ಸ.ಪ. ೧೨-೯,೧೧).

೯. ಮೂಢಭಕ್ತಿಯನ್ನು ಪ್ರಚುರಪಡಿಸುವ ಹಲವಾರು ನಂಬಿಕೆಗಳನ್ನು ಜನ ಪ್ರಚಾರ ಮಾಡುತ್ತಿದ್ದರು. ಉದಾ.ಗೆ ಕೆಲವು ಶಿವಲಿಂಗಗಳು ತಾವೇ ಬೆಳೆಯುತ್ತವೆ ಎನ್ನುವುದು. ಶಿವನು ಕನಸಿನಲ್ಲಿ ಬಂದು 'ತಾನು ಇಂಥ ಕಡೆ ಇದ್ದೇನೆ, ಹೊರಗೆ ತೆಗೆ' ಎನ್ನುವುದು, ದೇವಸ್ಥಾನಗಳ ಬಗ್ಗೆ ಕತೆಗಳನ್ನು ಹಬ್ಬಿಸುವುದು ಇತ್ಯಾದಿ (ಸ.ಪ. ೮-೨೬,೨೭, ೯೮,೯).

೧೦. ವಿವಿಧ ಔಷಧಿಗಳ ಮೂಲಕ ಆಯಸ್ಸನ್ನು ಹೆಚ್ಚಿಸಿಕೊಳ್ಳಬಹುದೆಂದು ನಂಬಿ, ಅದೃಷ್ಟದಲ್ಲಿರುವ ಆಯಸ್ಸು ಎಷ್ಟೋ ಅಷ್ಟು ಮಾತ್ರವೇ ದಕ್ಕುವುದೆಂಬ ಸತ್ಯವನ್ನು ನಂಬದೆ, ಈ ಬಗ್ಗೆ ವಿವಿಧ ಸಾಧನೆ ಮಾಡಿದ್ದೇವೆನ್ನುವ ಜನರ ಮೊರೆ ಹೋಗುವ ಜನರೂ ಸಾಕಷ್ಟಿದ್ದರು. ತಮ್ಮ ಮಲಮೂತ್ರಗಳನ್ನು ಎಷ್ಟೋಕಾಲ ಸೇವಿಸುವ, ಮೈಗೆ ಹಚ್ಚಿಕೊಂಡು ಸಾಧಕರೆಂದು ನಟನೆ ಮಾಡುವ ಜನರೇ ಎಷ್ಟೋವೇಳೆ ಈ ವಿಷಯದಲ್ಲಿ ಸಾಮಾನ್ಯರಿಗೆ ಆದರ್ಶವೆನಿಸುತ್ತಿದ್ದರು (ಸ.ಪ. ೧೨-೨೨,೨೩). ಇಂಥವರು ಬಂಜೆಯರಿಗೆ ಔಷಧಕೊಟ್ಟು ಮಕ್ಕಳಾಗುವಂತೆ ಮಾಡುತ್ತೇವೆಂದು ಹೇಳುತ್ತಿದ್ದರು ಹಾಗೂ ಈ ಔಷಧದಲ್ಲಿ ಆಡಿನ ಮೂತ್ರ ಸೇರಿರುತ್ತಿತ್ತು. ಜೈನರು ಇಂಥ ಮೋಸಕ್ಕೆ ಸಾಮಾನ್ಯವಾಗಿ ಬಲಿಯಾಗುತ್ತಿರಲಿಲ್ಲ (ಸ.ಪ. ೧೨-೩೫,೪೨).

೧೧. ಎತ್ತುಗಳು (ಬಸವ) ಸತ್ತವರನ್ನು ಸ್ವರ್ಗಕ್ಕೆ ಒಯ್ಯುತ್ತವೆ (ಸ.ಪ. ೧೧-೧೨೮), ಬೆಕ್ಕನ್ನು ಹಿಂಸಿಸಿದರೆ ಪಾಪ ಸುತ್ತಿಕೊಳ್ಳುತ್ತದೆ (೧೪-೧೬), ಸತ್ತವರು ಕಾಗೆಗಳ ರೂಪದಲ್ಲಿ ಬಂದು ಅವರಿಗೆ ಬೇಕಾದವರು ಇಟ್ಟ ಪಿಂಡವನ್ನು ತಿನ್ನುತ್ತಾರೆ (೧೧-೧೧೮), ಎಂಬಂಥ ನಂಬಿಕೆಗಳು ಜೈನೇತರರಲ್ಲಿದ್ದವು. ಯಜ್ಞದಲ್ಲಿ ಹಾಗೂ ಗ್ರಾಮದೇವತೆಗಳಿಗೆ ಕುರಿಗಳನ್ನು ಪಶುಬಲಿಯಾಗಿ ನೀಡುತ್ತಿದ್ದರು (೧೪-೧೨೪, ೯-೧೧೧, ಸ.ಪ).

೧೨. ಜೈನಮತವನ್ನು ಸ್ವೀಕರಿಸಿದವನನ್ನು ಅವನ ಮೂಲಧರ್ಮದವರು ಹೀನೈಸಿ ಮಾತನಾಡುತ್ತಿದ್ದುದು ಅಲ್ಲಲ್ಲಿ ನಡೆಯುತ್ತಿತ್ತು. ಹೀಗೆ ವರ್ತಿಸುವುದರ ಬಗ್ಗೆ ವಿಷಾದಿಸುತ್ತಾ ಬ್ರಹ್ಮಶಿವನು ಅಂಥವರನ್ನು ಮೂಢರು ಎನ್ನುತ್ತಾನೆ (ಸ.ಪ. ೧೩-೧೯).

೧೩. ವೈದಿಕರು ಜೈನಧರ್ಮವನ್ನು ವೇದಬಾಹಿರ ಎಂದು ತಿರಸ್ಕರಿಸುತ್ತಿದ್ದರು. ಯಾವುದೇ ಖಚಿತ ಸಿದ್ಧಾಂತಗಳನ್ನು ಮುಂದಿಡದೆ, ಜೈನತತ್ವಗಳನ್ನು ಸರಿಯಾಗಿ ಅರಿತುಕೊಳ್ಳದೆ ಅದನ್ನು ಅನ್ಯರು ಟೀಕಿಸುತ್ತಿದ್ದರೆಂದು ಬ್ರಹ್ಮಶಿವ ಹೇಳುತ್ತಾನೆ (ಸ.ಪ. ೧೧-೧೪೬.೪೮).

## ೩. ಉಭಯ ಸಾಮಾನ್ಯ ನಂಬಿಕೆ, ನಡವಳಿಕೆಗಳು:

ಜೈನರು ಜೈನೇತರರು ಎಂಬ ಭೇದವಿಲ್ಲದೆ ಎಲ್ಲ ಧರ್ಮದವರಲ್ಲಿಯೂ ಇದ್ದ, ಇದ್ದಿರಬಹುದಾದ ಕೆಲವು ನಡವಳಿಕೆಗಳು, ನಂಬಿಕೆಗಳೂ ಜೈನ ಕಥಾ ಸಾಹಿತ್ಯ ಕೃತಿಗಳಲ್ಲಿ ಕಂಡು ಬರುತ್ತವೆ. ಅಂಥ ಕೆಲವು ನಂಬಿಕೆ, ನಡವಳಿಕೆಗಳಿವು-

೧. ಮಂತ್ರೌಷಧಿ ಹಾಕಿ ಸಾಯುತ್ತಿರುವವರನ್ನು ಬದುಕಿಸಬಹುದು, ಆದರೆ ಅವರ ಅದೃಷ್ಟದಲ್ಲಿ ಆಯುಷ್ಯವಿರಬೇಕು - ಎಂಬ ನಂಬಿಕೆ ಜನರಲ್ಲಿತ್ತು. ಧರ್ಮಾಮೃತದಲ್ಲಿ ಇದನ್ನು ಸಮರ್ಥಿಸುವ - 'ಮಂತ್ರೌಷಧಿಗಳಿಂ ಕಾವೊಡಮಾಯುಷ್ಯಮಿಲ್ಲದವಂಗೆ ಸಫಲಮಾಗದಂತೆ'..... ಎಂಬ ಮಾತು ಬರುತ್ತದೆ (ಧ. ೪-೫೨).

೨. ಒಳ್ಳೆಯ ದಾನದಿಂದ ವ್ಯಕ್ತಿಗೆ 'ಪರಮಾಯುಂ ಶ್ರೀಯುಂಪೆಂಪುಂ ವನಿತೆಯರೊಲವುಂ ಕೀರ್ತಿಯುಂ ಧೈರ್ಯಮುಂ' - ಇತ್ಯಾದಿಗಳೆಲ್ಲ ಬರುವುದೆಂದು ನಂಬಿ ಹೆಚ್ಚು ಹೆಚ್ಚು ದಾನಗಳನ್ನು ಮಾಡುವಲ್ಲಿ ಜನ ಶ್ರದ್ಧೆಯುಳ್ಳವರಾಗಿದ್ದರು (ಧ. ೪-೬೫).

೩. ಪೂರ್ವಾರ್ಜಿತ ಪಾಪದಿಂದ 'ಹೀನಾಯುಂ ಕಷ್ಟ ರೂಪುಂ ಬಡತನದೊಡವುಂ ಕುತ್ತಮುಂ ಪೀಡೆಯುಂ...... ' ಇತ್ಯಾದಿಗಳು ಉಂಟಾಗುತ್ತವೆ (ಧ. ೪-೬೬). ಅದೇ ರೀತಿ - ಪುಣ್ಯವಿಲ್ಲದಿದ್ದರೆ ಯಾವ ಕೆಲಸ ಮಾಡಿದರೂ ಸಿರಿವಂತನಾಗುವುದಿಲ್ಲ (ಧ. ೬-೧೩೩).

೪. ಜ್ಯೋತಿಷ್ಯ ಹಾಗೂ ಶಕುನಗಳಲ್ಲಿ ಜನಕ್ಕೆ ನಂಬಿಕೆ ಇತ್ತು. 'ಪುಣ್ಯಾಸ್ರವ'ದ ಷಷ್ಠಾಧಿಕಾರದಲ್ಲಿ ಸೂರ್ಯಮಿತ್ರನು ರಾಜಗೃಹದ ದೊರೆ ಸುಬಳನು ತನ್ನ ಕೈಯಲ್ಲಿ ಇಟ್ಟುಕೊಳ್ಳಲು ಕೊಟ್ಟಿದ್ದ ಪಚ್ಚೆಯ ಮುದ್ರಿಕೆಯನ್ನು ಅಚಾತುರ್ಯದಿಂದ ಕಳೆದು ಕೊಂಡಾಗ ಆತ- 'ಶಕುನಂಗಳಂ ಪರೀಕ್ಷಿಸಿ, ಬಲ್ಲರ ಬಾಯಂ ಪೊಕ್ಕಲ್ಲಿಯುಂ ಕಾಣದೆ ಪರಮಹಂಸನೆಂಬ ನೈಮಿತ್ತಿಕನಂ ಕರೆಸಿ ಆತನ ಮುಂದೆ ಚಿಂತಿಸಿ ಪ್ರಶ್ನೆಯಂ' ಮಾಡುತ್ತಾನೆ.

೫. ದುಷ್ಟರನ್ನು ಸದೆಬಡಿದು ಧರ್ಮ, ರಾಜ್ಯ, ಶಿಷ್ಟರನ್ನು ರಕ್ಷಿಸಿ ಕಾಪಾಡುವುದು ಕ್ಷತ್ರಿಯ ಧರ್ಮವೆಂದು ಸಾಮಾನ್ಯ ಜನರ ಅಭಿಪ್ರಾಯವಾಗಿತ್ತು - 'ಧರೆಯಂ ರಕ್ಷಿಸಿ ದುಷ್ಟರಂ ಕಷ್ಟರಂ ಕೆಡಿಸಿ ದಂಡಂಗೊಂಡು..... ಶಿಷ್ಟ ಕಷ್ಟ ಫಲಮಂ ಸಂತೋಷದಿಂದಿತ್ತು ಧೂರ್ತರ ಬೇರಂ ನೆರಕಿತ್ತು ಪಾಲಿಪುದು ಧಾತ್ರೀಚಕ್ರಮಂ ಕ್ಷತ್ರಿಯಂ' (ಧ ೨-೮೪).

೬. ಆಣೆ ಇಡುವ ಪದ್ಧತಿ ವ್ಯಾಪಕವಾಗಿತ್ತು. ಧರ್ಮಾಮೃತದಲ್ಲಿ ಅರಿಮಥನ ರಾಜನು ದುಷ್ಟನಾಗಿದ್ದ ತನ್ನ ಮಗ ಲಲಿತಾಂಗನನ್ನು ಕರೆದು ಬುದ್ಧಿ ಹೇಳಿ ಆತ ಸದ್ವರ್ತನೆಯಲ್ಲಿರದಿದ್ದರೆ ತಾನು ಸಿಟ್ಟಾಗುತ್ತೇನೆಂದು ಹೇಳಿ - "ದುರ್ಜನರೊಡನಾಟಮಂ ಮಾಣ್ಬುದೆನ್ನಾಣೆ ಎಂದು ತನ್ನಂ ಮುಟ್ಟಿಸಿಕೊಂಡು ಮಗನ ಕದಪಂ ಕರ್ಚಿಕಳಿಸಿದ"ನೆನ್ನುವ ಉಲ್ಲೇಖ ಒಂದು ಉದಾಹರಣೆ (೨.೯೧).

೭. ಗಿಲೀಟಿನ ಒಡವೆಗಳನ್ನು ಕೀಳು ಕುಲದವರು ಧರಿಸುವ ರೂಢಿ ಇತ್ತು - 'ಪಿತ್ತಾಳೆಯ ತೊಡವು ಪೊಲೆಯರ್ಗುತ್ತಮಮೆನಿಸಿದನ ಪೊನ್ನ ತೊಡವೆನಿಸುವವೊಲ್' (ಧ. ೪-೩೫).

೮. ಬ್ರಾಹ್ಮಣನನ್ನು ಯಾವುದಾದರೂ ಕಾರ್ಯಕ್ಕೆ ಆಹ್ವಾನಿಸುವಾಗ ವೀಳೆಯವನ್ನು ಕೊಟ್ಟು ಆಹ್ವಾನಿಸುವುದು ಪದ್ಧತಿಯಾಗಿತ್ತು. ಧರ್ಮಾಮೃತದ ಪ್ರಥಮಾಶ್ವಾಸದಲ್ಲಿ ಬರುವ ದಯಾಮಿತ್ರ ಸೆಟ್ಟಿಯ ಕತೆಯಲ್ಲಿ ಆತನು ವಸುಭೂತಿ ಎಂಬ ಬ್ರಾಹ್ಮಣನಿಗೆ "ಪಿರಿದು ಮನ್ನಣೆಯಿಂವಾದರದಿಂದ ವೀಳೆಯಮಂ ಕರ್ಪುರ ಸಹಿತಂ ಕೊಟ್ಟು" ತನ್ನ ವ್ರತವೊಂದರ ಪಾಲನೆಗಾಗಿ ತಾತ್ಕಾಲಿಕವಾಗಿ ಮುನಿಯಾಗುವಂತೆ ಕೇಳಿಕೊಳ್ಳುವುದು ಇದಕ್ಕೊಂದು ಉದಾಹರಣೆ (೧-೧೧೯). ಮುಖ್ಯವಾದ ಕೆಲಸಕ್ಕೆ ಹೀಗೆ ವೀಳೆಯ ಸಹಿತ

ಆಹ್ವಾನಿಸುವ ಈ ಕ್ರಮ ಈಗಲೂ ಮದುವೆಯ ನಿಷ್ಕರ್ಷೆ, ಉತ್ಸವದ ಆರಂಭಕ್ಕೆ ಪಂಗಡದ ಹಿರಿಯರಿಗೆ ವೀಳ್ಯ ಸಮೇತ ಕಂಕಣ ನೀಡುವುದು, ಮೊದಲಾದ ಪದ್ಧತಿಗಳ ಮೂಲಕ ಜೀವಂತವಾಗಿರುವುದನ್ನು ನೋಡಬಹುದು.

೯. ತಮ್ಮ ಮೈ ಮೇಲೆ ತಾವೇ ಬಡಿದುಕೊಳ್ಳುವ ಮೈಲಾರದ ಗೊರವರು ಹನ್ನೆರಡನೇ ಶತಮಾನದಲ್ಲೂ ಇದ್ದರು. ನಯಸೇನನು ಒಂದೆಡೆ ಉಪಮೆ ನೀಡುತ್ತಾ - "ಮೈಲಾರದ ಗೊರವನಂತೆ ತಂತಮ್ಮನೆ ಬಡಿದುಕೊಳ್ವ" (ಧ ೩-೧೬೯) ಎನ್ನುವುದು ಇದಕ್ಕೊಂದು ಉದಾಹರಣೆ.

೧೦. ಬಸದಿಗಳ ಮುಂದೆ, ಮನೆಗಳ ಮುಂದೆ ರಂಗವಲ್ಲಿ ಹಾಕುವ ಸಂಪ್ರದಾಯ ಆಗಿನಿಂದಲೂ ಇತ್ತು. ಧರ್ಮಾಮೃತದಲ್ಲಿ ಬರುವ ಅನಂತಮತಿಯ ಕತೆಯಲ್ಲಿ ಸೆಟ್ಟಿಯು- 'ರಮಣೀಯಮಪ್ಪ ರಂಗವಲ್ಲಿಯಂ ಕಂಡೀ ಹಸ್ತ ಕೌಶಲಮನಂತ ಮತಿಗಕ್ಕುಮುಳಿದರ್ಗಾಗದು' ಎಂದು ಯೋಚಿಸುವುದು (ಧ. ೩.೨೦೦) ಇದಕ್ಕೊಂದು ಉದಾಹರಣೆ. ಇದೇ ರೀತಿ, ಮುಂದೆ ಅವಳ ವಿವಾಹ ಮಹೋತ್ಸವದ ಸಂದರ್ಭದಲ್ಲಿಯೂ ರಂಗವಲ್ಲಿಗಳನ್ನು ಮನೆ ತುಂಬಾ ಇಟ್ಟರೆಂಬ ಮಾತು ಬರುತ್ತದೆ - "ಪೊಸ ರಂಗವಲ್ಲಿಯು ವಿಳಸಿತ ಮಾಗಿರ್ದುವೆತ್ತಲುಂ ತದ್ಗ್ರಹದೊಳ್" (೩-೩೪).

೧೧. ದೊರೆಗಳು ಮಗನಿಗೆ ಪಟ್ಟವನ್ನು ವಹಿಸಿಕೊಡುವಾಗ ಉಪದೇಶಿಸುತ್ತಿದ್ದ ಈ ಮಾತು, ಆಳುವವರ ನಡವಳಿಕೆ ಹೇಗಿರಬೇಕೆಂದು ನಂಬಿದ್ದರೆಂಬುದಕ್ಕೆ ಒಂದು ಉದಾಹರಣೆ. ಒಡ್ಡಾಯನ ಮಹಾರಾಜ ತನ್ನ ಮಗನಿಗೆ ಪಟ್ಟಕಟ್ಟುವ ಸಂದರ್ಭದಲ್ಲಿ ನೀಡುವ ಉಪದೇಶವಿದು-

> ಧರೆಯಂ ನೋಯಿಸದಿರ್ ಜಿನೇಶ್ವರ ಪದಾಂಭೋಜಾತಮಂ ಭಾವಿಸು
> ತ್ತಿರು ಜೈನಾಗಮದೋಜೆಯಿಂ ನಡೆ ಬುಧವ್ರಾತಕ್ಕೆ ಲೇಸಾಗುಮಾ
> ನ್ದಿರದಿರ್ಧರ್ಮಮನುಗ್ರರಂ ಪಿಡಿಯದಿರ್ ಧೂರ್ತಾದಿ ದೋಷಂಗಳಂ
> ಭರದಿಂ ಪೊರ್ದದಿರೊಲ್ದು ಮಾಡು ಮುನಿಸಂದೋಹಕ್ಕೆ ನೀನರ್ತಿಯಿಂ

(ಧ. ೪-೨೭೦)

ಇದು, ಪ್ರಸಿದ್ಧ ಶಾಸನ ಪದ್ಯವೊಂದರಲ್ಲಿ ಲಕ್ಷ್ಮೀಧರ ಅಮಾತ್ಯನಿಗೆ ಅವನ ತಾಯಿ ಹಾಲೂಡಿಸುತ್ತಾ- "ಕೆರೆಯಂ ಕಟ್ಟಿಸು, ಬಾವಿಯಂ ಸಮೆಸು, ಸೆರೆಯೊಳ್ ಸಿಲ್ಕಿರ್ದನಾಥರಂ ಬಿಡಿಸು......" ಎಂಬಿತ್ಯಾದಿಯಾಗಿ ಉದಾತ್ತ ನಡವಳಿಕೆಗಳನ್ನು ಬೋಧಿಸುತ್ತಿದ್ದಳೆಂಬ ಪದ್ಯಕ್ಕೆ ಸಂವಾದಿಯಾಗಿದೆ. ಒಟ್ಟಿನಲ್ಲಿ- ಅಧಿಕಾರದಲ್ಲಿರುವವರು ಸಚ್ಚಾರಿತ್ರ್ಯದಿಂದಲೂ ಸರ್ವಜನ ಹಿತಕಾರಿಗಳಾಗಿಯೂ ನಡೆದುಕೊಳ್ಳಬೇಕೆಂದು ಹಿರಿಯರು ನಿರೀಕ್ಷಿಸುತ್ತಿದ್ದರೆಂಬುದು ಮಾತ್ರ ಇದರಿಂದ ಖಚಿತವಾಗಿ ವ್ಯಕ್ತವಾಗುತ್ತದೆ.

ಇದೇ ಧರ್ಮಾಮೃತದಲ್ಲಿ ಚಂದ್ರಾಭ ಮಹಾರಾಜನು ವೈರಾಗ್ಯಗೊಂಡು ತನ್ನ ಮಗನಿಗೆ ಪಟ್ಟವನ್ನೊಪ್ಪಿಸುವಾಗ ಹೇಳುವ ಈ ಮಾತುಗಳೂ ಸಹ, ಮೇಲೆ ಹೇಳಿದ ನಡವಳಿಕೆ ಸಾರ್ವತ್ರಿಕವಾಗಿ ಅಪೇಕ್ಷಣೀಯವಾಗಿತ್ತು ಎಂಬುದಕ್ಕೆ ಇನ್ನೊಂದು ಸಾಕ್ಷ್ಯವಾಗುತ್ತದೆ -

ಚಾರುಚರಿತ್ರನಪ್ಪುದು ಗುಣಾನ್ವಿತನಪ್ಪುದು ಧರ್ಮದೊಳ್ಸದಾ
ಚಾರನೆನಿಪ್ಪುದುಜ್ವಲ ಜಿನೇಂದ್ರಪದದ್ವಯ ಭಕ್ತನಪ್ಪುದಿ
ನ್ನಾರು ಮನುರ್ಕೆ ಸೊರ್ಕೆ ಸಲೆ ನೋಯಿಸದಿರ್ಪುದು ಜೈನಯೋಗಿವೃಂ
ದಾರಕರಲ್ಲಿ ಭಕ್ತಿಭರದಿಂ ನೆರೆ ತೋರುವುದುತ್ತರೋತ್ತರಂ।

(ಧ. ೫-೪೧)

'ತಾವರೆಯೆಲೆಯ ಮೇಲಣ ನೀರಂತೆ ಸಂಸಾರದೊಳಿಪ್ಪ
ದುಃಖಮಂ ಪಾಪಮಂ ಪೊರ್ದದೆ ಸಿಪ್ಪಿನೊಳ್ ಪುಟ್ಟಿಯುಂ
ಮತ್ತಾ ಸಿಪ್ಪಿಂದಂ ತಾಂ ಭಿನ್ನನೆಂತಂತೆ ನೀನುಮೆನ್ನಿಂದಂ
ಸಕಲಗುಣಂಗಳೊಳಂ ಧರ್ಮದೊಳಂ ರಾಜನೀತಿಯೊಳಂ
ಮಿಗಿಲಪ್ಪುದು' (ಧ. ೫-೪೨ ವಚನ)

೧೨. ಪತಿ-ಪತ್ನಿ ಬೇರೆ ಬೇರೆ ಧರ್ಮಗಳನ್ನು ಪಾಲಿಸಲು ಅವಕಾಶವಿತ್ತು. ಪುಣ್ಯಾಸ್ರವದ ತೃತೀಯಾಧಿಕಾರದಲ್ಲಿ ಬರುವ ಶ್ರೇಣಿಕ ಭಾಗವತ ಧರ್ಮವನ್ನು ಪಾಲಿಸುತ್ತಿದ್ದರೆ ಆತ ಮೆಚ್ಚಿ ಅಪಹರಿಸಿ ತಂದು ಮದುವೆಯಾದ ಚೇಳಿನಿ ಆ ಬಳಿಕವೂ ಜಿನಧರ್ಮವನ್ನೇ ಪಾಲಿಸುತ್ತಿದ್ದಳು.

೧೩. ಸೂಳೆಯರು 'ಮೋಹನಚೂರ್ಣ'ವೆಂಬ ವಿಶೇಷ ರೀತಿಯ ಚೂರ್ಣವನ್ನು ಪುರುಷರಿಗೆ ತಿನ್ನಿಸಿ ಅವರಲ್ಲಿ ಕಾಮಾಸಕ್ತಿ ಇದ್ದಕ್ಕಿದ್ದಂತೆ ಹೆಚ್ಚುವಂತೆ ಮಾಡಿ

ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು, ಅವರ ದ್ರವ್ಯವನ್ನು ಅಪಹರಿಸುವ ಪದ್ಧತಿ ಇತ್ತು. ಚಾರುದತ್ತನ ಕತೆಯಲ್ಲಿ ಇದು ಬರುತ್ತದೆ - "ಚಾರುದತ್ತಂ ನೀರಂ ಕುಡಿಯಲ್ವೇಡೆ ಮೋಹನ ಚೂರ್ಣಮಂ ಕಲೆಸಿ ದಹಿಮೋದಕಮಂ ನುಣ್ಣಗದರೊಳ್ ತೀವಿತಂದು ಕೆಲದ ಕೆಳದಿಯೋರ್ವಳ್ಕುಡಿಯಲೆರೆವುದು ಮಾಗಳೆ ಮತಿ ವಿಹ್ವಳನಾಗಿ ರತಿಗಿಚ್ಛೈಸಿ........" (ಪುಣ್ಯಾಸ್ರವ ಚತುರ್ಥಾಧಿಕಾರ ಪದ್ಯ ೮ರ ನಂತರದ ವಚನ).

೧೪. ಇದೇ ರೀತಿ, ಗಾಢ ನಿದ್ರೆ ತರುವಂತಹ ವಸ್ತುವನ್ನು ಆಹಾರದಲ್ಲಿ ಬೆರೆಸಿಕೊಡುವ ಪದ್ಧತಿಯೂ ಇತ್ತು. ಧನಹೀನನಾದ ಚಾರುದತ್ತನನ್ನು ಅವನು ಒಲಿದಿದ್ದ ಸೂಳೆಯ ತಾಯಿ ಹೀಗೇಯೇ ಹೊರಹಾಕುತ್ತಾಳೆ- "ಅವರಿರ್ಗಂ ಪಿರಿದಪ್ಪ ನಿದ್ರೆಯಪ್ಪ ಸೊಕ್ಕಾಹಾರಮನಿಕ್ಕಿ ಮೈಯರಿಯದವಸರದೊಳ್ ಚಾರುದತ್ತನುಟ್ಟ ವಸ್ತ್ರಮಂ ತೊಟ್ಟ ತೊಡಿಗೆಯಂ ಸುಲಿದುಕೊಂಡು ಕಂಬಳಿಯೊಳಾತನಂ ಮೊಟ್ಟೆಯಂ ಕಟ್ಟಿ ಪೊತ್ತು........." (ಪುಣ್ಯಾಸ್ರವ, ಪುಟ ೧೩೦), ಇವೆಲ್ಲ ಮೋಸಮಾಡುವ ವಿಧಾನಗಳಾಗಿ ಸಹಸ್ರಾರು ವರ್ಷಗಳಿಂದಲೂ ಬಳಕೆಯಲ್ಲಿದ್ದವು ಎಂಬುದು ಇಲ್ಲಿನ ಒಟ್ಟಾರೆ ಸಾರಾಂಶ.

೧೫. ವಿವಾಹಿತ ಸ್ತ್ರೀ ಕೂಡಾ ಪರಪುರುಷನಿಗಾಶಿಸಿ ಅವನನ್ನು ಸುಳ್ಳುಹೇಳಿ ಬರಮಾಡಿಕೊಂಡು ಕಾಮತೃಷೆ ತೀರಿಸಿಕೊಳ್ಳಲು ಪ್ರಯತ್ನ ನಡೆಸುವ ಪ್ರಸಂಗಗಳಿದ್ದವು. ಕಪಿಳೆ ಎಂಬುವಳು ಸುದರ್ಶನನೆಂಬ ವೈಶ್ಯನನ್ನು ಹೀಗೆ ಆಕರ್ಷಿಸುವ, ಆದರೆ ಆತ ಅದಕ್ಕೆ ಒಪ್ಪದಿರುವ ಕತೆ ಪುಣ್ಯಾಸ್ರವದ ಪಂಚಮಾಧಿಕಾರದಲ್ಲಿ ಬರುತ್ತದೆ (ಪು. ೧೫೯-೬೦). ಜೈನ ರಾಮಾಯಣದಲ್ಲಿ ನಳಕೂಬರ ಎಂಬ ದೊರೆಯ ಪತ್ನಿ ರಾವಣನನ್ನು ಮೋಹಿಸಿ ತನ್ನ ದೂತಿಯ ಮೂಲಕ ಅಭಿಸಾರ ಸಂದೇಶವನ್ನು ಕಳಿಸುವ ಪ್ರಸಂಗ ಕೂಡಾ ಇದೇ ನಡವಳಿಕೆಗೆ ಇನ್ನೊಂದು ಉದಾಹರಣೆಯಾಗಿದೆ.

೧೬. ಊಟವಾದ ನಂತರ ಬಾಳೆ, ಕರ್ಜೂರ, ಕಿತ್ತಳೆ, ಇಮ್ಮಾವು, ಪೇರಿಲೆ, ಈಳೆ - ಮುಂತಾದ ತನಿವಣ್ಗಳನ್ನು ತಿನ್ನುವ ಅಭ್ಯಾಸ ಶ್ರೀಮಂತರಲ್ಲಿತ್ತು (ಧ. ೧-೧೫೧).

೧೭. ಸೂಳೆಯರ ಮನೆಗಳಲ್ಲಿ ಗಿಳಿಗಳನ್ನು ಸಾಕುವ ರೂಢಿ ಇತ್ತು. ಅವಕ್ಕೆ ಬೇಕಾದವರನ್ನು ಒಲಿದು ನುಡಿಸುವುದನ್ನು, ಒಲ್ಲದವರನ್ನು ಬೈಯುವುದನ್ನು ಕಲಿಸಲಾಗುತ್ತಿತ್ತು - 'ಸೂಳೆಯ ಮನೆಯ ಗಿಳಿಯಂತೆ ತನ್ನನೊಲ್ಲದನಂ ಪಳಿದು ಒಲ್ದರಂ ಪೊಗಳದೆ.......' ಋಷಿಯಾದವನು ಇರಬೇಕೆಂದು ನಯಸೇನ ಹೋಲಿಕೆ ಕೊಡುತ್ತಾನೆ. (ಧ. ೫.೯೯)

೧೮. ಮದ್ದುಗುಣಿಕೆಯನ್ನು ತಿಂದು ಅಮಲು ಬರಿಸಿಕೊಳ್ಳುವ ವ್ಯಸನಿಗಳೂ ಇದ್ದರು- 'ಮದ್ದುಗುಣಿಕೆಯಂ ತಿಂದ ಮಾನಿಸನಂತೆ......' (ಧ ೬-೧೧೭).

೧೯. 'ಸತ್ಯನುಡಿವನೆ ಸುಖಿ ಕೇಳ ದುಃಖಿ ತಾಂ ಪುಸಿವಾತಂ' ಎಂಬುದು ಎಲ್ಲ ಧಾರ್ಮಿಕರ ಸಾಮಾನ್ಯ ನಂಬಿಕೆಯಾಗಿದ್ದು, ಅವರ ನಡವಳಿಕೆಗೆ ಆಧಾರವಾಗಿತ್ತು (ಧ ೬-೧೪೦).

೨೦. ಚೀನಾಂಬರ, ಮಹಾಚೀನಾಂಬರಗಳನ್ನು ಧರಿಸಿ ಮೈಗೆ ಚಂದನವನ್ನು, ಕಸ್ತೂರಿಯನ್ನು, ಲೇಪಿಸಿಕೊಳ್ಳುವುದು ಸಿರಿವಂತರಿಗೆ ಪ್ರಿಯವಾದ ರೂಢಿಯಾಗಿತ್ತು. (ಧ. ೬-೧೫೫)

೨೧. ಮಾಂಸವನ್ನು ಬೇಯಿಸಿದ ಮಡಕೆಯನ್ನು ಮನೆಯ ಹೊರಗೆ ಇಡುವ ಪದ್ಧತಿ ಕೆಲವರಲ್ಲಿತ್ತು. ಇದನ್ನು ನೆನೆದೇ ನಯಸೇನ ಒಂದು ಕಡೆ - 'ಅಡಗಟ್ಟ ಮಡಕೆಯಂ ಪೊರಗಿಡುವಂತೆ ಕೂಳನಟ್ಟ ಮಡಕೆಯನೇಕೆ ಪೊರಗಿಡರ್?' ಎಂದು ಕೇಳುತ್ತಾನೆ (ಧ ೭-೪೩). ಈಗಲೂ ಸಹ ಕೆಲವು ಜನಾಂಗಗಳಲ್ಲಿ ಮಾಂಸವನ್ನು 'ಹೊಲಸು' ಎನ್ನುವ, ಅದನ್ನು ಅಡಿಗೆ ಮನೆಯಲ್ಲಿ ಬೇಯಿಸದೆ ಹೊರಗೆ ಬೇಯಿಸುವ, ಅದನ್ನು ಬೇಯಿಸಲೆಂದೇ ಬೇರೆ ಮಡಕೆಯನ್ನಿಟ್ಟಿರುವ ಸಂಪ್ರದಾಯ ರೂಢಿಯಲ್ಲಿದೆ.

- ಹೀಗೆ ದಿನನಿತ್ಯದ, ವಿಶೇಷ ಸಂದರ್ಭಗಳ, ವ್ಯವಹಾರಕ್ಕೆ ಸಂಬಂಧಿಸಿದಂತೆ ಬಹುತೇಕ ಎಲ್ಲ ನಡವಳಿಕೆಗಳೂ ಈ ಕೃತಿಗಳಲ್ಲಿ ದಾಖಲಾಗಿವೆ. ಇವುಗಳಲ್ಲಿ ಹಲವಾರು ನಂಬಿಕೆ, ನಡವಳಿಕೆಗಳನ್ನು ಈಗಲೂ ಅದೇ ರೂಪದಲ್ಲಿ, ಇನ್ನು ಕೆಲವನ್ನು ಮಾರ್ಪಾಟು ಹೊಂದಿದ ರೂಪದಲ್ಲಿ ಕಾಣುತ್ತೇವೆ. ಆದರೆ ಕಾಲಪ್ರಭಾವದಿಂದ ಕೆಲವು ನಂಬಿಕೆ, ನಡವಳಿಕೆಗಳು ಇಂದು ಅಳಿಸಿ ಹೋಗಿದ್ದು,

ಅವು ಪಳೆಯುಳಿಕೆ ಮಾತ್ರವಾಗಿ ಈ ಕೃತಿಗಳಲ್ಲಿ ಉಳಿದುಕೊಂಡಿವೆ. ಅದೇ ರೀತಿ, ಇಲ್ಲಿ ನೆನಪಿಡಬೇಕಾದ ಇನ್ನೂ ಒಂದು ಅಂಶವಿದೆ, ಅದೆಂದರೆ - ಇಲ್ಲಿ ದಾಖಲಾಗಿರುವ ನಂಬಿಕೆ, ಆಚರಣೆಗಳೆಲ್ಲ ಆಯಾ ಕೃತಿಗಳ ಕಾಲದ್ದು ಮಾತ್ರ ಎನ್ನುವಂತಿಲ್ಲ ಎನ್ನುವುದು. ಈ ಕೃತಿಗಳಲ್ಲಿನ ಹಲವು ಕತೆಗಳು ಅನ್ಯ ಆಕರಗಳಿಂದ ತೆಗೆದುಕೊಳ್ಳಲ್ಪಟ್ಟಿದ್ದು ಅಲ್ಲಿ ಅಳವಟ್ಟಿದ್ದ, ಮೂಲಕೃತಿಗಳ ರಚನಾಕಾಲದ ಮನೋಭಾವ ಜಾನಪದ ನಡವಳಿಕೆಗಳೆಷ್ಟೋ ತದ್ವತ್ತಾಗಿ ಈ ಅನಂತರದ ಕೃತಿಗಳಲ್ಲಿ ಭಾಷಾಂತರಿತಗೊಂಡಿರುವುದೂ ಉಂಟು. ಆದರೆ ಒಟ್ಟಾರೆಯಾಗಿ ಇಲ್ಲಿ ನಾವು ಕಾಣಬಹುದಾದ ಜನಸಾಮಾನ್ಯರ ನಂಬಿಕೆಗಳು, ಜೀವನವಿಧಾನಗಳೆಲ್ಲ ಆಯಾ ಕೃತಿಗಳ ಅಥವಾ ಅದಕ್ಕೂ ಹಿಂದಿನ ದಿನಮಾನಗಳಲ್ಲಿ ಜನಜೀವನದ ಒಂದು ಭಾಗವಾಗಿದ್ದವೆಂಬುದು ಮಾತ್ರ ನಿಶ್ಚಿತವಾದ ವಿಷಯ.

ೞ

## ಅಧ್ಯಾಯ - ೬

# ಇನ್ನಷ್ಟು ಜಾನಪದ ಅಂಶಗಳು

ಈ ಹಿಂದಿನ ಅಧ್ಯಾಯಗಳಲ್ಲಿ ಒಂದೊಂದರಲ್ಲೂ ಜಾನಪದದ ಒಂದೊಂದು ಮುಖ್ಯ ಭಾಗವನ್ನೆತ್ತಿಕೊಂಡು ಚರ್ಚಿಸಲಾಯಿತು. ಅವಷ್ಟೇ ಅಲ್ಲದೆ ಪ್ರಾಸಂಗಿಕವಾಗಿ ಇನ್ನೂ ಅದೆಷ್ಟೋ ಜಾನಪದ ಅಂಶಗಳು ಕನ್ನಡ ಜೈನ ಕಥಾ ಸಾಹಿತ್ಯದಲ್ಲಿ ಕಂಡುಬರುತ್ತವೆ. ಜನರ ಉದ್ಯೋಗಗಳು, ಬಳಸುತ್ತಿದ್ದ ಆಯುಧಗಳು, ಅಡಿಗೆ, ಆಟಗಳು, ಆಭರಣಗಳು, ಮುಂತಾದುವುಗಳ ಬಗ್ಗೆಯೂ ನಯಸೇನ, ಬ್ರಹ್ಮಶಿವ ಇತ್ಯಾದಿ ಕಥಾಕೋಶಕಾರರು ತಮ್ಮ ಕೃತಿಗಳಲ್ಲಿ ಸಾಕಷ್ಟು ಮಾಹಿತಿಗಳನ್ನು ನೀಡಿದ್ದಾರೆ. ಅಂಥ ಕೆಲವು ಮಾಹಿತಿಗಳ ಪರಿಚಯವನ್ನಿಲ್ಲಿ ನೀಡಲಾಗಿದೆ.

### ೧. ಅಡುಗೆಗಳು

ಜನತೆ ಸೇವಿಸುತ್ತಿದ್ದ ಖಾದ್ಯಗಳಾವುವೆಂಬುದರ ಬಗ್ಗೆ ವಿವರವು ಈ ಕೃತಿಗಳಲ್ಲಿ ಅನೇಕ ಕಡೆಗಳಲ್ಲಿ ದೊರೆಯುತ್ತದೆ. ಮಂಡಗೆ, ಸಂಡಗೆ, ಅಕ್ಕಿಯ ಅನ್ನ, ಬಾಳೆಯ ತಾಳಿಲ, ಹೋಳಿಗೆ, ತರಗು, ಲಡ್ಡುಗೆ, ಚಕ್ಕುಲಿ, ಗಾರಿಗೆ, ಪೂರಿಗೆ, ತೊವ್ವೆ ಇವೆಲ್ಲ ಆಗಿನ ಜನ ಚಪ್ಪರಿಸುತ್ತಿದ್ದ ಅಡುಗೆಗಳಲ್ಲಿ ಕೆಲವು.

ಮಂಡಗೆ ಬಳ್ಳಿವಾಲು ಪೊಸಸಕ್ಕರೆ, ಕಾಸಿದತುಪ್ಪಮಾವಗಂ
ಸಂಡಗೆಯಕ್ಕಿಯೋಗರವು ಬಾಳೆಯ ತಾಳಿಲವೆಲ್ಲವೆರ್ಮನಂ
ಗೊಂಡಿರೆ ಚಲ್ಲಕಾರ್ತಿಯರು ಬಡ್ಡಿಸೆ ಚೇಳಿನಿ ನೋಡಲೊಡಲಂ
ದುಂಡುದು ಕೆಟ್ಟ ಭಾಗವತ ಧರ್ಮದ ಕರ್ಮದ ಸಾಧುಸಂಕುಳಂ।

(ಪುಣ್ಯಾ: ೩-೪೮)

ಸೊಗಯಿಪ ಘೃತಪೂರಂ ಹೋ
ಳಿಗೆ ಮಂಡಗೆ ತರಗು ನಾಡೆ ರುಚಿವೆರಸಿದ ಲ
ಡ್ಡುಗೆ ಚಕ್ಕುಲಿ ಗಾರಿಗೆ ಪೂ
ರಿಗೆ ಮೊದಲಾಗಿರ್ದ ಪಲವು ಭಕ್ಷ್ಯಮನಾಗಳ್

(ಧ: ೧-೧೪೭)

ಕಳಿವೆಯ ಕೂಳ್ಗಗ್ರಮಗಿಸುವ
ತಿಳಿದುಪ್ಪಂ ತಿವುಡುಗಳೆದ ಪೊಂಬೆಸರ ಮಹೋ
ಜ್ವಲಮಪ್ಪ ಕಂಪಿನಿಂಪಿನ
ನಿಳಯಮೆನಿಸಿರ್ದ ಸವಿಯೊದವಿದ ತೊವೆಯುಂ।

(ಧ: ೧-೧೪೯)

ಮಾಂಸಕ್ಕೆ 'ಹೊಲಸು' ಎನ್ನುವ ರೂಢಿ ಹಿಂದೆಯೇ ಇತ್ತು ಎನ್ನುವುದಕ್ಕೆ ಧರ್ಮಾಮೃತದ ಎರಡನೇ ಅಶ್ವಾಸದಲ್ಲಿ ಬರುವ ವಿಶ್ವಾನುಲೋಮನ ಕಥೆಯಲ್ಲಿ ಸಾಕ್ಷಿಯೊಂದಿದೆ. ಈ ಕತೆಯಲ್ಲಿನ ಕಳ್ಳ ವಿಶ್ವಾನುಲೋಮ, ಮುನಿಗಳಿಂದ ವ್ರತ ಸ್ವೀಕರಿಸಿದ್ದಾನೆ - 'ಅಷ್ಟಮಿ, ಚತುರ್ದಶಿಗಳಂದು ಕಳ್ಳು ಮತ್ತು ಮಾಂಸವನ್ನು ಸ್ವೀಕರಿಸುವುದಿಲ್ಲ' ಎಂದು. ಹಾಗೆ ಆಚರಿಸುತ್ತಾ ಒಂದು ದಿನ 'ಬಹಳ ದಿನಗಳಿಂದ ಇವನ್ನು ಸೇವಿಸಲು ಆಗಿಲ್ಲ' ಎಂದುಕೊಳ್ಳುವ ಸಂದರ್ಭದಲ್ಲಿ - 'ಫಲವುಂ ದಿವಸಂ ಕಳ್ಳುಂ ಪೊಲಸುಂ ದೊರೆಕೊಂಡುದಿಲ್ಲ' ಎಂದು ಮಾತು ಬರುತ್ತದೆ (೨-೧೯೮). ಅದೇ ರೀತಿ ಮುಂದೆ (೨-೨೦೪) ಹೀಗೆ ಬರುತ್ತದೆ:

ಇವರವರ್ಗೆ ಕಪಟದಿಂದಂ
ಸವಿನಯದಿಂದೆರೆಯೆ ಕಳ್ಳನಾದರದಿಂ ಮ
ತ್ತವರಿವರ್ಗೆ ತಂದು ಪೊಲಸಂ
ಸವಿನಯದಿಂದಿಕ್ಕಿ ಕುಡಿದು ತಿಂದಂತಾಗಳ್।

## ೨. ಆಟಗಳು

ಕತೆಗಳನ್ನೂ, ಉಪಮೆಗಳ ಸೊಗಸನ್ನೂ ನೋಡುತ್ತಾ ಈ ಕಥಾಕೋಶಗಳನ್ನು ಓದುತ್ತಾ ಹೋಗುವಾಗ ಇಂತಹ ಅಂಶಗಳು ನಮ್ಮ ಲಕ್ಷ್ಯದಿಂದ ತಪ್ಪಿಸಿಕೊಳ್ಳುವುದೇ ಹೆಚ್ಚು. ಗಮನಿಸಿದರೆ ಅನೇಕ ಜಾನಪದ ಆಟಗಳ, ಕ್ರೀಡೆಗಳ ಉಲ್ಲೇಖ ಅಲ್ಲಲ್ಲಿ

ಕಂಡು ಬರುತ್ತದೆ. ಕುಣಿಕೋಲು (ಚಿನ್ನಿದಾಂಡು) ಆಟದ ಉಲ್ಲೇಖ 'ಪುಣ್ಯಾಸ್ರವ'ದ ಐದನೇ ಅಧಿಕಾರದಲ್ಲಿ ಬರುತ್ತದೆ. ನೆತ್ತ ಅಥವಾ ಪಗಡೆ ಪದೇ ಪದೇ ಉಲ್ಲೇಖಗೊಳ್ಳುವ ಇನ್ನೊಂದು ಆಟ.

ಹೆಚ್ಚು ಜನ ಸೇರಿ ಏರ್ಪಡಿಸಿ ನೋಡಿ ಆನಂದಿಸುತ್ತಿದ್ದ ಕ್ರೀಡೆಗಳೆಂದರೆ ಪ್ರಾಣಿಗಳ ಕಾದಾಟ. ಟಗರು, ಕೋಳಿ, ಎಮ್ಮೆ ಹೋರಿ ಇವುಗಳನ್ನು ಜನರು ತಮ್ಮ ವಿನೋದಕ್ಕಾಗಿ ಪರಸ್ಪರ ಕಾದಾಡಿಸುತ್ತಿದ್ದರೆಂದು ಬ್ರಹ್ಮಶಿವನಲ್ಲಿ ಉಲ್ಲೇಖ ದೊರೆಯುತ್ತದೆ (ಸಮಯ ಪರೀಕ್ಷೆ ೫-೧೫).

## ೩. ಉದ್ಯೋಗಗಳು

ಸಂಬಳ ತರುವ ನೌಕರಿಯನ್ನು ಬದಿಗಿಟ್ಟು, ಸಾಮಾನ್ಯ ಜನ ತಮ್ಮ ಉದರಂಭಣಕ್ಕಾಗಿ ಕೈಗೊಂಡಿದ್ದ ಅಥವಾ ವಂಶಪಾರಂಪರ್ಯವಾಗಿ ದೊರೆಕೊಂಡ ಹಲವು ಉದ್ಯೋಗಗಳ ಉಲ್ಲೇಖ ಈ ಕೃತಿಗಳಲ್ಲಿ ಪದೇಪದೇ ಬರುತ್ತದೆ. ಕೆಲವು ಉದಾಹರಣೆಗಳನ್ನೂ ಇಲ್ಲಿ ನೋಡಬಹುದು -

೧. ರಾಶಿ ಮಣ್ಣನ್ನು ಶೋಧಿಸಿ ಅದರಲ್ಲಿದ್ದ ತುಸುವೇ
ಚಿನ್ನವನ್ನು ಬೇರೆ ಮಾಡುವುದು (ಜಲಗಾರರು).
'ಜಗನೊಯ್ಯನೆ ಕರ್ಚಿ ರಾಶಿಯ ಮಣ್ಣೊಳೊಪ್ಪುವ
ಪೊನ್ನನಚ್ಚರಿಯಲ್ಲೆರೆ ಕಾಣ್ಬ.........' (ಧ. ೪-೩೩).

೨. ತಾಮ್ರವನ್ನು ಕೆಲ ಗಿಡಮೂಲಿಕೆಗಳ ಜೊತೆ ಸೇರಿಸಿ
ಚಿನ್ನವನ್ನಾಗಿ ಮಾಡಬಲ್ಲವರು ಕೆಲವರಿದ್ದರು - 'ಕಿಸುಮಂ
ಮೂಲಿಕೆಯಂ ಪೊರ್ದಿಸೆ ನಗೆಯೊಳ್ ಹೇಮಮಪ್ಪತೆರದಿಂ'.

(ಧ. ೪-೩೯)

೩. ಸೂಳೆಯರು, ಅವರ ಬಳಿಗೆ ವಿಟರನ್ನು ಸೆಳೆಯುವ ತಲೆಹಿಡುಕರು,
ಕುಂಟಿಣಿಯರು ಇದ್ದರು-
'ಸೂಳೆಯಿಲ್ಲದೆ ಭೋಜಂಗನಂ ಕರೆವೆನೆಂಬಂತೆ........' (ಧ. ೪-೫೦)

೪. 'ಹಗರಣ'ವನ್ನಾಡುವವರು, ಅದಕ್ಕೆ ತಮಟೆ ಬಡಿವ ಹೊಲೆಯರು
ಇದ್ದರು. ಋಷಿಯಾದವನು ಹಾಗೆ ಕುಣಿಯುವವನಂತಿರಬಾರದೆಂದು
ನಯಸೇನ ಅಭಿಪ್ರಾಯ ಪಡುತ್ತಾನೆ.-

'ಪೊಲೆಯರ್ಬಡಿವ ಪರಿಯೋಜೆಗಾಡುವ ಪಗರಣಗರಂ
ಕಂಡರ್ನಗುವರಲ್ಲದೆಯವರಾಟಕ್ಕೆ ಲಕ್ಷಣಮಂ ನೋಡರ್'

(ಧ. ೫-೧೦೩.)

೫. ಶ್ರೇಷ್ಠಿಗಳು ಅಥವಾ ವೈಶ್ಯರು ಒಂದು ಪ್ರಮುಖ ವ್ಯವಹಾರಸ್ಥ ವರ್ಗವಾಗಿ ಈ ಎಲ್ಲ ಕೃತಿಗಳಲ್ಲೂ ಪದೇ ಪದೇ ಕಾಣಿಸಿಕೊಳ್ಳುತ್ತಾರೆ. ಎಷ್ಟೋ ಮಂದಿ ಶ್ರೇಷ್ಠಿಗಳು ಜೈನಧರ್ಮ ಪರಿಪಾಲಕರೂ ಆಗಿದ್ದರು.

೬. ಗೋವರರು (ದನಕಾಯುವವರು)

೭. ಕಬ್ಬಿಲರು, ಪುಳಿಂದರು, ವ್ಯಾಧರು (ಬೇಡರು).

೮. ಗ್ರಾಮಣಿ (ಗ್ರಾಮಾಧಿಕಾರಿ)

೯. ಕಮ್ಮರ (ಕಮ್ಮಾರ)

೧೧. ಒಕ್ಕಲಿಗ, ಕೃಷಿಕ

೧೨. ಡೊಂಬರು.

## ೪. ಆಯುಧಗಳು

ಬಾಳ್ (ಕತ್ತಿ, ಖಡ್ಗ), ದಡಿ, ಡಾಣಿ (ದೊಣ್ಣೆ, ಬಡಿಗೆ), ಸುರಗಿ (ಕತ್ತಿ), ಕೊಡಲಿ, ಗದೆ, ಪಾಶ, ಚಕ್ರ, ಬಲೆ ಬಗಚಿ, ಕೊಂತ (ಭರ್ಜಿ), ಅಡ್ಡಣ (ಗುರಾಣಿ), ಬಿಲ್, ಕಣ್ಣಿವಲೆ (ಹಗ್ಗದ ಬಲೆ), ನೇಣು, ಅಂಬು (ಬಾಣ), ಕೂರಂಬು, ಕವಲಂಬು, ಉರಗಬಾಣ - ಇತ್ಯಾದಿ ಹಲವಾರು ಬಗೆಯ ಆಯುಧಗಳು, ಒಂದೇ ಆಯುಧದ ಹಲವಾರು ಪ್ರಭೇದಗಳ ಉಲ್ಲೇಖಗಳು ಧರ್ಮಾಮೃತ, ಪುಣ್ಯಾಸ್ರವ, ಸಮಯಪರೀಕ್ಷೆ ಕಾವ್ಯಗಳಲ್ಲಿ ದೊರೆಯುತ್ತವೆ. 'ಧರ್ಮ ಪರೀಕ್ಷೆ'ಯಲ್ಲಿ ಇನ್ನಷ್ಟು ಆಯುಧಗಳು ದೊರೆಯುತ್ತವೆ- ಮುಸುಂಡಿ, ಭಿಂಡಿವಾಳ, ಮುದ್ಗರ, ತೋಮರಮಿಟ್ಟಿ, ಬಿಟ್ಟೇರು ಸುರಿಗೆ, ಸಬಳ, ಸಲ್ಲೆಹ, ಸೂರಿಗೆ, ಚಕ್ರಚಾಪ, ಬಲ್ಲೆಹ, ಕತ್ತಿಗೆ, ಕಠಾರಿ - ಇತ್ಯಾದಿ.

## ೫. ಆಭರಣಗಳು

ಗಂಡಸರು ಹಾಗೂ ಹೆಂಗಸರು ತೊಡುತ್ತಿದ್ದ ಅನೇಕ ಆಭರಣಗಳ ಹೆಸರುಗಳು ಈ ಕಾವ್ಯಗಳಲ್ಲಿ ದೊರೆಯುತ್ತವೆ. ಇವೇ ಆಭರಣಗಳ ಉಲ್ಲೇಖಗಳು ಬೇರೆ

ಕನ್ನಡ ಹಾಗೂ ಸಂಸ್ಕೃತ ಕಾವ್ಯಗಳಲ್ಲಿ ದೊರೆಯುತ್ತವೆ. ಅಂದರೆ - ಈ ಎಷ್ಟೋ ಆಭರಣಗಳು ಎಲ್ಲೆಡೆ ಸಾಮಾನ್ಯವಾಗಿದ್ದವು ಎಂದು ಅರ್ಥವಾಗುತ್ತದೆ-

ಹಾರ, ಕೇಯೂರ, ಕಟಕ (ಕಡಗ), ಕಟಿಸೂತ್ರ (ಉಡುದಾರ), ಕುಂಡಲ (ಕಿವಿಯ ಆಭರಣ), ಮಣಿಕುಂಡಲ, ಪಚ್ಚೋಲೆ (ಪಚ್ಚೆಯ ಓಲೆ), ಮುದ್ರಿಕೆ (ಉಂಗುರ), ರತ್ನ ಮುದ್ರಿಕಾ, ಮುಕುಟ, ತೋಳಮಣಿ, ಕಂಕಣ, ಐಸರ (ಐದು ಎಳೆಯ ಸರ), ಮೌಕ್ತಿಕ ಹಾರ (ಮುತ್ತಿನ ಹಾರ), ನೂಪುರ (ಕಾಲು ಸರಪಳಿ), - ಇತ್ಯಾದಿ.

## ೬. ಪ್ರತಿಧ್ವನಿ ಶಬ್ದಗಳು (Echo words)

ಈ ಶಬ್ದಗಳು ಜನಪದ ಭಾಷೆಯ ಒಂದು ಅವಿಭಾಜ್ಯ ಅಂಗ. ಒಂದು ಶಬ್ದ, ಒಂದು ಅಕ್ಷರ ಮಾತ್ರ ವ್ಯತ್ಯಾಸವಾಗಿ ಮೂಲಶಬ್ದದ ಜೊತೆಯಲ್ಲೇ ಉಚ್ಚರಿಸಲ್ಪಡುವುದು ಇವುಗಳ ರೀತಿ. ಇವುಗಳ ಪ್ರಯೋಗದಿಂದಾಗಿ ನಿರೂಪಣೆಯಲ್ಲಿ ದೇಸೀಯತೆಯ ಬನಿ ತುಂಬಿಕೊಳ್ಳುತ್ತದೆ. ಜಾನಪದದಿಂದ ಸ್ಫೂರ್ತಿ ಪಡೆದ ಎಲ್ಲ ಕವಿಗಳಲ್ಲೂ ಜನಪದ ಭಾಷೆಯ ಹಲವು ಸಹಜ ಲಕ್ಷಣಗಳನ್ನು ನಾವು ನೋಡಬಹುದು. ಈಗಾಗಲೇ ಜೈನ ಕಥಾ ಸಾಹಿತ್ಯಕಾರರು ಗಾದೆಗಳನ್ನೂ ನಾಣ್ಣುಡಿಗಳನ್ನೂ ಹೇಗೆ ಸಮಯೋಚಿತವಾಗಿ ಬಳಸಿದ್ದಾರೆ ಎಂಬುದನ್ನು ನೋಡಿದ್ದೇವೆ. ಅದೇ ರೀತಿ ಅವರು ಜನರಲ್ಲಿ ಬಳಕೆಯಲ್ಲಿದ್ದ ಪಡಿನುಡಿಗಳನ್ನೂ ದ್ವಿರುಕ್ತಿಗಳನ್ನೂ ಧಾರಾಳವಾಗಿ ಬಳಸಿಕೊಂಡಿದ್ದಾರೆ. ಇವುಗಳ ಮೂಲಕವಾಗಿ ಆಗಿನ ದೇಸೀ ಮಾತಿನ ಸ್ವರೂಪವೂ ನಮಗೆ ಸ್ಪಷ್ಟವಾಗುತ್ತದೆ. ನಯಸೇನನ ಧರ್ಮಾಮೃತದ ಷಷ್ಠಾಶ್ವಾಸ ಒಂದರಲ್ಲೇ ಸಿಗುವ ಇಂಥ ನುಡಿಗಳನ್ನು ನೋಡಿದರೂ ಸಾಕು, ಈ ಕವಿಗಳು ಇವನ್ನು ಎಷ್ಟೊಂದು ಧಾರಾಳವಾಗಿ ಬಳಸಿದ್ದಾರೆಂಬುದು ಸ್ಪಷ್ಟವಾಗುತ್ತದೆ-

ಜವನುಂ ಗಿವನುಂ, ದೈವಮುಂ ಗಿಯ್ವಮುಂ, ಪಾಪಮುಂ ಗೀಪಮುಂ, ಮುಪ್ಪುಂ ಗಿಪ್ಪುಂ, ಕುತ್ತಮುಂಗಿತ್ತಮುಂ, ಸಾವುಂ ಗೀವುಂ, ಪೀಡೆಯುಂ ಗೀಡೆಯುಂ, ನೋವುಂ ಗೀವುಂ, ಪುಟ್ಟುಂ ಗಿಟ್ಟುಂ; ಅಜ್ಜಂ ಪಜ್ಜಂ.

ದ್ವಿರುಕ್ತಿಗೆ ಒಂದು ಉದಾ: ಬರಬರ ಬತ್ತುತುಂ, ಬೆದೆಬೆದೆ ಬೆಂದು

(ಧ. ೮-೨೩, ಪು. ೬-೪೧)

## ೭. ಬೈಗುಳಗಳು

ಈ ಕೃತಿಗಳಲ್ಲಿ ಕಂಡುಬರುವ ಬೈಗುಳಗಳ ಸಂಖ್ಯೆ ಹಾಗೂ ವೈವಿಧ್ಯ ತುಂಬ ಕಡಮೆಯೇ. ಗಾಂಪ, ಪಾತಕ (ಪಾತಕಿ), ಕುಲಟೆ, ಮರುಳೆ, ಮೂರ್ಖ, ಪಾಪಿ, ಮಹಾಪಾಪಿ, ಇವು ಇಲ್ಲಿ ಪ್ರಯೋಗವಾಗಿರುವ ಬೈಗುಳಗಳಲ್ಲಿ ಮುಖ್ಯವಾದುವುಗಳು. ಇಂದಿನ ಜಾನಪದಕ್ಕೆ ಹೋಲಿಸಿದರೆ ಬೈಗುಳಗಳ ದೃಷ್ಟಿಯಿಂದ ಜೈನ ಕಥಾ ಸಾಹಿತ್ಯ ಬರಡು ಎನ್ನಬೇಕು.

ಒಟ್ಟಿನಲ್ಲಿ, ಜೈನ ಕಥಾ ಸಾಹಿತ್ಯ ಕೃತಿಗಳು ಜಾನಪದದ ದೃಷ್ಟಿಯಿಂದ ಸಮೃದ್ಧ ಕೋಶಗಳಾಗಿವೆ. ಇಲ್ಲಿ ನಾವು ಕಂಡರಿಸಿರುವುದು ಒಂದು ಸಮೀಕ್ಷೆಯನ್ನು ಮಾತ್ರ. ಜನಪದ ಕತೆಗಳು, ಗಾದೆಗಳು, ದೇಸೀ ನುಡಿಗಟ್ಟುಗಳು, ಪಾರಂಪರಿಕ ನಂಬಿಕೆಗಳು, ಧಾರ್ಮಿಕ ಹಾಗೂ ಸಾಮಾಜಿಕ ನಡವಳಿಕೆಗಳು, ಸಾಮಾಜಿಕ ಸಂಗತಿಗಳು, ಇಂಥ ಹಲವಾರು ದೃಷ್ಟಿಗಳಿಂದ ಜೈನ ಕಥಾ ಸಾಹಿತ್ಯ ಜಾನಪದ ಮೂಲದಿಂದ ಬಹಳಷ್ಟನ್ನು ಉದ್ದೇಶಪೂರ್ವಕವಾಗಿ ಹೀರಿಕೊಂಡಿದೆ. ಇದರಿಂದಾಗಿ ತಾನು ಸತ್ವ ಪೂರಿತವಾಗಿ ಬೆಳೆದಿದೆಯಲ್ಲದೆ ತನ್ನ ರಚನಾಕಾಲದಲ್ಲಿ ಹಾಗೂ ಅದಕ್ಕೂ ಪೂರ್ವದ ಜಾನಪದ ಬದುಕಿನ ಕೋಶಮಾಲಿಕೆಯಾಗಿ ಈ ಕಥಾ ಸಂಗ್ರಹಗಳು ರೂಪುಗೊಂಡಿವೆ ಎಂಬುದು ಇದುವರೆಗಿನ ಸಮೀಕ್ಷೆಯಿಂದ ತಿಳಿದುಬರುತ್ತದೆ. ವಾಸ್ತವವಾಗಿ ದೇಸಿಯನ್ನು ಹೀಗೆ ಬಳಸಿಕೊಳ್ಳುವುದು ಜೈನ ಕವಿಗಳ ಗುರಿಯೂ ಆಗಿತ್ತು. ಪುಣ್ಯಾಸ್ರವದ ಕರ್ತೃ ನಾಗರಾಜನು ತನ್ನ ಕೃತಿಯ ಆರಂಭದಲ್ಲೇ ವ್ಯಕ್ತಪಡಿಸುವ ಈ ಆಶಯ ಪದ್ಯವನ್ನು ಉದಾಹರಿಸುತ್ತ, ನಮ್ಮ ಈವರೆಗಿನ ವಿಶ್ಲೇಷಣೆ ಆ ಆಶಯ ಪೂರ್ಣಗೊಂಡಿರುವುದನ್ನು ಸಾಬೀತುಪಡಿಸಿದೆ ಎನ್ನುತ್ತಾ ನಮ್ಮ ಈ ನಿರೂಪಣೆಯನ್ನು ಕೊನೆಗೊಳಿಸಬಹುದು:

"ಮುನ್ನಿನ ಬಂಧುವರ್ಮ ಗುಣವರ್ಮರ ಜಾಣ್ನುಡಿ ನಾಗಚಂದ್ರನ
ತುನ್ನತಿವೆತ್ತ ದೇಸಿ ನೆಲೆಸಿರ್ಕೆ ಮದೀಯ ಕಥಾ ಪ್ರಬಂಧದೊಳ್"

(ಪುಣ್ಯಾಸ್ರವ: ೧-೮)

○

# ಅನುಬಂಧ

## ಪರಿಶೀಲಿಸಿದ ಜೈನ ಕಾವ್ಯಗಳ ಸಾಮಾನ್ಯ ಪರಿಚಯ

ಈ ಪುಸ್ತಕದಲ್ಲಿ ವಿವೇಚಿಸಲಾಗಿರುವ ಜೈನ ಸಾಹಿತ್ಯ ಕೃತಿಗಳನ್ನು ಪರಿಚಯ ಮಾಡಿಕೊಳ್ಳ ಬಯಸುವವರಿಗೆಂದು ಇಲ್ಲಿ ಅವುಗಳ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ ನೀಡಲಾಗಿದೆ.

### ೧. ಸಮಯ ಪರೀಕ್ಷೆ

ಇದು 'ಬ್ರಹ್ಮಶಿವ' ಎಂಬ ಕವಿಯ ಕೃತಿ. ಈತನ ಕಾಲ ಹನ್ನೆರಡನೇ ಶತಮಾನ ಎಂದು ಬಹಳ ಜನ ವಿದ್ವಾಂಸರು ಒಪ್ಪಿದ್ದಾರೆ.

ಈ ಸಮಯ ಪರೀಕ್ಷೆ ಎಂಬುದು ಹದಿನೈದು ಅಧ್ಯಾಯಗಳ ಒಂದು ವಿಡಂಬನ ಕಾವ್ಯ. ಅಧ್ಯಾಯಗಳನ್ನು ಇಲ್ಲಿ 'ಅಧಿಕಾರಗಳು' ಎನ್ನಲಾಗಿದೆ. ಈ ಕಾವ್ಯವು ಕಂದ, ವೃತ್ತಗಳ ರೂಪದಲ್ಲಿದೆ. ಅನ್ಯಧರ್ಮಗಳ ಖಂಡನೆ ವಿಡಂಬನೆಗಳನ್ನು ಮಾಡುತ್ತಾ, ಜೈನ ಧರ್ಮವು ಉಳಿದವುಗಳಿಗಿಂತ ಹೇಗೆ ಶ್ರೇಷ್ಠ ಎಂಬುದನ್ನಿಲ್ಲಿ ನಿರೂಪಿಸಲಾಗಿದೆ. ಈ ಕಾವ್ಯಕ್ಕೆ ಒಂದು ಮುಖ್ಯ ಕಥೆ ಎಂಬುದಿಲ್ಲ. ಅಷ್ಟೇಕೆ, ಬಿಡಿಬಿಡಿಯಾಗಿ ಕಥೆಗಳ ಉಲ್ಲೇಖವಾಗುವಾಗಲಾದರೂ ವಿವರವಾಗಿ ಆ ಕಥೆಗಳನ್ನು ಹೇಳಿಲ್ಲ. ಸಂಕ್ಷಿಪ್ತವಾಗಿ, ದೃಷ್ಟಾಂತಮಾತ್ರವಾಗಿ, ಗಾದೆಗಳಾಗಿ ಆ ಕಥೆಗಳು ಬಂದಿವೆ. ಆದರೆ ಕಥೆಗಳ ಹೊರತಾಗಿ ಅನ್ಯ ಜಾನಪದ ಸಂಗತಿಗಳು ವಿಪುಲವಾಗಿ ಇಲ್ಲಿ ದೊರೆಕೊಳ್ಳುತ್ತವೆ.

### ೨. ಪುಣ್ಯಾಸ್ರವ:

ಇದನ್ನು ಬರೆದ ಕವಿ ನಾಗರಾಜನೆಂಬುವನು. ಇವನು ಈ ಕೃತಿಯನ್ನು ಕ್ರಿ.ಶ. ೧೩೩೧ರಲ್ಲಿ ಬರೆದು ಮುಗಿಸಿದನೆಂಬುದು ಗ್ರಂಥಾಂತ್ಯದಲ್ಲಿನ ಪದ್ಯದಿಂದ ತಿಳಿದು ಬರುತ್ತದೆ. ಅಂದರೆ ಇವನ ಕಾಲ ಹದಿನಾಲ್ಕನೇ ಶತಮಾನದ ಪೂರ್ವಾರ್ಧ.

ಕನ್ನಡ ಜೈನ ಕಥಾ ಸಾಹಿತ್ಯ ಕೃತಿಗಳಲ್ಲಿ ಇದು ತುಂಬ ಮುಖ್ಯವಾದುದು. ಏಕೆಂದರೆ ಇದರಲ್ಲಿ ಅತಿ ಹೆಚ್ಚು ಸಂಖ್ಯೆಯ, ಅಂದರೆ ೫೭ ಕಥೆಗಳಿವೆ. ಗ್ರಂಥ ಚಂಪೂ ಶೈಲಿಯಲ್ಲಿದೆ. ಆದರೆ ನಡುಗನ್ನಡದ ಪ್ರಭಾವ ಇದರ ಭಾಷೆಯ ಮೇಲೆ ಎದ್ದು ಕಾಣುವ ರೀತಿಯಲ್ಲೇ ಆಗಿದೆ. ಈ ಕೃತಿಯಲ್ಲಿ ಆರು ಅಧ್ಯಾಯಗಳಿದ್ದು ಅವುಗಳನ್ನು ಅಧಿಕಾರಗಳೆಂದು ಕರೆಯಲಾಗಿದೆ.

ಸಂಸ್ಕೃತದಲ್ಲಿ ರಾಮಚಂದ್ರ ಮುಮುಕ್ಷು ಎಂಬಾತನು ರಚಿಸಿದ್ದ 'ಪುಣ್ಯಾಸ್ರವ' ಎಂಬ ಹೆಸರಿನದೇ ಆದ ಕಥಾಕೋಶವಿತ್ತು. ಜನರ ಅಪೇಕ್ಷೆಯ ಮೇರೆಗೆ ನಾಗರಾಜನು ತಾನು ಅದನ್ನು ಕನ್ನಡಿಸಿದ್ದೇನೆಂದು ಹೇಳಿಕೊಂಡಿದ್ದಾನೆ. ಆದರೆ ಹೀಗೆ ಕನ್ನಡಿಸುವಾಗ ಆತನು ಬೇರೆ ಜೈನ ಗ್ರಂಥಗಳಿಂದಲೂ ಸಾಮಗ್ರಿ ಪಡೆದಿದ್ದಾನೆ.

೬. ಧರ್ಮಾಮೃತ:

ಇದು ನಯಸೇನ ಎಂಬ ಕವಿಯ ಕೃತಿ. ಹನ್ನೆರಡನೇ ಶತಮಾನದ ಆರಂಭದಲ್ಲೇ, ಅಂದರೆ ಕ್ರಿ.ಶ. ೧೧೧೨ರಲ್ಲಿ ತನ್ನ ಈ ಕೃತಿಯನ್ನು ರಚನೆ ಮಾಡಿದನು. ಅಂದರೆ 'ಸಮಯ ಪರೀಕ್ಷೆ'ಗಿಂತ ಸ್ವಲ್ಪ ಮೊದಲು ರಚಿತವಾದ ಕೃತಿ ಇದು. ಬ್ರಹ್ಮಶಿವ ಹಾಗೂ ನಯಸೇನರಿಬ್ಬರೂ ಸಮಕಾಲೀನರು.

ನಯಸೇನ ಈ ಕೃತಿ ರಚನೆ ಮಾಡಿದ್ದು ಇಂದಿನ ಗದಗಕ್ಕೆ ಸಮೀಪವಾಗಿರುವ ಮುಳುಗುಂದ ಎಂಬ ಗ್ರಾಮದಲ್ಲಿ. ಈಗಲೂ ಅಲ್ಲಿ ಸೊಗಸಾದ ವಾಸ್ತುವಿನಿಂದ ಕೂಡಿದ ಎರಡು ಬಸದಿಗಳಿವೆ.

ಧರ್ಮಾಮೃತ - ಚಂಪೂ ಶೈಲಿಯ ಕೃತಿ. ಹದಿನಾಲ್ಕು ಆಶ್ವಾಸಗಳಿವೆ. ಭಾಷೆಯ ದೃಷ್ಟಿಯಿಂದ ಈ ಕೃತಿಯಲ್ಲಿರುವಷ್ಟು ಜಾನಪದೀಯತೆ ಉಳಿದಾವ ಹಳಗನ್ನಡ ಕೃತಿಯಲ್ಲೂ ಇಲ್ಲ ಎನ್ನಬಹುದು. ಪ್ರತಿ ಆಶ್ವಾಸದಲ್ಲೂ ಒಂದೊಂದು ಮುಖ್ಯ ಕಥೆ ಇದ್ದು, ಕೆಲವೆಡೆ ಭವಾವಳಿ ಇತ್ಯಾದಿಗಳು ಸೇರಿಕೊಳ್ಳುತ್ತವೆ. ವ್ಯಕ್ತಿಗಳು ಅನುಸರಿಸಬೇಕಾದ ವ್ರತ, ನಿಯಮಗಳು, ಅದರಿಂದ ದೊರೆವ ಫಲ ಇವುಗಳನ್ನು ಹೇಳುತ್ತಾ, ಹಾಗೆ ಅನುಸರಿಸಿ ಉತ್ಕೃಷ್ಟ ಫಲ ಪಡೆದವರ ಕತೆಗಳನ್ನು ಕವಿ ಇಲ್ಲಿ ಹೇಳುತ್ತಾ ಹೋಗಿದ್ದಾನೆ.

## ೪. ಧರ್ಮಪರೀಕ್ಷೆ

ಇದು ವೃತ್ತವಿಲಾಸನೆಂಬ ಕವಿಯ ಕೃತಿ. ಈ ಕೃತಿ ರಚನೆಯಾಗಿದ್ದು ಕ್ರಿ.ಶ. ಸುಮಾರು ೧೩೬೦ರಲ್ಲಿ. ಇದೊಂದು ಚಂಪೂಕಾವ್ಯ. ನಯಸೇನ, ಬ್ರಹ್ಮಶಿವರಲ್ಲಿ ಇರುವಂತೆ ಇಲ್ಲಿಯೂ ಅನ್ಯಮತ ವಿಡಂಬನೆ ಇದೆ. ವೃತ್ತವಿಲಾಸನು ವೈದಿಕಧರ್ಮ, ಶಾಸ್ತ್ರ, ಪುರಾಣಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ, ಅವುಗಳನ್ನು ಖಂಡಿಸಿ ಜೈನಮತವನ್ನು ಸಮರ್ಥಿಸಲು ಹೊರಟಿರುವುದು ಇಲ್ಲಿ ವ್ಯಕ್ತವಾಗುತ್ತದೆ. ವೈದಿಕ ಪುರಾಣಗಳಲ್ಲಿರುವ ಸಂಗತಿಗಳನ್ನು ವಿಡಂಬಿಸುವುದು ಇವನ ಮುಖ್ಯ ಗುರಿ.

ಕಾವ್ಯವು ಒಟ್ಟು ಹತ್ತು ಸಂಧಿಗಳಲ್ಲಿದೆ. ಮನೋವೇಗನೆಂಬುವನು ತನ್ನ ಗೆಳೆಯನಾದ ಪವನವೇಗನನ್ನು ಕರೆದುಕೊಂಡು ಎಂಟುದಿನಗಳ ಕಾಲ ದಿನವೂ ಪಾಟಲೀಪುತ್ರಕ್ಕೆ ಹೋಗಿ ಅಲ್ಲಿ ಬ್ರಹ್ಮಸಭೆಯಲ್ಲಿದ್ದ ಪಂಡಿತರುಗಳನ್ನು ವಾದದಲ್ಲಿ ಸೋಲಿಸುವುದು ಇಲ್ಲಿನ ಮುಖ್ಯ ಘಟನೆ. ಹೀಗೆ ವಾದ ಮಾಡುವ ಸಂದರ್ಭದಲ್ಲಿ ಅನೇಕ ಕಥೆಗಳನ್ನು ಮಂಡಿಸಲಾಗುತ್ತದೆ. ಹೀಗೆ ೨೧ ಕತೆಗಳು ಇಲ್ಲಿ ಸಮಾವೇಶಗೊಂಡಿವೆ.

## ೫. ಸಮ್ಯಕ್ತ್ವ ಕೌಮುದಿ

ಈ ಹೆಸರಿನ ಮೂರು ಗ್ರಂಥಗಳು ಕನ್ನಡದಲ್ಲಿವೆ. ಆದರೆ ಮೂರನೆಯ ಮಂಗರಸ ಕವಿ ಬರೆದ ಕೃತಿ ನಮಗೆ ಪ್ರಸ್ತುತವಾದದ್ದು. ಈತನ ಕಾಲ ಕ್ರಿ.ಶ. ಸು. ೧೫೦೮. ಮೈಸೂರು ಅರಸುಮನೆತನಕ್ಕೆ ಸಂಬಂಧಿಸಿದವನು. ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿ ಇವನ ಊರು. ಸಾಹಿತಿ ಚದುರಂಗರು, ದಿ। ದೇವರಾಜ ಅರಸರು -ಇವನ ವಂಶಸ್ಥರು.

ಈ ಷಟ್ಪದಿ ಕಾವ್ಯದಲ್ಲಿ ಹದಿನಾರು ಕಥೆಗಳಿವೆ. ರಾಜನೊಬ್ಬನು ಈ ಕಥೆಗಳನ್ನು ಕೇಳಿ ಮನಃಪರಿವರ್ತನೆಗೊಂಡನೆಂಬುದು ಈ ಕಥೆಗಳನ್ನು ಒಟ್ಟಿಗೆ ಪೋಣಿಸಿರುವ ಸೂತ್ರವಾಗಿದೆ. ಇಲ್ಲಿನ ಕೆಲವು ಕಥೆಗಳು ಪುಣ್ಯಾಸ್ರವದಲ್ಲೂ ಇವೆ.

## ೬. ಜೀವಸಂಬೋಧನಂ

ಇದೊಂದು ವಿಶಿಷ್ಟ ಬಗೆಯ ಚಂಪೂಕಾವ್ಯ. ಕ್ರಿ.ಶ. ೧೨ನೇ ಶತಮಾನದಲ್ಲಿದ್ದ ಬಂಧುವರ್ಮ ಇದರ ಕರ್ತೃ. ಹಳಗನ್ನಡದಲ್ಲಿದೆ. ಕವಿಯು ತನ್ನ ಆತ್ಮವನ್ನು

ಸಂಬೋಧಿಸಿ ಒಳ್ಳೆಯ ತತ್ವಗಳನ್ನು ಸದಾ ಮನನ ಮಾಡುವಂತೆ ಹೇಳುತ್ತಾ, ಒಂದೊಂದು ತತ್ವಕ್ಕೂ ಒಂದೊಂದು ಕಥೆಯನ್ನು ಹೇಳುವುದು ಇಲ್ಲಿನ ತಂತ್ರ. ಸಗರ ಚಕ್ರವರ್ತಿಯ ಕಥೆ, ಮುಂಡ ಕೌಶಿಕನ ಕಥೆ, ವರಾಂಗನ ಕಥೆ, ರಾವಣನ ಕಥೆ, ವಸಂತ ತಿಲಕೆಯ ಕಥೆ -ಮೊದಲಾದ ಸುಮಾರು ಹದಿನೆಂಟು ಕಥೆಗಳು (ಉಪಕಥೆಗಳೂ ಸೇರಿ ಇಲ್ಲಿವೆ.)

## ಆಧಾರ ಗ್ರಂಥಗಳು

೧. ನಾಗರಾಜ ಕವಿ ವಿರಚಿತ ಪುಣ್ಯಾಸ್ರವ
- ಸಂ. ದೇ. ಜವರೇಗೌಡ
ಪ್ರ: ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿ.ವಿ. ೧೯೭೭.

೨. ವೃತ್ತವಿಲಾಸ ವಿರಚಿತ ಧರ್ಮಪರೀಕ್ಷೆ
- ಸಂ. ಡಾ.ಕೆ. ರಾಘವೇಂದ್ರರಾವ್
ಪ್ರ: ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿ.ವಿ. ೧೯೮೨.

೩. ನಯಸೇನ ವಿರಚಿತ ಧರ್ಮಾಮೃತಂ
- ಸಂ. ಕೆ. ವೆಂಕಟರಾಮಪ್ಪ
ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೮.

೪. ಕವಿ ಬ್ರಹ್ಮಶಿವ - ಒಂದು ಅಧ್ಯಯನ
ಲೇ. ಡಾ.ಕೆ. ಅನಂತರಾಮು
ಪ್ರ: ಅನಂದ ಪ್ರಕಾಶನ, ೪೧೪, ದೇವಾಂಬಾ ಅಗ್ರಹಾರ,
ಮೈಸೂರು - ೨೪, ೧೯೯೧.

೫. ಕನ್ನಡ ಜೈನ ಕಾವ್ಯಗಳಲ್ಲಿನ ಜಾನಪದ ಕತೆಗಳು - ಒಂದು ಅಧ್ಯಯನ
ಲೇ. ಡಾ. ಎಂ.ಎ. ಜಯಚಂದ್ರ
ಪ್ರ: ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು, ೧೯೯೫.

೬. ಮೂರನೆಯ ಮಂಗರಸಕವಿಯ -ಸಮ್ಯಕ್ತ್ವ ಕೌಮುದಿ
ಸಂ: ಡಾ.ಬಿ.ಬಿ. ಮಹೀಶವಾಡಿ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ.
ಧಾರವಾಡ, ೧೯೭೬.

೭. ಬಂಧುವರ್ಮ ವಿರಚಿತ-ಜೀವಸಂಬೋಧನಂ
ಸಂ: ಬಿ.ಎಸ್. ಸಣ್ಣಯ್ಯ
ಪ್ರ: ಸಿದ್ಧಾಂತಕೀರ್ತಿ ಗ್ರಂಥಮಾಲೆ
ಹೊಂಬುಜ, ೧೯೯೬.